॥ ಶ್ರೀ ಸೂಗೂರೇಶ್ವರ ಪ್ರಸೀದಂತು ॥

ವಚನಾಮೃತ

(ಶಿವಶಕ್ತಿಪ್ರಿಯ ಶ್ರೀ ದೇವಸೂಗೂರ ವೀರೇಶನ ವಚನಗಳು)

ಲೇಖಕರು :

ಶ್ರೀ ಶಿವಣ್ಣ ಪಾಣಿ, (ದೇವತ್ಕಲ್)

ವಚನಕಾರರು, ರಾಯಚೂರು.

ಪ್ರಕಾಶಕರು:

ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿ

ಬಳ್ಳಾರಿ

ವಚನಾಮೃತ

(ಶಿವಶಕ್ತಿಪ್ರಿಯ ಶ್ರೀ ದೇವಸೂಗೂರ ವೀರೇಶನ ವಚನಗಳು)

ಲೇಖಕರು	:	**ಶ್ರೀ ಶಿವಣ್ಣ ಪಾಣಿ, (ದೇವತ್ಕಲ್)** ವಚನಕಾರರು, ರಾಯಚೂರು.
ಪ್ರಕಾಶಕರು	:	**ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿ,** ಬಳ್ಳಾರಿ
ಮೊದಲಮುದ್ರಣ	:	2024
ಪ್ರತಿಗಳು	:	1000
ಪುಸ್ತಕದ ಅಳತೆ	:	1/8 ಡೆಮಿ
ಬಳಸಿದ ಕಾಗದ	:	70 ಜಿ.ಎಸ್.ಎಮ್.
ಪುಟಗಳು	:	v
ಹಕ್ಕುಗಳು	:	ಲೇಖಕರದ್ದು
ಬೆಲೆ	:	ಅಮೂಲ್ಯ
ಮುಖಪುಟ ವಿನ್ಯಾಸ ಮತ್ತು ಮುದ್ರಣ	:	**ಬಿ.ಜಿ. ಪ್ರಿಂಟರ್ಸ್,** ಧಾರವಾಡ. 98452 70114

॥ ಶ್ರೀ ಸೂಗೂರೇಶ್ವರ ಪ್ರಸೀದಂತು ॥



ಅರ್ಪಣೆ

ನಂಬಿದ ಭಕ್ತಂಗೆ ಇಷ್ಟ ದೈವವಾಗಿ,
ಅನಾಥಂಗೆ ನಾಥನಾಗಿ, ಶಿಷ್ಯಂಗೆ ಗುರುವಾಗಿ,
ಅಂಗಕ್ಕೆ ಅಂಗವಾಗಿ, ಜಂಗಮಕ್ಕೆ ಮಹಾಜಂಗಮನಾಗಿ
ಸದ್ಭಕ್ತರನು ಸದಾ ಪೊರೆಯುವ, ದೇವರ ದೇವ,
ದಯಾನಿಧಿ ನಮ್ಮಪ್ಪ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶನ ಪರಮ ಪವಿತ್ರ ಪ್ರಜ್ವಲಿಪ ಪಾದಾರವಿಂದಗಳಿಗೆ
ಈ ವಚನಾಮೃತ ಭಕ್ತಿಪೂರ್ವಕ ಸಮರ್ಪಣೆ.

॥ ಶ್ರೀ ಜಗದ್ಗುರು ರೇಣುಕಾಚಾರ್ಯ: ಪ್ರಸೀದತು ॥

ಮಾನವ ಧರ್ಮಕ್ಕೆ ಜಯವಾಗಲಿ । ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ॥



ಸಾಹಿತ್ಯ-ಸಂಸ್ಕೃತಿ ಸಂವರ್ಧಿಸಲಿ । ಶಾಂತಿ-ಸಮೃದ್ಧಿ ಸರ್ವರಿಗಾಗಲಿ ॥



ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು

ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ

ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು,

ಬಾಳೆಹೊನ್ನೂರು-577112, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ ರಾಜ್ಯ

ದಿನಾಂಕ: 09-02-2024 ವಾಸ್ತವ್ಯ : ಬೆಂಗಳೂರು

ಶುಭಾಶೀರ್ವಾದ ಸಂದೇಶ

ಸಂತಸ ಮತ್ತು ಶಾಂತಿಯ ಬದುಕಿಗೆ ಆಧ್ಯಾತ್ಮದ ಅರಿವು ಬೇಕು. ಮಾನವೀಯ ಸಂಬಂಧಗಳು ಗಟ್ಟಿಗೊಳ್ಳಲು ಹೃದಯ ಶ್ರೀಮಂತಿಕೆ ಬೇಕು. ಬದುಕಿನ ಯಶಸ್ವಿಗಾಗಿ ಲೌಕಿಕ ಜ್ಞಾನ ಹೇಗೆ ಅವಶ್ಯಕವೋ ಹಾಗೆಯೇ ನೊಂದ ಬೆಂದ ಮನಕ್ಕೆ ಆಧ್ಯಾತ್ಮಿಕ ಜ್ಞಾನ ಅವಶ್ಯಕವಾಗಿದೆ. ವ್ಯಕ್ತಿತ್ವ ಕಳೆದುಕೊಂಡು ಮನುಷ್ಯ ಪ್ರಪಂಚ ಗೆಲ್ಲಬೇಕಾಗಿಲ್ಲ. ವ್ಯಕ್ತಿತ್ವ ಚಿನ್ನ ಬೆಳ್ಳಿಗಿಂತ ಹೆಚ್ಚು ಬೆಲೆ ಬಾಳುವಂತಹುದು. ಭೌತಿಕ ಬದುಕಿಗೆ ಶ್ರದ್ಧೆ ಆಸಕ್ತಿ ಪರಿಶ್ರಮ ಬೇಕು. ಪಾರಮಾರ್ಥಿಕ ಬದುಕಿಗೆ ಜ್ಞಾನ ಸತ್ಕರ್ಮಾನುಷ್ಠಾನ ಬೇಕು. ಮನಸ್ಸು ಪರಿಶುದ್ಧವಾಗಿದ್ದರೆ ಸಂತೋಷ ನೆರಳಿನಂತೆ ನಮ್ಮನ್ನು ಹಿಂಬಾಲಿಸುತ್ತದೆ. ಯಶಸ್ಸು ಪಡೆಯಲು ಉತ್ತಮ ಸ್ನೇಹಿತರಿರಬೇಕು. ಉನ್ನತ ಸಾಧನೆಗಾಗಿ ಶತ್ರುಗಳು ಇರಬೇಕು. ಶ್ರಮದ ಬೆವರಿನ ಫಲ ಶಾಶ್ವತ ಮತ್ತು ಸುಖದಾಯಕ ಎಂಬುದನ್ನು ಮರೆಯಬಾರದು.

ಮೌಢ್ಯ ಎಂಬ ಅಂಧಕಾರವನ್ನು ತೊರೆದು ಜ್ಞಾನ ಎಂಬ ದೀಪ ಹಚ್ಚಬೇಕು. ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳೆರಡೂ ಇವೆ. ದೈವೀ ಗುಣಗಳನ್ನು ಬೆಳೆಸಿಕೊಂಡಾಗ ಅಸುರೀ ಗುಣಗಳು ನಾಶಗೊಳ್ಳುತ್ತವೆ. ನಾವಿಕ ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಹಡಗು ಸಾಗಬಹುದು. ಆದರೆ ಗುರಿ ತಲುಪಲು ಸಾಧ್ಯವಾಗದು. ಆಧುನಿಕ ಜಗದಲ್ಲಿ ಮನುಷ್ಯ ಯಂತ್ರದಂತೆ ದುಡಿದರೂ ಜೀವನದಲ್ಲಿ ಶಾಂತಿ ನೆಮ್ಮದಿಯಿಲ್ಲ. ಜೀವನ ವಿಕಾಸಕ್ಕೆ ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ದಶಧರ್ಮ ಸೂತ್ರಗಳ ಪರಿಪಾಲನೆ ಬಹಳ ಮುಖ್ಯ. ಗುರಿಯಿಲ್ಲದ ಮತ್ತು ಗುರಿ

ಸಾಧಿಸದ ಜೀವನ ನಿರರ್ಥಕ. ಪ್ರಾಣ ಯೌವನ ಕಾಲ ಒಮ್ಮೆ ಕಳೆದರೆ ಮತ್ತೆಂದೂ ತಿರುಗಿ ಬರಲಾರವು. ಸದ್ವಿದ್ಯೆ ಉತ್ತಮ ಸಂಬಂಧ ಮತ್ತು ಆದರ್ಶ ಸ್ನೇಹ ಯಾವಾಗಲೂ ನಮ್ಮೊಂದಿಗೆ ಇದ್ದರೆ ಬಾಳೆಲ್ಲ ಸುಖಮಯ.

ಆಧುನಿಕ ವಿಜ್ಞಾನ ಎಲ್ಲಿ ನಿರುತ್ತರವಾಗುವುದೋ ಅಲ್ಲಿಂದ ಭಾರತೀಯ ಆಧ್ಯಾತ್ಮ ಚಿಂತನೆ ಪ್ರಾರಂಭಗೊಳ್ಳುತ್ತದೆ ಎಂಬ ಡಾ|| ಎಸ್. ರಾಧಾಕೃಷ್ಣನ್ ಅವರ ಮಾತು ಸತ್ಯ. ವೀರಶೈವ ಧರ್ಮ ಅತ್ಯಂತ ಪ್ರಾಚೀನ. 28 ಶಿವಾಗಮಗಳ ಉತ್ತರ ಭಾಗದಲ್ಲಿ ವೀರಶೈವ ಧರ್ಮದ ಹಿರಿಮೆ ಮತ್ತು ಗುರು ಪರಂಪರೆಯ ಆದರ್ಶಗಳನ್ನು ಕಾಣಬಹುದು. ವೀರಶೈವ ಧರ್ಮದಲ್ಲಿ ವೀರ, ನಂದಿ, ಭೃಂಗಿ, ವೃಷಭ ಮತ್ತು ಸ್ಕಂದ ಎಂಬ ಪಂಚ ಗೋತ್ರ ಪುರುಷರಿದ್ದಾರೆ. ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಗೋತ್ರಪುರುಷನಾಗಿ ಶ್ರೀ ವೀರಭದ್ರಸ್ವಾಮಿ ಪೂಜೆಗೊಳ್ಳುತ್ತಿದ್ದಾನೆ. ಆತನ ಶಕ್ತಿ ಅದ್ಭುತ. ಎಲ್ಲೆಡೆಯಲ್ಲಿ ನೆಲೆನಿಂತು ಭಕ್ತ ಸಂಕುಲವನ್ನು ಸಂರಕ್ಷಿಸುತ್ತಾನೆ. ದೇವಸುಗೂರಿನಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿ ನೆಲೆಗೊಂಡಿದ್ದಾನೆ. ಆತನ ಲೀಲೆ ಪವಾಡಗಳು ಅನಂತ.

ರಾಯಚೂರು ನಗರದ ಶ್ರೀ ಶಿವಣ್ಣ ಪಾಣಿ ಅವರು "ವಚನಾಮೃತ" ನಾಮಾಂಕಿತದಲ್ಲಿ 365 ವಚನಗಳನ್ನು ರಚಿಸಿ ಭಕ್ತ ಸಮೂಹಕ್ಕೆ ಕೊಟ್ಟಿದ್ದಾರೆ. **"ಶಿವಶಕ್ತಿ ಪ್ರಿಯ ಶ್ರೀ ದೇವಸುಗೂರ ವೀರೇಶ"** ವಚನಾಂಕಿತದೊಂದಿಗೆ ರಚಿಸಿದ ಪ್ರತಿಯೊಂದು ವಚನಗಳು ಬದುಕಿ ಬಾಳುವ ಜನ ಸಮುದಾಯಕ್ಕೆ ಜೀವ ಸಂಜೀವಿನಿಯಾಗಿವೆ. ಶ್ರೀಯುತರ ಅನುಭವ ಆಧ್ಯಾತ್ಮದ ಅರಿವು ಯುವ ಜನಾಂಗಕ್ಕೆ ದಾರಿದೀಪ. ನೂರಾ ಹನ್ನೊಂದು ವಚನಗಳನ್ನು ಅವಲೋಕನ ಮಾಡಿ ನೋಡಿದಾಗ ಎಲ್ಲರ ಮನಸ್ಸಿಗೆ ಸಂತೋಷವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಶ್ರೀ ಶಿವಣ್ಣ ಪಾಣಿ ಅವರ ಆಧ್ಯಾತ್ಮ ಚಿಂತನ ಮತ್ತು ವಚನ ರಚನಾ ಕಾರ್ಯ ನಿರಂತರವಾಗಿ ನಡೆದು ಜೀವ ಸಂಕುಲಕ್ಕೆ ಶಾಂತಿ ಸೌಭಾಗ್ಯವನ್ನು ಉಂಟು ಮಾಡಲಿ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಸರ್ವರಿಗೂ ಮಂಗಲ ಪರಂಪರೆಯನ್ನು ಅನುಗ್ರಹಿಸಲಿ.


ಶುಭಾಶೀರ್ವಾದಗಳೊಂದಿಗೆ,

– ಶ್ರೀ ರಂಭಾಪುರಿ ಜಗದ್ಗುರುಗಳು,

ಬಾಳೆಹೊನ್ನೂರು



ಆಶೀರ್ವಚನ



ಶ್ರೀಯುತ ಶಿವಣ್ಣ ಪಾಣಿಯವರು ಧರ್ಮ, ನೀತಿ, ನ್ಯಾಯದಿಂದ ಬಾಳಿದ ಸಾತ್ವಿಕ ಮನೆತನದವರಾಗಿದ್ದು ಅದು ಅವರ ಜೀವನದುದ್ದಕ್ಕೂ ಹಾಸುಹೊಕ್ಕಾಗಿ ಬಂದಿದೆ. ಸಾಹಿತ್ಯ-ಸಂಸ್ಕೃತಿ ಬಗ್ಗೆ ಅಪಾರ ಕಾಳಜಿ. ಗುರು-ಹಿರಿಯರ ಮಠ-ಮಂದಿರಗಳ ಬಗ್ಗೆ ಅಪಾರ ಗೌರವವಿದೆ.

ಪ್ರಸ್ತುತ "ವಚನಾಮೃತ" ಕೃತಿಯಲ್ಲಿ ಮುನ್ನೂರ ಅರವತ್ತೈದು ವಚನಗಳನ್ನು **"ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ"** ಎಂಬ ಅಂಕಿತದೊಂದಿಗೆ ರಚಿಸಿದ್ದು ಎಲ್ಲಾ ವಚನಗಳು ಇಂದಿನ ಕಾಲಘಟ್ಟಕ್ಕೆ ಅನುಗುಣವಾಗಿವೆ. ಅತ್ಯಂತ ಮೃದು ಮಧುರ ಶೈಲಿಯಲ್ಲಿ ಜನಸಾಮಾನ್ಯರನ್ನು ಆಕರ್ಷಿಸುತ್ತವೆ.

ಸುಖ ನೀನಿತ್ತ ಭಿಕ್ಷೆ, ದುಃಖ ನೀನಿತ್ತ ಪರೀಕ್ಷೆ
ನೀನಿತ್ತ ಭಿಕ್ಷೆಯನುಂಡು ಅನ್ಯರ ಹೊಗಳುವ
ಕುನ್ನಿ ನಾನಾಗಲಾರೆನಯ್ಯ...........

ಎಂದು ವಿನಮ್ರತೆ, ಭಾವ ಭಕ್ತಿ ಮೆರೆದಿದ್ದಾರೆ.

ರೇಣುಕ ಪೀಠದ ಗೋತ್ರಪುರುಷ ಶ್ರೀವೀರಭದ್ರ
ವೀರಶೈವ ಮೂಲಪುರುಷ ಶ್ರೀವೀರಭದ್ರ
ಹಸಿರೇ ಉಸಿರೆಂದು ಕೃಷಿಕಾಯಕ ತೋರಿದ ಶ್ರೀವೀರಭದ್ರ......

ಎಂದು ತಮ್ಮ ಆರಾಧ್ಯ ದೈವವನ್ನು ಹಾಡಿ ಹೊಗಳಿದ್ದಾರೆ.

ಇವರ **"ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ"** ಎಂಬ ಧ್ವನಿಮುದ್ರಿಕೆಗೆ ಸೊಗಸಾದ ಸಾಹಿತ್ಯ ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ನಮ್ಮ ಮನಸೂರೆಗೊಂಡಿದೆ, ಆಗಾಗ ನಾವು ಕೇಳುತ್ತಲೇ ಇರುತ್ತೇವೆ.

ಶ್ರೀಯುತರು ನಮ್ಮ ಮಠದ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಸೇವೆಯನ್ನು ಅರ್ಪಿಸುತ್ತಿರುವುದು ಅವರ ಹೃದಯ ಶ್ರೀಮಂತಿಕೆಯ ದ್ಯೋತಕವಾಗಿದೆ.

ಮಲ್ಲಿಗೆ ಹೂವಿನ ಮನಸ್ಸಿನ ಶಿವಣ್ಣ ಪಾಣಿಯವರು ಸೃಜನಶೀಲತೆಯ ಈ ವಚನಾಮೃತ ಕನ್ನಡ ಸಾರಸ್ವತ ಸತ್ವಲೋಕಕ್ಕೊಂದು ಅಮೂಲ್ಯ ಕೃತಿ. ಅತ್ಯಂತ ಮೃದು ಮಧುರ ಶೈಲಿಯ ಈ ವಚನ ಸಂಕಲನ ನಮಗೆ ಅತ್ಯಂತ ಆನಂದವನ್ನುಂಟು ಮಾಡಿದೆ. ಜನಸಾಮಾನ್ಯರ ಮನಕ್ಕೆ ತಲುಪುವುದರಲ್ಲಿ ಯಾವ ಅನುಮಾನವೇ ಇಲ್ಲ.

ದಯಾಮಯನಾದ ಶ್ರೀ ದೇವಸೂಗೂರೇಶ ಜಗದಾದಿ ಜಗದ್ಗುರು ಶ್ರೀ ರೇಣುಕ ಭಗವತ್ಪಾದರು ಶಿವಣ್ಣ ಪಾಣಿಯವರಿಗೆ ಶ್ರೀ ರಕ್ಷೆಯಾಗಿ ನಿಂತು ಅವರಿಂದ ಇನ್ನೂ ಅನೇಕ ಕೃತಿಗಳು ಮೂಡಿಬರಲೆಂದು ತುಂಬು ಮನದಿಂದ ಹಾರೈಸುತ್ತೇವೆ.

ಶುಭಂ ಮಂಗಲಂ

– ಶ್ರೀ ಷ.ಬ್ರ ಅಭಿನವ ರಾಚೋಟಿವೀರ ಶಿವಾಚಾರ್ಯರು

ಸೋಮವಾರಪೇಟೆ ಮಠ, ರಾಯಚೂರು.

ಮುನ್ನುಡಿ

ಅಜಾನುಬಾಹು, ಅಗಲ ಹಣೆ, ನೀಳನಾಶಿಕ, ಗೌರವ ವರ್ಣ ಜೊತೆಗೆ ಹೃದಯವಂತಿಕೆಯನ್ನು ಹೊಂದಿದ ಶಿವಣ್ಣನವರು ಅಜಾತಶತ್ರು, ಸರ್ವರೊಡನೆ ಪ್ರೀತಿ, ವಿಶ್ವಾಸ ಹಾಗೂ ಆತ್ಮೀಯತೆಯೊಡನೆ ಮನಸ್ಸು ತುಂಬಿ ಮಾತನಾಡುವ ನಗೆಮೊಗದ ಭಾವವನ್ನು ಅಭಿವ್ಯಕ್ತಿ ಪಡಿಸುವ ಅಪೂರ್ವ ಭಾವನಾಜೀವಿ.

ದೇವಸೂಗೂರಿನ ಆರಾಧ್ಯ ದೈವ ದೇವಸೂಗೂರೇಶ್ವರನ ದಿವ್ಯಚೇತನಕ್ಕೆ ಶಿವಣ್ಣ ಪಾಣಿಯವರಿಗೆ ಅಪಾರ ಭಕ್ತಿ. ಬಾಲ್ಯದಿಂದಲೇ ತಂದೆ, ತಾಯಿ, ಗುರುಗಳಿಂದ ಸಾತ್ವಿಕತೆ, ಸುಸಂಸ್ಕೃತತೆ ಹಾಗೂ ಅಂತಃಕರಣ ಮನೋಭಾವಗಳಿಂದ ಬದುಕನ್ನು ಸಂತೃಪ್ತಿಯಿಂದ ರೂಪಿಸಿಕೊಂಡವರು. ಅದಕ್ಕೆ ಅವರ ಶ್ರೀಮತಿಯವರ ತುಂಬು ಹೃದಯದ ಸಹಾಯ, ಸಹಕಾರ ಅವರ ಮನೆಯನ್ನು ನಂದಗೋಕುಲವಾಗಿಸುವಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಶಿವಣ್ಣ ಪಾಣಿಯವರು ಮೂಲತಃ ಕವಿ. ಒಳಿತನ್ನು ನೋಡುವ, ಒಳಿತನ್ನು ಕೇಳುವ, ಒಳಿತನ್ನು ನುಡಿಯುವ ಅಪ್ಪಟ ಸೃಜನಶೀಲ ಲೇಖಕರು. ಮತ್ತೊಂದು ವಿಶೇಷ ತಪ್ಪು ಕಂಡಾಗ ತಕ್ಷಣ ಸ್ಪಂದಿಸುವ ಸ್ವಭಾವದವರು ಬಹುಶಃ ಅದು ಅವರ ಅಪ್ಪಟ ವ್ಯಕ್ತಿತ್ವಕ್ಕೆ ಸಾಕ್ಷಿ.

ಮುನ್ನೂರ ಅರವತ್ತೈದು ಧಾರ್ಮಿಕ ಮತ್ತು ಸಾಮಾಜಿಕ ವಚನಗಳ *"ವಚನಾಮೃತ"* ವಚನ ಸಂಕಲನದಲ್ಲಿ ಅವರ ಪರಿಪೂರ್ಣ ಸಾಹಿತ್ಯದ ಮನೋ ಭೂಮಿಕೆ ಸಾಕಾರಗೊಂಡಿದೆ. ಓತೋಪ್ರೋತವಾಗಿ ಹರಿಯುವ ಭಾವ ತೀವ್ರತೆಯ ಪ್ರವಾಹ ಭಕ್ತಿರಸದಲ್ಲಿ ಮಿಂದು ಮೈದಾಳಿದೆ. ದೇವಸೂಗೂರೇಶ್ವರನನ್ನು ಅನನ್ಯ ರೀತಿಯಲ್ಲಿ ಮುಕ್ತ ಕಂಠದಿಂದ ಸ್ತುತಿಸಿದ ರೀತಿ ನಿಜಕ್ಕೂ ಶ್ಲಾಘನೀಯ.

"ಅರಿವು ಮರೆತ ದಕ್ಷ ಕುರಿತಲೆಯ ಹೊಂದಿದ,
ಅರಿವು ಅರಿತ ಶ್ರೀಹರಿ ಚಕ್ರ ಸಂಪಾದಿಸಿದ,
ಅರಿವಿನ ಅಂತಃಕರಣಕೆ ಗಣಪದವಿ ಸಿಕ್ಕಿತು ಗಣಪಂಗೆ,
ಅರಿವು ಅರಿತ ಮಾರುತಿಗೆ ಲಿಂಗ ದೀಕ್ಷೆ ಸಿದ್ದಿಸಿತು,

ಅರಿವಿನ ಹಿರಿಮೆಗೆ ಅಹಂಕಾರ ಕಿಂಚಿತ್ತೂ ಬಾರದು,
ಅರಿವುಗೆಟ್ಟಾಗ ದುರಹಂಕಾರಕೆ ಪುಷ್ಠಿ ದೊರೆಯುವುದು,
ಕೊಡುಗೈ ಧೀರ ಕರುಣಾವಾರಿಧಿ ಶಿವಶಕ್ತಿ ಪ್ರಿಯ–
ದೇವಸೂಗೂರು ವೀರೇಶನ ಚರಣಕಮಲ ಅರಿತು
ಭಜಿಸಿದೊಡೆ ಸ್ಥಿರಮುಕ್ತಿ ಶಾಶ್ವತವಹುದು."

ಶಿವಣ್ಣ ಪಾಣಿಯವರ ಪ್ರತಿಯೊಂದು ವಚನಗಳಲ್ಲಿ ಅರ್ಪಣಾ ಮನೋಭಾವ ಮತ್ತು ಪ್ರಸಾದಿಕ ವಾಣಿ ಮೇಲೈಸಿವೆ.

"ಅಯ್ಯಾ.. ನೀನಿರಿಸಿದಂತೆ ನಾನಿರುವೆನಯ್ಯಾ
ನೀ ನುಡಿಸಿದಂತೆ ನಾ ನುಡಿವೆನಯ್ಯಾ,
ನೀ ನಡೆಸಿದಂತೆ ನಾ ನಡೆವೆನಯ್ಯಾ,
ನೀ ನೀಡಿದ್ದು ಎನಗೆ ಮಹಾ ಪ್ರಸಾದವಯ್ಯಾ,
ಈ ಜಡ ದೇಹಕ್ಕೆ ನೀನೇ ದಿವ್ಯಚೇತನ ನೋಡಯ್ಯಾ,
ಎನಗೆ ಗುರು, ಲಿಂಗ, ಜಂಗಮನಾಗಿ, ಕಂಗೊಳಿಪ
ದೇವಾದಿದೇವ ಮಹಾದೇವ ನೀನಯ್ಯಾ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ ನಿಮ್ಮ
ಭದ್ರ ಪಾದಗಳಡಿಯಲಿರ್ದು ನಿಶ್ಚಿಂತನಾಗಿರ್ಪೆನಯ್ಯಾ."

ಎಲ್ಲವನ್ನು ದೇವಸೂಗೂರೇಶ್ವರನಿಗೆ ಅರ್ಪಿಸಿದ ಮುಗ್ಧ ಭಕ್ತನ ನಿರ್ಮಲ ಮನಸ್ಸು ಸಂತೃಪ್ತಿಯ ಸಂಕೇತದ ಕುರುಹಾಗಿದೆ ಈ ವಚನದಲ್ಲಿ

"ಆಡುವ ನುಡಿಯಲಿ ನಿಮ್ಮ ಧ್ಯಾನದ ಅರ್ಥವಿರಲಿ.
ನೋಡುವ ನೋಟದಲಿ ನಿಮ್ಮ ಕಾಣುವ ಬಯಕೆ ಇರಲಿ.
ಮಾಡುವ ಕಾರ್ಯದಲಿ ನಿಮ್ಮ ಸೇವಾಭಾವವಿರಲಿ,
ಬೇಡುವ ಮನದಲಿ ನಿಮ್ಮ ನೆನಹು ತುಂಬಿರಲಿ.
ಆಲಿಸುವ ಕರಣಂಗಳಲಿ ನಿಮ್ಮ ನಾಮವು ನಿನಾದಿಸುತ್ತಿರಲಿ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಪ್ರತಿಮ ಪ್ರಖರ ಪ್ರಜ್ವಲಿಪ ಪಾದಗಳಡಿ
ಎನ್ನ ಅಳಿದುಳಿದ ಕುಕರ್ಮಗಳು ಭಸ್ಮವಾಗಲಿ."

ಭಾಷಾ ಪಕ್ವತೆ, ಭಾವ ಪರಿಪೂರ್ಣತೆ ಶಿವಣ್ಣ ಪಾಣಿಯವರಿಗೆ ಕರಗತವಾಗಿದೆ. ಮನದಲ್ಲಿ ಮಾಡಿದ ವಿಚಾರಗಳಿಗೆ ಅಕ್ಷರರೂಪವನ್ನು ನೀಡುವಲ್ಲಿ ವಚನಕಾರರು ಸಮರ್ಥರಾಗಿದ್ದಾರೆ.

"ಕರ್ಮವಿಲ್ಲದೇ ಧರ್ಮವೆಲ್ಲಿಹುದೋ?
ಕರ್ಮವೇ ಧರ್ಮದ ಬೀಜ,
ಉಪಕಾರದ ಹಾದಿ ಸುಕರ್ಮ,
ಅಲ್ಲುಂಟು ಶಿವನ ಆವಾಸ.
ಅಪಕಾರದ ಹಾದಿ ಕುಕರ್ಮ,
ಅಲ್ಲುಂಟು ನೋವಿನ ನಿವಾಸ.
ಗುರು ಹಿರಿಯರ, ಸಜ್ಜನರ ಸಂಗದಲ್ಲಿರ್ದವಂಗೆ
ಸುಕರ್ಮದ ಹಾದಿ ಸುಲಭವೆಂದಡಿಗಡಿಗೆ
ಎಡೆಬಿಡದೆ ಕಡುಎಚ್ಚರಿಕೆ ನೀಡುವ,
ಕರುಣಾಳು ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ
ವೀರೇಶ
ನಿಮ್ಮ ದಿವ್ಯಪಾದಂಗಳಿಗೆ ಶರಣು ಶರಣಾರ್ಥಿ."

ನೈಜ ಭಕ್ತಿ ಇರುವಲ್ಲಿ ದೇವನಲ್ಲಿ ನಂಬಿಕೆ ಬಲಗೊಂಡಿರುತ್ತದೆ. ಎನ್ನುವುದನ್ನು ಸಾಬೀತುಪಡಿಸುತ್ತದೆ ಈ ವಚನ. ಕರುಣಾಳು ದೇವನನ್ನು ಮನಕ್ಕೆ ತೃಪ್ತಿಯಾಗುವರೆಗೂ ಹಾಡುವ, ಹಾಡಿ ನಲಿಯುವ, ನಲಿದು ಸಂತೋಷಪಡುವ ಮುಗ್ಧ ಕಂದನ ಸಹಜ ಸ್ವಭಾವ ಇಲ್ಲಿ ಕೆನೆ ಕಟ್ಟಿದೆ.

"ನೆಲ ನಿನ್ನದು, ಜಲ ನಿನ್ನದು, ಈ ಕಾಲಚಕ್ರವೂ ನಿನ್ನದಯ್ಯ,
ಹಣ್ಣು ನಿನ್ನದು,ಬಣ್ಣ ನಿನ್ನದು, ಈ ನೋಡುವ ಕಣ್ಣು ನಿನ್ನದಯ್ಯ
ಹಾಲು ನಿನ್ನದು, ಜೇನು ನಿನ್ನದು ಈ ಗೆಲುವು ನಿನ್ನದಯ್ಯ
ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಕೇಳುವವರು ನಾವಯ್ಯ.
ಅಯ್ಯಾ ಕರುಣವಾರಿಧಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಎಮ್ಮ ತಪ್ಪುಗಳ ಮನ್ನಿಸಿ ರಕ್ಷಿಸಯ್ಯಾ.

ಎನ್ನುವಲ್ಲಿ ಅಣು, ರೇಣು, ತೃಣ, ಕಾಷ್ಠ ಪಂಚಭೂತಗಳೆಲ್ಲ ನಿನ್ನ ಆಧೀನವಾಗಿರುವಾಗ, ನೀನೆ ಈಶ್ವರನಾಗಿರುವಾಗ ಈ ನಶ್ವರ ನರ ನಾನಾರು? ಎನ್ನುತ್ತಾ ಪ್ರಶ್ನಿಸುತ್ತಲೇ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುವ ಭಕ್ತನೊರ್ವನ ಹೃದಯ ಅಂತರಾಳದ ಅಂತಃಕರಣ ದನಿ ಇಲ್ಲಿ ಮಿರಿಮಿರಿ ಮಿಂಚಿದೆ.

"ಮಾಂಡವ್ಯ ಪುರದರಸನಿಗೆ ಉದ್ದಂಡ
ದೋರ್ದಂಡ ಚನ್ನವೀರ ಗುರುಮೂರ್ತಿ.
ಕಲ್ಯಾಣದಿ ಅನುಭವ ಮಂಟಪದ ಶರಣರಿಗೆ
ಕ್ರಿಯಾಮೂರ್ತಿ ನಿರಾಭಾರಿ ನಿಷ್ಪಪಂಚಕ
ಮಹಾಜಂಗಮ ಪುಂಗವ, ಘನಮತ ಶಿವಯೋಗಿ
ಅಂಗೈಯೋಳ್ ಇಷ್ಟಲಿಂಗದಲಿ ಸಂಭ್ರಮಿಸಿ
ಅಷ್ಟಾವರಣದಿ ಅಧಿಕನೆನಿಸಿದ ವರ ಲಿಂಗಮೂರ್ತಿ,
ಆರು ಸಾವಿರ ಜಂಗಮರೊಡಗೂಡಿ ರಂಗೋಲಿ
ಹುಡಿಯಲಿ ಗುರು, ಲಿಂಗ, ಜಂಗಮನಾದ ಕೋಟಿಸೂರ್ಯ
ಸಮಪ್ರಭೆಯುಳ್ಳ ಚೈತನ್ಯಮೂರ್ತಿ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ ಅಪ್ರತಿಮ
ಪ್ರಖರ ಪ್ರಜ್ವಲಿಪ ಪಾದಪದ್ಮಂಗಳೆನಗೆ ಶ್ರೀ ಕೈಲಾಸವಯ್ಯಾ."

ಅಪ್ಪ ಸೂಗೂರಯ್ಯನ ವಿರಾಟ್ ದರ್ಶನವನ್ನು "ಕರಿಯನ್ನು ಕನ್ನಡಿಯೋಳು ಅಡಗಿಸಿರ್ಪಂತೆ" ಶಿವಣ್ಣ ಪಾಣಿ ವಚನ ಸಿರಿಯಲ್ಲಿ ಸೆರೆಹಿಡಿದುದು ಅಚ್ಚರಿ. ಹೌದು. ಭಕ್ತಿಯ ಉತ್ತುಂಗತೆಯೇ ಅಂತಹದ್ದು, ಭಾವ ಭಾಷೆಗೂ ಅತೀತ.

"ಶಿವ ಹಾಲಾಹಲ ಸೇವಿಸಿ ಜಗವ ಉದ್ಧರಿಸಿದ.
ಭಕ್ತನಿಗಾಗಿ ಆತ್ಮಲಿಂಗವನಿತ್ತ.
ಶಿವನಂಶವೇ ಈ ಜೀವಿಯಲ್ಲವೇ?
ಮನುಜ ಸ್ವಾರ್ಥಿಯಾಗದೇ
ಸಮಾಜದ ಕಲ್ಯಾಣ ಬಯಸುವುದು ,
ದೀನ ದಲಿತರಿಗೆ ಸ್ಪಂದಿಸುವ ಮನ
ನಿನ್ನದಾದಲ್ಲಿ ಆತ್ಮಶುದ್ಧಿಯಾಗುವುದು.
ಇದುವೇ ಆತ್ಮ ಪರಮಾತ್ಮನ ಬೆರೆಯುವ

ಪರಿಯೆಂದ ಎನ್ನೊಡೆಯ ಜಗದ್ರಕ್ಷಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ"

ಮಹಾ ಮಾನವತವಾದಿ ಅಣ್ಣ ಬಸವಣ್ಣನವರ ಕರುಣೆ, ದಯೆ ಈ ಆಧುನಿಕ ವಚನದಲ್ಲಿ ಸೂಕ್ತವಾಗಿ ರೂಪುಗೊಂಡಿದೆ. ದೇವ ಪರಶಿವನನ್ನು ಬೆರೆಯುವ ಪರಿ ಹೃದಯ ಸ್ಪಂದನದ ಗರಿ.

"ಹರಿಯುವ ಗಂಗೆಯಲಿ ಮಿಂದರೆ ಪಾಪ ಕಳೆಯುವುದಿಲ್ಲ.
ಉರಿಯುವ ಅಗ್ನಿಗೆ ತುಪ್ಪ ಸುರಿದರೆ ಪಾಪ ಕ್ಷಯವಾಗುವುದಿಲ್ಲ.
ಹಿರಿದಾದ ಮೋಜಿನಾ ಕೂಟವಿರಿಸಿದೊಡೆ ಪುಣ್ಯ ಪ್ರಾಪ್ತಿಯಾಗುವುದಿಲ್ಲ.
ಆಡಂಬರದ ಪೂಜೆ, ಐಷಾರಾಮಿ ಯಾತ್ರೆಗಳಿಂದ ಪುಣ್ಯ ಹರಿದು ಬರುವುದಿಲ್ಲ.
ಮಾನವೀಯತೆ ತೋರಿ ದೀನ ದಲಿತರಿಗೆ ನೆರವಾದೊಡೆ ಪಾಪ ಭಸ್ಮ ವಾಗುವುದು.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನೊಲುಮೆ ದೊರೆಯುವುದು ಸತ್ಯ."

ಮೂಢನಂಬಿಕೆಗಳನ್ನು ಗೊಡ್ಡು ಸಂಪ್ರದಾಯಗಳನ್ನು ಕಟುವಾಗಿ ವಿರೋಧಿಸುವ ಶಿವಣ್ಣ ಪಾಣಿಯವರು ಅಪ್ಪಟ ಮಾನವಿಯತೆಗೆ ನತ ಮಸ್ತಕರಾಗುತ್ತಾರೆ.

ಶಿವಣ್ಣ ಪಾಣಿಯವರ ಧಾರ್ಮಿಕ ವಚನಗಳಲ್ಲಿ ಸಿದ್ಧಗಂಗಾ, ಸುತ್ತೂರು, ಕೊಪ್ಪಳ ಗವಿಮಠಗಳ ಸೇವಾ ಮನೋಭಾವ, ಸಕಲರಿಗೂ ಲೇಸನೇ ಬಯಸುವ ಮಠಾಧೀಶರ ಮಾತೃವಾತ್ಸಲ್ಯದ ಹಿರಿಮೆ ಕಾವ್ಯಮಯವಾಗಿ ಬಂದಿದೆ.

ಶ್ರೀಯತರಿಗೆ ಶರಣ ಸಾಹಿತ್ಯದ ಬಗ್ಗೆ ಅಪಾರವಾದ ಅನುಭವವಿದೆ. ನಿಜಗುಣ ಶಿವಯೋಗಿಗಳ ಕೃತಿಗಳು ಮತ್ತು ಪುರಾತನ ಗ್ರಂಥಗಳ ಅಧ್ಯಯನವಿದೆ. ಹನ್ನೆರಡನೆಯನೇ ಶತಮಾನದ ಶಿವಶರಣರ ವಚನಗಳ ಪ್ರಭಾವವಿದೆ.

ಈ ಇಳಿವಯಸ್ಸಿನಲ್ಲೂ ಯುವಕರನ್ನು ನಾಚಿಸುವಂತಹ ಶಿವಣ್ಣ ಪಾಣಿಯವರ ದೈನಂದಿನ ಚಟುವಟಿಕೆ ಮತ್ತು ಆಸ್ತಿಕ ಮನೋಭಾವಗಳು ಸದಾ ಚೈತನ್ಯಪೂರ್ಣವಾಗಿರಲಿ. ದೇವಸೂಗೂರೇಶ ಅವರನ್ನು ಅವರ ಕುಟುಂಬದವರಿಗೂ ಸುಖ, ಶಾಂತಿ, ಸಮೃದ್ಧಿಯನ್ನು ಕರುಣಿಸಲಿ ಎಂದು ತುಂಬು ಮನದಿಂದ ಪ್ರಾರ್ಥಿಸುವೆ.

ದಿನಾಂಕ: 17/01/2024 — **ಶ್ರೀ ಅಯ್ಯಪ್ಪಯ್ಯ ಹುಡಾ**
ಬುಧವಾರ ಹಿರಿಯ ಸಾಹಿತಿಗಳು, ರಾಯಚೂರು

ಅನಿಸಿಕೆ...

ಹಿರಿಯ ಅನುಭವಿಗಳು ಹಾಗೂ ಅನುಭವಿಗಳಾದ ಶ್ರೀ ಶಿವಣ್ಣ ಪಾಣಿ ಅವರು ನೆಲೆಸಿದ ದೇವಸುಗೂರು ಕ್ಷೇತ್ರ ತನ್ನದೇ ಆದ ಇತಿಹಾಸ ವೈಭವವನ್ನು ಮೆರೆಯುವ ವಿಬ್ಲ ಕ್ಷೇತ್ರ ಈ ಕ್ಷೇತ್ರಕ್ಕೆ ಗುಲ್ಬರ್ಗ ವಿವಿ ನನ್ನನ್ನು ಸಂಶೋಧನೆಗಾಗಿ ನೇಮಿಸಿದಾಗ ಆ ಕ್ಷೇತ್ರದಲ್ಲಿ ನಾಲ್ಕೈದು ವರ್ಷಗಳ ನೆರಸಬೇಕಾಯಿತು ಈ ಸಂದರ್ಭದಲ್ಲಿ ಹಲವಾರು ಗಣ್ಯರು ಆತ್ಮೀಯರು ಆ ಗ್ರಾಮದ ಚೇತನಗಳನ್ನು ಮರೆಯಲಾಗದು ಅಂತಹವರಲ್ಲಿ ಸಾಹಿತ್ಯ ಉಪಾಸಕರು ಭಾವನಾಜೀವಿಗಳು ಮಾತನ್ನು ಸಾಹಿತ್ಯದಲ್ಲಿ ಪ್ರಬುದ್ಧತೆ ಹೊಂದಿದವರಲ್ಲಿ ಶಿವಣ್ಣ ಪಾಣಿಯೊಬ್ಬರು.

ಮಾನವೀಯ ಮೌಲ್ಯಗಳ ಸೃಷ್ಟಿ ಕೇಂದ್ರವಾದ ಅನುಭವ ಮಂಟಪ ವಚನಗಳ ಮಹಾಪೂರವನ್ನೇ ಹರಿಸಿ ಸಾಮಾಜಿಕ ಧಾರ್ಮಿಕ ರಾಜಕೀಯ ಕ್ಷೇತ್ರಗಳಲ್ಲಿ ತನ್ನದೇ ಆದ ಚಾಪ ಮೂಡಿಸಿದೆ ಅಂತಹ ವಚನದ ಸಾಹಿತ್ಯದ ಕಡೆಯಲ್ಲಿ ಇದುವರೆಗೂ ಸಹ ನವಚನಕಾರರ ಸಂಖ್ಯೆಗೆ ಕೊರತೆ ಇಲ್ಲವೆಂಬಂತೆ ಶಿವಣ್ಣ ಪಾಣಿಯವರ 365 ವಚನಗುಚ್ಛವಾದ ವಚನಾಮೃತವೇ ಸಾಕ್ಷಿಯಾಗಿದೆ ಶಿವ ಶಕ್ತಿಪ್ರಿಯ ಶ್ರೀ ದೇವಸೂಗೂರು ವೀರೇಶ ಎಂಬ ಅಂಕಿತನಾಮದಿಂದ ಕೂಡಿರುವ ವಚನಗಳಲ್ಲಿ ಸರ್ವ ಸಮರ್ಪಣ ಮನೋಭಾವ ಸೂಗುರೇಶ್ವರನಲ್ಲಿ ಲೀಲವಾಗಿದೆ ಎಂಬ ಭಾವ ಪರಿಪೂರ್ಣವಾಗಿದೆ ಕಾಯಕ ಶಿವನಾಮಸ್ಮರಣೆ ಸಂಸ್ಕಾರಗಳು ಸರ್ವಕಾಲಿಕ ಮೌಲ್ಯದ ಸಾಹಿತ್ಯವನ್ನು ವಚನಕಾರರಾದ ಶಿವಣ್ಣ ಪಾಣಿ ಅವರು ಸಾರ್ಥಕತೆಯನ್ನು ಮೆರೆದಿದ್ದಾರೆ.

ತಾಯಿಯ ವಾತ್ಸಲ್ಯ ರೈತನ ಸಮಾಜದ ಬಂದು ನಾನೆಂಬ ಅಹಂಕಾರದ ವಿನಾಶ ಕೌಟುಂಬಿಕ ಕಾಳಜಿ ಇಲ್ಲಿದೆ. ಇವರು ವಚನಗಳಲ್ಲಿ ನಡೆಸುವ ಮುಕ್ತ ಸಂವಾದ ವಚನ ಚಳುವಳಿಯ ಜನಪರಲಿವಿಗೆ ಸಾಕ್ಷಿಯಾಗಿದೆ ಬಂದ ಪ್ರಸಂಗಗಳನ್ನು ನಗುತ್ತಲೇ ಸ್ವೀಕರಿಸಿ ಸಂವಾದವನ್ನು ಮುಂದುವರಿಸುವುದು ನಿಜಕ್ಕೂ ಇವರಲ್ಲಿರುವ ತಾತ್ವಿಕ ಬೆಳವಣಿಗೆಗೆ ಜೋತಕವಾಗಿದೆ ಉದಾಹರಣಗೆ ಈ ವಚನ ನೋಡಬಹುದು.

ಅಹಂಕಾರವೆಂಬುದು ಅರೆಘಳಿಗೆ ಸುಳಿಯಬಾರದು.

ತಪ್ಪು ಒಪ್ಪಿ ತಿದ್ದಿಕೊಳ್ಳದಿರುವ ಮನ ಇರಬಾರದು.

ನಾನೆಂಬ ಮದವು ಕೂರಂಬಿನಂತೆ

ಸಿಕ್ಕ ಸಿಕ್ಕವರನು ಕೇಕೆಹಾಕಿ ಘಾಸಿಗೊಳಿಸುವುದು.
ಬಲ ಕುಗ್ಗಿದಾಗ ನಿನ್ನ ಬಗ್ಗಿಸಿ
ವಿಲವಿಲ ಒದ್ದಾಡಿಸದೇ ಬಿಡದು.
ನಾನೆಂಬುದನಳಿದು ಎಲ್ಲವೂ ನೀನು,
ನಿನ್ನಿಂದ ಎಂದುಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶಂಗೆ ಶರಣಾಗು ಮನವೇ.
ಮಾನವೀಯತೆಯ ಮಾಧುರ್ಯ ಸವಿ ಮನವೇ..

ಇಂತಹ ನಿರ್ಭೀಡೆಯ ಮುಖಾಮುಖಿಯಾದ ಆಳವಾದ ತಾತ್ವಿಕ ವೈಚಾರಿಕ ಆಧ್ಯಾತ್ಮಿಕ ವತಿಯಿಂದ ಕೂಡಿದ ಮುಕ್ತ ಚರ್ಚೆ ಇಲ್ಲಿದೆ ಸದ್ಸದ ನಿರಂತರತೆಯನ್ನು ಸಾಕ್ಷಾತ್ಕಾರದ ಒಳನೋಟಗಳನ್ನು ಚಲನಶೀಲ ಕ್ರಿಯೆಗಳಲ್ಲಿ ಖಂಡಿಸಿ ಅದನ್ನು ಅನುಭವ ನೆಲೆಯಲ್ಲಿ ಮೂಲಭೂತವಾಗಿ ಮಾರ್ಗದರ್ಶಿಸುತ್ತಾ ಕಾರ್ಯ ಕಾರಣಗಳ ನಡುವೆ ಸಂಘರ್ಷಣೆ ಪಡಿಸುತ್ತಾ ತತ್ವದ ನೆಲೆಯನ್ನು ಶೋಧಿಸುವ ಗುಣ ಶಿವಣ್ಣ ಪಾಣಿಯವರಲ್ಲಿದೆ ಅಹಂಕಾರ ಕ್ಷಣ ಹೊತ್ತು ಮನುಷ್ಯರಲ್ಲಿ ಸುಳಿಯಬಾರದು ಎಂದು ಖಂಡಿಸುತ್ತಾ ಸಿಕ್ಕವರನಲ್ಲ ಆಡಿಕೊಳ್ಳುವ ಬುದ್ಧಿ ಸರಿಯಲ್ಲ ಎಂಬ ಸೂಕ್ಷ್ಮ ಅರಿವನ್ನು ತಿಳಿಸಿದ ಮುಂದೆ ನಿನ್ನ ಬಲ ಕುಗ್ಗಿದಾಗ ನಿನ್ನ ಬಗ್ಗಿಸಿ ವಿಲವಿಲ ಒದ್ದಾಡಿಸದೆ ಬಿಡದು ಎಂಬಲ್ಲಿ ಕಾರ್ಯ ಕಾರಣಗಳ ಸಂಘರ್ಷಣ ವಿದೆ. ಹೊರನೋಟಕ್ಕೆ ವಾದ ಮಾಡಿದಿಂತೆನಿಸಿದರು ಅದೊಂದು ಸೈದ್ಧಾಂತಿಕ ಸಂವಾದವಾಗಿದೆ ಕೇವಲ ತರ್ಕ ವಾಗಿರದೆ ತಾತ್ವಿಕ ವೈಚಾರಿಕ ಮತ್ತು ಬಂಡಾಯ ನೆಲೆಯ ಬೆಳವಣಿಗೆಯಾಗಿದೆ.

ಹೆತ್ತಮ್ಮನ ಮುತ್ತಿನಲ್ಲಿ, ಹತ್ತಾನೆ ಬಲವುಂಟು.
ಒತ್ತಿಚಿಮ್ಮುವ ವಾತ್ಸಲ್ಯದ ಚಿಲುಮೆಯುಂಟು.
ಸತ್ಯದಾ ನೆಲೆಯಲ್ಲಿ, ಕತ್ತೆತ್ತಿ ಬಾಳುವ ಛಲವುಂಟು,
ಗುರು ಲಿಂಗ ಜಂಗಮವ ಆದರಿಸಬೇಕೆಂಬ ಸತ್ಪಥವುಂಟು.
ಅದು ಕಾರಣ ಹತ್ತಾರು ದೈವಗಳಿಗೂ ಮಿಗಿಲು ನಮ್ಮಮ್ಮ
ಎಂಬ ನಿಜ ಶರಣಂಗೆ ಕೈ ಮುಗಿವೆನಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

ಹೆತ್ತ ತಾಯಿಯಲ್ಲಿ ವಾತ್ಸಲ್ಯದಲ್ಲಿ ಹತ್ತನೇ ಬಲ ಸದಾ ಸತ್ಪಥದಲ್ಲಿ ಯಲ್ಲಿ ಬೀಳುವುದನ್ನು ಹೇಳಿಕೊಡುವ ತಾಯಿ ತ್ರಿವಿಧ ಗುರು ಲಿಂಗಸಂಗಮರನ್ನು ಆರಾಧಿಸುವ

ರೀತಿ ಹೇಳಿಕೊಡುವ ತಾಯಿ, ಹತ್ತಾರು ದೇವರಗಳಿಗಿಂತ ಮಿಗಿಲು ಎಂಬ ಧ್ವನಿ ಅತ್ತಾರು ದೈವ ಪೂಜಿಸುವುದಕ್ಕಿಂತ ಹೆತ್ತ ತಾಯಿಯನ್ನು ಪೂಜಿಸುವ ಎಂಬ ಮಾತೃವಾಚಲ್ಯದ ಪರಿಭಾವ ಬಂಧಗಳನ್ನು ನಮ್ಮ ದೇಶದ ಸಂಸ್ಕೃತಿಯ ಪ್ರತಿಬಿಂಬದಂತಿದೆ ಈ ವಚನ.

ಒಟ್ಟಾರೆಯಾಗಿ ಶಿವಣ್ಣ ಪಾಣಿಯವರ ವಚನಾಮೃತ ವಚನ ಸಂಕಲನ 365 ವಚನಗಳನ್ನು ಒಳಗೊಂಡ ಈ ಕೃತಿ ವೈಚಾರಿಕ ತಾತ್ವಿಕ ಧಾರ್ಮಿಕ ಬಂಡಾಯ ಪ್ರಜ್ಞೆ ಸಾಮಾಜಿಕ ಮಾನವೀಯ ಮೌಲನಗಳ ಸಾಕಾರಗಳಾಗುವೆ ಈಗಾಗಲೇ ಹಲವಾರು ಕೃತಿಗಳನ್ನು ರಚಿಸಿದ ಕೀರ್ತಿ ಶಿವಣ್ಣ ಪಾಣಿಯವರದು ಹಿರಿಯ ಚೈತನ್ಯದ ಜ್ಞಾನದ ಬೆಳಕಿನ ಸನ್ಮಾರ್ಗ ಪಥದತ್ತ ತೋರುವ ಇವರ ಸಾಹಿತ್ಯ ವ್ಯಕ್ತಿತ್ವ ಬಹುಮುಖವಾದದ್ದು ಸರ್ವತೋಮುಖವಾದುದು.

ಇನ್ನು ಹಲವಾರು ಕೃತಿಗಳು ಇವರಿಂದ ರಚನೆಯಾಗಲಿ ಈ ವಚನಾಮೃತದ ಪುಷ್ಪಗುಚ್ಛ (ವಚನಗುಚ್ಚ) ಬಿಡುಗಡೆ ಸಾರ್ಥಕವಾಗಲಿ ಶಿವಣ್ಣ ಪಾಣಿಯವರಿಗೆ ಮತ್ತು ಅವರ ಕುಟುಂಬಕ್ಕೆ ದೇವಸೂಗೂರು ವೀರ ಆಯುರ್ ಆರೋಗ್ಯ ಸುಖ ಶಾಂತಿ ನೆಮ್ಮದಿ ಸಂಪತ್ತು ದಯಪಾಲಿಸಿಲೆಂದು ಕೋರುತ್ತಾ ಹಿರಿಯರಾದ ಶಿವಣ್ಣ ಪಾಣಿ ಅವರಿಗೆ ನನ್ನ ಹೃತ್ಪೂರ್ವಕವಾದ ನಮನಗಳು.

– ಡಾ॥ ಇಲ್ಲೂರು ರಾಜಶ್ರೀ ಕಿಶೋರ
ಸಂಸ್ಥಾಪನಾ ಅಧ್ಯಕ್ಷರು
ಸಿರಿಗನ್ನಡ ಪ್ರತಿಷ್ಠಾನ, ಬೆಂಗಳೂರು

ಪ್ರಕಾಶಕರ ನುಡಿ

ಪ್ರಸ್ತುತ ಶ್ರೀ ಶಿವಣ್ಣ ಪಾಣಿಯವರು "ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ" ಎಂಬ ಅಂಕಿತನಾಮದೊಂದಿಗೆ ರಚಿಸಿದ "ವಚನಾಮೃತ" ಸಂಕಲನ–ದಲ್ಲಿರುವ 365 ವಚನಗಳು ಕಾಲಮಾನಕ್ಕೆ ತಕ್ಕಂತೆ ಸಮಾಜದ ಓರೆಕೋರೆಗಳನ್ನು ಕಂಡು ಅರಳಿ ಬಂದ ವಚನಗಳಾಗಿವೆ. ಧಾರ್ಮಿಕ ಮನೋಭಾವದ ವಚನಗಳು ಧರ್ಮದ ತಿರುಳನ್ನು ನೇರವಾಗಿ ಪ್ರತಿಪಾದಿಸಿರುವುದು ಕಂಡು ಬರುತ್ತದೆ. ಇವರ ಸಾಮಾಜಿಕ ಸಾಧನೆ ಗುರುತಿಸಿ ಪೂಜ್ಯ ಶ್ರೀ ಡಾ ॥ ಬಸವಯೋಗಿ ಗುರೂಜಿ ಏಕತಾ ಫೌಂಡೇಶನ್ ಸಂಸ್ಥೆ ಬೆಂಗಳೂರು ಇವರು ಸಾಮಾಜಿಕ ಕ್ಷೇತ್ರದ ಸೇವೆಗಾಗಿ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಈ ವಚನಗಳು ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿಯ ಸದಸ್ಯರ ಪ್ರಶಂಸೆಗೆ ಪಾತ್ರವಾಗಿವೆ.

ಈ ಕೃತಿಯ ಮುನ್ನುಡಿ ಬರೆದ ಶ್ರೀ ಅಯ್ಯಪ್ಪಯ್ಯ ಹುಡಾ ರಾಯಚೂರು ಇವರು ಸರಳ ಪರಿಚಯ ಸವಿಸ್ತಾರವಾಗಿ ತಿಳಿಸಿದ್ದಾರೆ. ಲೇಖಕರು ತಮ್ಮ ನಲ್ನುಡಿಯ ಮೂಲಕ ಕೃತಿಗೆ ಸಹಕಾರ ನೀಡಿದವರನ್ನು ಸ್ಮರಿಸಿದ್ದಾರೆ. ಹುಬ್ಬಳ್ಳಿಯ ನಿವಾಸಿಗಳಾದ ಶ್ರೀ ವಿಜಯಕುಮಾರ್ ಕಾರಿಕಾಯಿ ಇವರ ಸ್ಫೂರ್ತಿಯಿಂದ ಈ ವಚನಾಮೃತದ ಪುಷ್ಪಗುಚ್ಛವನ್ನು ನಮ್ಮ ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿ ವತಿಯಿಂದ ಪ್ರಪ್ರಥಮವಾಗಿ ಪ್ರಕಾಶನ ಪಡಿಸುತ್ತಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಣ ಮಾಡಿದ ಶ್ರೀ ಗಿರೀಶ್ ದೊಡ್ಡಮನಿ ಬಿ.ಜಿ. ಪ್ರಿಂಟರ್ಸ್ ಧಾರವಾಡ ಹಾಗೂ ಕೃತಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಹನೀಯರಿಗೂ ಕರುಣಾಳು ಶ್ರೀ ವೀರಭದ್ರೇಶ್ವರ ಸ್ವಾಮಿಯು ಆಯುರಾರೋಗ್ಯ ಅಷ್ಟೈಶ್ವರ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸುತ್ತೇವೆ.

– ವೀರಭದ್ರಗೌಡ ಕಾರೇಕಲ್ಲು
ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿ
ಪ್ರಕಾಶನ ಪರವಾಗಿ

ನಲ್ನುಡಿ

ಮಾನವ ಜನ್ಮಕ್ಕೆ ಸಂಸ್ಕಾರ ಸಂಸ್ಕೃತಿಗಳು ಬಹುಮುಖ್ಯ. ನನ್ನ ಜನ್ಮದಾತರು ಗುರು–ಲಿಂಗ–ಜಂಗಮ ಪೂಜಾ ನಿಷ್ಠರು ಅತೀವ ದೈವಭಕ್ತರು. ನಾನು ಬೆಳೆದದ್ದು ಅಭ್ಯಾಸಕ್ಕೆ ನೆರವಾದ ಶ್ರೀ ಬಸವರಾಜ ನಿಷ್ಠಿ ದೇಶಮುಖ (ನಿವೃತ್ತ ಪ್ರಾಂಶುಪಾಲರು) ಗುರುಗಳಲ್ಲಿ. ಅವರು ಕೂಡ ಸುಸಂಸ್ಕೃತ ಕುಟುಂಬದವರು. ಅಂಥವರ ಕುಡಿಯಾಗಿ ಬೆಳೆದಿದ್ದು ನನ್ನ ಸೌಭಾಗ್ಯ.

ಪೂಜ್ಯ ಶ್ರೀ ಷ.ಬ್ರ. ಲಿಂಗೈಕ್ಯ ಸದಾಶಿವ ಶಿವಾಚಾರ್ಯರು ನಂದೂರ ಇವರು ಶರಣ ಸಾಹಿತ್ಯ ಓದಲು ಬರೆಯಲು ಆಜ್ಞೆಮಾಡಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ ಎಂಬ ಅಂಕಿತನಾಮದಿಂದ ಮುನ್ನಡೆಯಲು ಹರಸಿದ್ದನ್ನು ನಾನು ಮನದುಂಬಿ ಸ್ಮರಿಸುತ್ತೇನೆ. "ಗುರು" ಗುರಿಯನ್ನಿತ್ತು ಬೆಂಬಲವಾಗಿ ನಿಂತಾಗ ಗುರಿ ತಲುಪಲು ಕಷ್ಟವಾಗದು. ನಂದೂರು ಶ್ರೀಗಳ ಇಚ್ಛೆಯನ್ನು ಪೂರ್ಣಗೊಳಿಸಿದ್ದೇನೆಂಬ ಅಭಿಮಾನ ನನ್ನದಾಗಿದೆ. ಪರಮಪೂಜ್ಯ ಶ್ರೀ ಷ.ಬ್ರ. ಅಭಿನವ ರಾಚೋಟಿ ವೀರ ಶಿವಾಚಾರ್ಯ ಮಹಾಸ್ವಾಮಿಗಳು ರಾಯಚೂರು ಇವರು ಭಕ್ತರ ಬಂಧುಗಳು, ಸಮಯ ಶೀಲರು, ಸಾಹಿತ್ಯ ಪ್ರವೀಣರು. ನಮ್ಮ ವಚನಗಳನ್ನು ಮೆಚ್ಚಿ ನಮಗೆ ಎರಡು ಬಾರಿ ಗೌರವಿಸಿ ಶ್ರೀರಕ್ಷೆ ನೀಡಿದ್ದಾರೆ. ಅಲ್ಲದೆ ಅಪಘಾತ ಸಂಭವಿಸಿದಾಗ ಮನೆಗೆ ಬಂದು ಯೋಗಕ್ಷೇಮ ವಿಚಾರಿಸಿ ಅಭಯ ನೀಡಿದ್ದಾರೆ. ಅವರ ಶ್ರೀರಕ್ಷೆ ನಮಗೆ ಸದಾ ಇರಲಿ. ಪರಮಪೂಜ್ಯ ತಪೋನಿಧಿ ಶ್ರೀ ವೀರೇಶ್ವರ ಶಿವಯೋಗಿಗಳು ನರಸಾಪುರ ಇವರು ವಚನಗಳನ್ನು ವೀಕ್ಷಿಸಿ ಆಗಾಗ ಮೆಚ್ಚುಗೆ ವ್ಯಕ್ತಪಡಿಸಿ ಹುರಿದುಂಬಿಸಿದ್ದಾರೆ. ಕವಿಭೂಷಣ ಎಂದು ಸನ್ಮಾನಿಸಿ ಅಂತಃಕರಣದ ಆಶೀರ್ವಾದ ಮಾಡಿದ್ದಾರೆ. ಅಲ್ಲದೆ ತುಂಬು ಹೃದಯದಿಂದ ಆಸಕ್ತರಾಗಿದ್ದುದರ ಪರಿಣಾಮ ವಚನಾಮೃತ ಗ್ರಂಥ ಮುದ್ರಣಗೊಳ್ಳುತ್ತಿದೆ. ಶ್ರೀಗಳ ಕೃಪಾಕಟಾಕ್ಷ ಆಜೀವ ಪರ್ಯಂತ ಇರಲಿ ಎಂದು ಬೇಡಿಕೊಳ್ಳುತ್ತೇನೆ. ಶ್ರೀಗಳಿರ್ವರಿಗೂ ನಮ್ಮ ಅನಂತ ಪ್ರಣಾಮಗಳು.

ಮೊದಲು ತ್ರಿದಳ ಎಂಬ ಭಕ್ತಿಗೀತೆ ವಚನ ಸಂಕಲನ ಹಾಗೂ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ಧ್ವನಿ ಸುರುಳಿ ಲೋಕಾರ್ಪಣೆಗೊಂಡು ಸಹೃದಯಿಗಳಿಂದ ಮೆಚ್ಚುಗೆ ಪಡೆದಿರುವುದನ್ನು ನೆನಪು ಮಾಡಿಕೊಳ್ಳುತ್ತೇನೆ. ನನ್ನ

ಬಾಳಿಗೆ ಬಿರುಗಾಳಿ ಬೀಸಿ ಕುಟುಂಬವೇ ಅಲ್ಲೋಲ ಕಲ್ಲೋಲವಾಗಿ ನಡುಗುತ್ತಿದ್ದಾಗ ನನ್ನ ಮನೆದೈವ ಅನಾಥ ರಕ್ಷಕ ಶ್ರೀ ದೇವಸೂಗೂರ ವೀರೇಶ ಕೈ ಹಿಡಿದು ರಕ್ಷಿಸಿ ಪುನಃ ಪುನಃ ಬಾಳಿಗೆ ಆಧಾರಸ್ತಂಭವಾಗಿ ನಿಂತಿರುವ ಕಾರಣ ಜೀವಂತವಾಗಿದ್ದೇವೆ. ಆತನ ಪವಾಡ ಅಂದು ಇಂದು ಮುಂದು ಎಂದೆಂದಿಗೂ ಇರುತ್ತದೆ. ಎಂದು ಪ್ರಮಾಣ ಮಾಡಿ ಹೇಳುತ್ತೇನೆ. "ಅಕ್ಷರ ಬಾರದ ನಿರಕ್ಷರ ಕುಕ್ಷಿಗೆ ಶಿಕ್ಷಕನಾದವ ನೀನಯ್ಯ" ಎಂದಾಗ ನನ್ನ ಪರಮ ಆರಾಧ್ಯದೈವ ಶ್ರೀ ದೇವಸೂಗೂರು ವೀರೇಶ ನನ್ನ ಹೃದಯಾಂತರಾಳದಲ್ಲಿ ಚಿಮ್ಮಿಸಿದ ಚಿನ್ಮಯ ಪದಪುಂಜಗಳೇ ವಚನಗಳಾಗಿ ಅರಳಿ ನಿಂತಿವೆ.

"ಕಡು ಬೆಡಗಿನ ವಚನಗಳ ಬರೆಯಲು ನಾನ್ಯಾರು ?" ಎಲ್ಲವೂ ಆ ನನ್ನ ದೈವ ಬರೆಯಿಸಿದ ಅಲ್ಲವೇ ? ಇಲ್ಲಿ ನನ್ನನ್ನು ಲಿಪಿಕಾರನನ್ನಾಗಿ ಮಾಡಿ ಮೆರೆದ ಎನ್ನೊಡೆಯನಿಗೆ ಅನಂತಾನಂತ ಕೋಟಿ ಪ್ರಣಾಮಗಳು.

ಸಮಯಕ್ಕೆ ಸರಿಯಾಗಿ ಈ ವಚನಗಳನ್ನು ಪರಾಮರ್ಶಿಸಿ, ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದ ನನ್ನ ಗುರುವರ್ಯರಾದ ಶ್ರೀ ಅಯ್ಯಪ್ಪಯ್ಯ ಹುಡಾ ಹಾಗೂ ನನ್ನ ಸನ್ಮಿತ್ರರಾದ ಸಿದ್ದರಾಮಪ್ಪಗೌಡ ಮಾಲಿಪಾಟೀಲ್ ದೇವಸೂಗೂರು ಇವರ ಪ್ರೋತ್ಸಾಹದ ನುಡಿಗಳು ಈ ಒಂದು ವಚನ ಸಂಪದವಾಗಿ ಮಿಂಚಲು ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

ಸಹೋದರರಾದ ಶ್ರೀ ಕಾರೇಕಲ್ಲು ವೀರಭದ್ರಗೌಡ ಇವರು ಮೊಬೈಲ್ ಮುಖಪುಟದಲ್ಲಿ ಹಾಕಿ ಸಹೃದಯ ಓದುಗರಿಗೆ ಪರಿಚಯಿಸಿದ್ದಲ್ಲದೆ "ಪುಸ್ತಕ ರೂಪದಲ್ಲಿ ಹೊರತರಲು ನನ್ನೆಲ್ಲ ವಚನಗಳನ್ನು ಕ್ರೂಢಿಕರಿಸಿ, ಶತ ಪ್ರಯತ್ನಪಟ್ಟು ಈ ವಚನಾಮೃತ" ಓದುಗರಿಗೆ ತಲುಪಿಸುವಂತೆ ಮಾಡಿದ ಕೀರ್ತಿ ಅವರದ್ದಾಗಿದೆ. ಅವರ ಪ್ರಯತ್ನ ನಾನೆಂದೂ ಮರೆಯಲಾರೆ.

ಅಲ್ಲಲ್ಲಿ ಬಿಡಿ ಹಾಳೆಗಳಲ್ಲಿದ್ದ ವಚನಗಳನ್ನು ವ್ಯವಸ್ಥಿತವಾಗಿ ಬರೆದಿಟ್ಟ ಶ್ರೀಮತಿ ಭೂಮಿಕಾ ಪ್ರಭು ಪಾಣಿ, ಕೃತಿ ಹೊರಬರಲು ಸಹಕರಿಸಿದ ಶ್ರೀ ವಿಜಯಕುಮಾರ ಕಾರಿಕಾಯಿ ಇವರಿಗೂ, ಪ್ರಕಾಶನಗೈದ ಶ್ರೀ ವೀರಭದ್ರೇಶ್ವರ ಪ್ರಚಾರ ಸಮಿತಿ ಬಳ್ಳಾರಿ ಇವರಿಗೂ, ಶರಣ ಬಂಧುಗಳಿಗೂ, ಶ್ರೀ ಚಂದ್ರಶೇಖರ ಕಡಗಂಚಿಯವರಿಗೂ, ಅಚ್ಚುಕಟ್ಟಾಗಿ ಪುಸ್ತಕ ಮುದ್ರಿಸಿದ ಧಾರವಾಡದ ಬಿ.ಜಿ. ಪ್ರಿಂಟರ್ಸ್‌ನ ಶ್ರೀ ಗಿರೀಶ ದೊಡಮನಿಯವರಿಗೂ ಹಾಗೂ ಇನ್ನೂ ಅನೇಕರು ಪರೋಕ್ಷ ಅಪರೋಕ್ಷವಾಗಿ ನೆರವಾದ ಬಂಧುಮಿತ್ರರಿಗೂ ನನ್ನ ಅನಂತ ಕೃತಜ್ಞತೆಗಳು.

ವಿದ್ವಜ್ಜನ ವಿಧೇಯ

– ಶ್ರೀ ಶಿವಣ್ಣ ಪಾಣಿ, (ದೇವತ್ಕಲ್)

ವಚನಕಾರರು, ರಾಯಚೂರು.

ಸತ್ಯಂ ಶಿವಂ ಸುಂದರಂ

ಶಿವ ಜೀವರ ಸಂಬಂಧ ಸತ್ಯವಾಗಿರ್ಪುದಯ್ಯಾ.
ಸತ್ಯದ ಸಂಬಂಧ ಶಿವಮಯವಾಗಿರ್ಪುದಯ್ಯಾ.
ಶಿವನ ಸತ್ಯ ಸ್ವರೂಪವೇ ನಿತ್ಯಸುಂದರವಾಗಿರ್ಪುದಯ್ಯಾ.
ಸತ್ಯಂ ಶಿವಂ ಸುಂದರಂ ಎಂದು ನಿಶ್ಚಲ
ನಿರಾಕಾರ ನಿರ್ಗುಣ ನಿಜ ಅನಘಲಿಂಗ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಅನುದಿನ ಭಜಿಸುತಿರ್ಪೆನಯ್ಯಾ,

ಧಾರ್ಮಿಕ ವಚನಗಳು

೦೧.

ಅಯ್ಯಾ.. ನೀನಿರಿಸಿದಂತೆ ನಾನಿರುವೆನಯ್ಯಾ
ನೀ ನುಡಿಸಿದಂತೆ ನಾ ನುಡಿವೆನಯ್ಯಾ,
ನೀ ನಡೆಸಿದಂತೆ ನಾ ನಡೆವೆನಯ್ಯಾ,
ನೀ ನೀಡಿದ್ದು ಎನಗೆ ಮಹಾ ಪ್ರಸಾದವಯ್ಯಾ,
ಈ ಜಡ ದೇಹಕ್ಕೆ ನೀನೇ ದಿವ್ಯಚೇತನ ನೋಡಯ್ಯಾ,
ಎನಗೆ ಗುರು, ಲಿಂಗ, ಜಂಗಮನಾಗಿ, ಕಂಗೊಳಿಪ
ದೇವಾದಿದೇವ ಮಹಾದೇವ ನೀನಯ್ಯಾ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ ನಿಮ್ಮ
ಭದ್ರ ಪಾದಗಳಡಿಯಲಿರ್ದು ನಿಶ್ಚಿಂತನಾಗಿರ್ಪೆನಯ್ಯಾ,

೦೨.

ಅಜ ಹರಿಯರಿಗೂ ಆವರಿಸಿತ್ತು ಅಹಂಕಾರ.
ರಾಜ ಮಹಾರಾಜರಿಗೂ ಬಂದಿತ್ತು ಅಹಂಕಾರ.
ಅಹಂಕಾರದ ಪ್ರತಿಫಲ ಅಜನ ಶಿರ ಹೋಯಿತ್ತು.
ಹರಿಯ ಸದ್ದಡಗಿತ್ತು. ಇನ್ನು ರಾಜ ಮಹಾರಾಜರಿಗೆಲ್ಲ
ಗಾಜಿನಂತೆ ಪುಡಿ ಪುಡಿ ಮಾಡಿತ್ತು, ಅಹಂಕಾರ.
ಕೋಪಗಳೇ ನಮ್ಮ ವಿನಾಶಕ್ಕೆ ಕಾರಣವೆಂದರಿತು

ಸಮಾಧಾನಿಯಾಗಿರಬೇಕಯ್ಯಾ.
ಸದ್ಭಾವ ಸದ್ಭಕ್ತಿ ಸ್ಥಿರವಾಗಿರ್ದೊಡೆ ಬೇಡಿದ್ದನೀವ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೦೩.

ಅಕ್ಕರೆಯ ಪಕ್ಷಿ ನಕ್ಕು ನಲಿಯಲಿ.
ಸಿಕ್ಕಸಂತಸದ ಕ್ಷಣ ಹಣ್ಣಾಗಲಿ.
ಬಣ್ಣದ ಗರಿ ಬಿಚ್ಚಿ ಹಾರಾಡಲಿ.
ಚಿಣ್ಣರ ಮನದಂತೆ ಓಲಾಡಲಿ.
ಕಣ್ಣಂಚಲಿ ಮಿಂಚು ಸಂಚಲಿಸಲಿ.
ಬೆಡಗಿನಲಿ ಮನದೊಡೆಯನ ಸ್ಮರಿಸಲಿ.
ಯುಗಯುಗಾದಿಗೆ ಬೇವು ಬೆಲ್ಲಸವಿಯಲಿ.
ಕಷ್ಟನಷ್ಟಗಳಿಗೆ ಬೆದರದೇ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶನ
ದಿವ್ಯ ಪಾದಪದ್ಮಂಗಳ
ಪಿಡಿದು ಚಿರಶಾಂತಿ ಹೊಂದಲಿ

೦೪.

ಅಕ್ಕರಕೆ ಮನಸಾರೆ ನಮಿಸಿದೊಡೆ
ಅಕ್ಕರತೆ ತೋರುವಳು ವಾಗ್ದೇವಿ.
ಕಕ್ಕುಲತೆಯಲಿ ತಕ್ಕ ನುಡಿಗಳನೇ
ನುಡಿಸಿ ಹರಸುವಳು ಸಿರಿದೇವಿ.
ಜಂಭವನು ತೊರೆದು
ನಂಬಿಕೆಯ ನಂಟಿನಲಿರ್ದೊಡೆ
ಕಂಟಕವ ಕಳೆವಳು ಮಹಾದೇವಿ.
ಚಕ್ಷುಗಳಲಿ ಸದ್ಭಾವ, ಅಕ್ಷರದಲಿ ಅಗಣಿತ ಭಕ್ತಿ

ತುಂಬಿರ್ಪ ಶರಣಂಗೆ ಸೋಲೆಂಬುದಿಲ್ಲವೆಂದ
ನಮ್ಮ ಕೋಟಿ ಸೂರ್ಯ ಸಮಪ್ರಭೆಯುಳ್ಳ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ.

೦೫.

ಅಭಿಮಾನವಿರಬೇಕು ಶರಣಂಗೆ,
ವಿಭೂತಿ ಧರಿಸಿದವರ ಆದರಿಸಬೇಕೆಂಬ.
ಒಲವಿರಬೇಕು ಶರಣಂಗೆ,
ರುದ್ರಾಕ್ಷಿ ಭೂಷಿತರು ಭದ್ರನ ಬಳಗವೆಂಬ.
ಮನವಿರಬೇಕು ಶರಣಂಗೆ
ಇಷ್ಟಲಿಂಗಧಾರಿಗಳಿಗೆ ಗೌರವಿಸಬೇಕೆಂಬ.
ಅರಿವಿರಬೇಕು ಶರಣಂಗೆ,
ಗುರು, ಲಿಂಗ, ಜಂಗಮ ಮಹಾದೇವನೆಂಬ.
ನೆನಹಿರಬೇಕು ಶರಣಂಗೆ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನೇ ಸರ್ವ ಸಮರ್ಥನೆಂಬ.

೦೬.

ಅಟ್ಟಹಾಸದಿ ಮೆರೆವ ಬೆಟ್ಟದಷ್ಟು ಸಮಸ್ಯೆಗಳು.
ಜಟ್ಟಿಗೂ ಜಗ್ಗದ ಜಂಜಾಟಗಳು.
ನಟ್ಟಿರುಳಲಿ ನಡುಗಿಸುವ ಅಪಸ್ವರಗಳು.
ಒಟ್ಟಾಗಿ ಕಂಗೆಡಿಸುವ ತಾಪತ್ರಯಗಳು.
ಕಷ್ಟಗಳಿಗೆ ಕೈ ಹಿಡಿವರಾರಿಲ್ಲವೆಂದು
ಅಂಜದಿರು.ಅಳುಕದಿರು ಮನವೇ.
ಶ್ರೇಷ್ಠವಾದ ಗುರು ಕರುಣಿಸಿದ ಇಷ್ಟಲಿಂಗವ
ಮನಮುಟ್ಟಿ ಒಮ್ಮನದಿ, ನಿಷ್ಠೆಯಿಂದಲಿ

ಅರ್ಚಿಸಿದೊಡೆ ಎಲ್ಲವೂ ಬಟ್ಟಬಯಲೆಂದ
ಏಕೈಕ ಜಗದ ಜಂಗಮಾಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೦೭.

ಅರಿವಿಂಗೆ ಗುರು ಮೂಲ ಆಂಗಕ್ಕೆ ಜಂಗಮ ಮೂಲ
ಗುರು ಆಂಗ ಜಂಗಮಕ್ಕೆ ಸೃಷ್ಟಿ ಸ್ಥಿತಿ ಲಯಗಳ ಬೆಸುಗೆ
ಯಾವುದು ಮೂಲ ಯಾವುದು ಕೊನೆ
ಶೂನ್ಯದ ಬಿಂದು ಅದು ಹೇಗೆ ಕಾಂಬುದು ?
ಅಪರಂಪಾರ ಮಹಿಮ
ಶ್ರೀ ಶಿವಶಕ್ತಿ ಪ್ರೀಯ ದೇವಸೂಗೂರೇಶಾ
ನಿಮ್ಮ ದಿವ್ಯರೂಪ ನೋಡಲಾಗದು
ಭವ್ಯ ನಿಲುವು ಅರ್ಥೈಸಲಸದಳ ತಂದೆ

೦೮

ಅರಿವಿನಾಹಿರಿಮೆಗೆ ಅಹಂಕಾರವಿರದು.
ಅರಿವುಗೆಟ್ಟಾಗ ದುರಹಂಕಾರಕೆ ದಾರಿ ದೊರೆಯುವುದು.
ಕೊಡುಗೈ ಧೀರ ಕರುಣವಾರಿಧಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಚರಣ ಅರಿತು ಭಜಿಸಿದೊಡೆ ಸ್ಥಿರಮುಕ್ತಿಯಹುದು.

೦೯.

ಅರಿವು ಮರೆತು ದಕ್ಷ, ಕುರಿ ತಲೆಯ ಹೊಂದಿದ.
ಅರಿವು ಅರಿತ ಶ್ರೀಹರಿ, ಚಕ್ರ ಸಂಪಾದಿಸಿದ.
ಅರಿವಿನ ಅಂತಃಕರಣಕೆ, ಗಣಪದವಿ ಸಂಭ್ರಮಿಸಿತು ಗಣಪಂಗೆ.

ಅರಿವು ಅರಿತ ಮಾರುತಿಗೆ, ಆಂಗದೀಕ್ಷೆ ಸಿದ್ಧಿಸಿತು.
ಅರಿವಿನ ಹಿರಿಮೆಗೆ, ಅಹಂಕಾರ ಕಿಂಚಿತ್ತೂ ಬಾರದು.
ಅರಿವುಗೆಟ್ಟಾಗ ಅಹಂಕಾರಕೆ ಪುಷ್ಟಿ ದೊರೆಯುವುದು.
ಕೊಡುಗೈ ಧೀರ ಕರುಣಾವಾರಿಧಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ ಚರಣಕಮಲ
ಅರಿತು ಭಜಿಸಿದೊಡೆ ಸ್ಥಿರಮುಕ್ತಿ ಶಾಶ್ವತವಹುದು ನಿನಗೆ.

೧೦.

ಅರಿವಿಂಗೆ ಗುರು ಕಾರಣ. ಆಂಗಕ್ಕೆ ಭಾವ ಕಾರಣ.
ಸಮಾಜಕ್ಕೆ ಜಂಗಮ ಕಾರಣ. ಧರ್ಮಕ್ಕೆ ದಯೆ ಕಾರಣ.
ಅರಿವು ತೊರೆದೊಡೆ ಭಾವವೆಲ್ಲಿ,?
ಭಾವವಿಲ್ಲದೊಡೆ ಸಮಾಜವೆಲ್ಲಿ?,
ಸಮಾಜ ತೊರೆದೊಡೆ ಧರ್ಮವೆಲ್ಲಿ?
ಎಲ್ಲವೂ ಗೊಂದಲದ ಗೂಡಾಗಿ,
ಮನ ಅವ್ಯವಸ್ಥೆಯ ಆಗರವಾಗವ ಮುನ್ನ,
ಅಗಣಿತ ಗುಣಧಾಮ ಗುರು ಸಾರ್ವಭೌಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ
ಪಾವನ ಪಾದಕ್ಕೆ ಶರಣಾಗು ಮನವೇ.

೧೧.

ಅರಿವಿನ ಅಂಗಳದಲ್ಲಿ ಬೇರಿಲ್ಲದ ಮರ ಹುಟ್ಟಿತ್ತು
ಆ ಮರ ಬಯಸಿದಾಗ ಭಾರವಿಲ್ಲದ ಕಾಯಾಗಿತ್ತು
ಆ ಮರವೇ ಭಾರವೆನಿಸಿತ್ತು ಮರನೊಂದಿತ್ತು
ಆ ಮರ ಭೂಮಿಗೆ ಉರುಳಿತ್ತು.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನೆ
ಕರುಣಿಸಿದನೆಂದು ಶ್ರೀ ಚರಣದಿ ಕಂಬನಿ ಸುರಿಸಿತ್ತು ನೋಡಾ

೧೨.

ಅರಿವಿಲ್ಲದ ಮನುಜ ಕೊರಡಿನಂತೆ.
ಅರಿವಿಲ್ಲದ ಮನ ತರಗೆಲೆಯಂತೆ.
ಅರಿವಿಲ್ಲದ ನಿರ್ಧಾರ ಕೂರಲಗಿನಂತೆ.
ಅರಿವು ಗೌರವ ತರುವುದಂತೆ,
ಅರಿವು ಸದ್ಗುಣಗಳ ಆಗರವಂತೆ.
ಅರಿವು ಕಣ್ದೇರೆಯದವರಲಿ ಆರತಿಯ ನೊಲ್ಲನಂತೆ
ಅಕ್ಕನ ವಚನ ಅಮೃತದಂತೆ.
ಅರಿವು ಅಂತರಾತ್ಮನಲಿ ಅರಳುವ ಕಮಲವಂತೆ,
ಅಂತೆಕಂತೆಗಳ ಸಂತೆಯಲಿ ನಾವಿರುವುದಂತೆ.
ಅರಿವು ಧರ್ಮಾಧರ್ಮಗಳ ತೂಕವಂತೆ
ಆಗು ಹೋಗುಗಳು ಕರ್ಮಾನುಸಾರವಂತೆ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಧರ್ಮಪ್ರಭು ನೀವಿರುವಾಗ ತಿಲಮಾತ್ರವಿಲ್ಲ ಚಿಂತೆ,

೧೩

ಅಲ್ಲಿ ಇಲ್ಲಿ ಎಲ್ಲೆಲ್ಲೋ ಓಡುತ್ತಿರುವುದು ಹುಚ್ಚುಮನ.
ಅದು ಇದು ಏನೇನೋ ಬಯಸುತ್ತಿರುವುದು ಕೊಚ್ಚೆಮನ.
ಮನವ ನಿಶ್ಚಲಗೊಳಿಸಲು ಸದಾ ಸದ್ಗುರುವಿನ
ತತ್ವೋಪದೇಶ ಆಲಿಸುತ್ತಿರುವುದು ಚೆನ್ನ.
ಸತ್ಸಂಗ ಶರಣರ ನುಡಿಗಳನ್ನು
ಅರ್ಥೈಸಲು ಬೇಕು ಅವಿರತ ಅಧ್ಯಯನ.
ನಿತ್ಯವೂ ಶ್ರಾವಣವೆಂದು ಮುಮುಕ್ಷಗಳ ಚರಿತ್ರೆಯಲಿ
ಚಲಿಸುತ್ತಲಿರಬೇಕೆಂದ ಎನ್ನೊಡೆಯ ಅಗಣಿತ ಅನುಭಾವದ ಖಣಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೪

ಅರ್ಥವಿಲ್ಲದೆ ತೀರ್ಥಸ್ನಾನಮಾಡಿದಡೇನು?.
ಭಂಡತನ ಬಿಡದೆ ಮಂಡೆ ಬೋಳಿಸಿದಡೇನು.?
ವಂಚನೆಯ ಬಿಡದೆ ಕಾಂಚಾಣ ಸಂಪಾದಿಸಿದಡೇನು.?
ಮೋಹ ಬಿಡದೆ ಮಂತ್ರ ಜಪಿಸಿದಡೇನು.?
ಮತ್ಸರವ ಬಿಡದೆ ಉತ್ಸವವ ಗೈದಡೇನು.?
ಏನು ಮಾಡಿದಡೇನು ? ಕರ್ಮ ಫಲ ಕಳೆಯದಯ್ಯಾ,
ದಯೆ ಇಲ್ಲದ ಧರ್ಮವಾವುದಯ್ಯಾ. ಧರ್ಮವಿಲ್ಲದ
ಕರ್ಮದ ಫಲ ಅನುಭವಿಸಲೇ ಬೇಕೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫

ಅಕ್ಷಿಯಲಿ ನಿಮ್ಮ ನಕ್ಷೆಯ ವೀಕ್ಷಿಸಿ
ಸಾಕ್ಷ್ಯರೂಪವ ಕಾಣುವೆನಯ್ಯ।
ತನುವಿನಲ್ಲಿ ನಿಮ್ಮ ನೆನಹು ತುಂಬಿ
ಚಣಕಾಲ ನಿಮ್ಮ ನೆನೆವೆನಯ್ಯ
ಪ್ರಾಣದಲ್ಲಿ ನಿಮ್ಮತ್ರಾಣವ ತುಂಬಿ
ಜಾಣದೇವ ನಿನ್ನ ಕಾಣುವೆನಯ್ಯ
ರಕ್ತದಲ್ಲಿ ನಿಮ್ಮ ಶಕ್ತಿಯ ತುಂಬಿ
ಭಕ್ತಿಯಲಿ ಮುಕ್ತಿಯ ಬೇಡುವೆನಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ನಿಮ್ಮ ದಿವ್ಯ ಚರಣವ ಪಿಡಿದೆ
ಕಾರುಣ್ಯ ಹರಸಿ ಸ್ಥಿರಮುಕ್ತಿ ನೀಡಯ್ಯ......

೧೩

ಅಕ್ಷರ ಬಾರದ ನಿರಕ್ಷರ ಕುಕ್ಷಿಗೆ ಶಿಕ್ಷಣವಿತ್ತ ಶಿಕ್ಷಕ ನೀನಯ್ಯಾ.
ಜ್ಞಾನವಿಲ್ಲದ ಅಜ್ಞಾನಿಗೆ, ಸುಜ್ಞಾನ
ಸುರಿದ ಶ್ರೀಗುರು ನೀನಯ್ಯಾ.
ಅನಾಥ ಮಗುವಿಗೆ ಆಸರೆಯಾದ
ಮಮತಾಮಯಿ ನೀನಯ್ಯಾ,
ಆಚಾರವಿಲ್ಲದ ಅನಾಚಾರಿಗೆ,
ಸುವಿಚಾರಗಳಿತ್ತ ಸುರಧೇನು ನೀನಯ್ಯಾ.
ಅನುಭವವಿಲ್ಲದ ಅನಾನುಭವಿಗೆ,
ಅನುಭವ ನೀಡಿದ ಅನುಭಾವದಲ್ಲಮನು ನೀನಯ್ಯಾ,
ಕಾನನದಲಿರ್ದ ಕಗ್ಗಲ್ಲಿಗೆ,
ಕಡುಪ್ರೇಮದಿಂ ಕಟೆದು ಮೂರ್ತಿ ಮಾಡಿದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ
ಗುರು,ಲಿಂಗ,ಜಂಗಮನಾಗಿ ಗೋಚರಿಸಿದಿರಯ್ಯಾ,
ಆನು ನಿಮ್ಮ ಶ್ರೀ ಚರಣಂಗಳ ಪಿಡಿದು
ನಿಮ್ಮನೇ ಭಜಿಸುತ್ತ ಬದುಕಿರ್ದೆನಯ್ಯಾ.

೧೭

ಅಹಂಕಾರವೆಂದರೆ ಮದ,
ಅಹಂಕಾರವೆಂದರೆ ಸೊಕ್ಕು.
ಅಹಂಕಾರದಿಂದಲೇ ತಪ್ಪು.
ಅಹಂಕಾರದಿಂದಲೇ ಮುಪ್ಪು,
ಸಹಕಾರ ಸಿಕ್ಕರೆ ಅದರ ಕುಹಕತನ ಹೆಚ್ಚುವುದು.
ಮಮಹತ್ಕಾರ್ಯಗಳ ಮುಚ್ಚುವುದು .
ಬಹುಜನರ ಚುಚ್ಚುವುದು .. ಸ್ನೇಹಕ್ಕೆ ಕಚ್ಚುವುದು.
ಪಾಪ ಬುದ್ಧಿಗೆ ಹಚ್ಚುವುದು. ಕೋಪವು ಹೆಚ್ಚುವುದು.

ಶಾಪಕ್ಕೆ ನೆಚ್ಚುವುದು. ಸಂಬಂಧಗಳು ಕಳಚುವುದು.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶಾ
ಅಹಂಕಾರಿಗಳ ಹಲ್ಲು ಮುರಿದು ಸೊಲ್ಲಡಗಿಸಿ
ಮಹಾದೇವ ನಿನ್ನ ಭವ್ಯರೂಪವ ಕಂಡು
ದಿವ್ಯಚರಣಕೆ ನಮೋ ನಮಃ ಎನುತಿರ್ದೆನಯ್ಯ.

೧೮

ಅಂಗದ ಮೇಲೆ ಲಿಂಗವ ಧರಿಸಿ,
ಜಂಗಮನ ಜರಿಯುವುದೇಕೋ?
ಹಣೆಗೆ ವಿಭೂತಿ ಕೊರಳಿಗೆ ರುದ್ರಾಕ್ಷಿ
ಧರಿಸಿ ಪ್ರಣವ ಪಂಚಾಕ್ಷರಿ
ನುಡಿಯುವ ನಾಲಿಗೆ ವಿಭೂತಿ
ಪುರುಷರ ಹಳಿಯುವುದೇಕೋ ?.
ಅಷ್ಟಾವರಣವನರಿಯದೇ ಷಟ್ ಸ್ಥಲ ಸಾಧನೆಗೆ
ಅವಕಾಶವಿಲ್ಲವೆಂಬುದನರಿಯದವ ಅದೆಂತು
ವೀರಶೈವ ಲಿಂಗಾಯತನೋ ?
ಸಾಧನೆಯ ಹಾದಿ ಬಿಟ್ಟು
ಸರ್ವನಾಶದ ಹಾದಿಗೆಳೆಸುವವರ ಸಹವಾಸವೇ ಬೇಡವೆಂದ,
ಎನ್ನೊಡೆಯ ಜಗದಾದಿ ಜಗದ್ಗುರು ಜಗದೇಕವೀರ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೯

ಅಂಗವಾಗಿ ನಾನಿರಲು ಲಿಂಗವಾದ ಶ್ರೀಗುರು ವೀರೇಶ,
ಅಂಗೈಯೊಳ ಲಿಂಗವನಿರಿಸೆ, ಜಂಗಮವಾಗಿ
ಕಂಗೊಳಿಸಿದ ಚನ್ನವೀರೇಶ.
ಅಂಗವೆಲ್ಲಿ? ಲಿಂಗವೆಲ್ಲಿ? ಜಂಗಮವೆಲ್ಲಿ?

ಎಂದು ಮನದುಂಬಿ ಸಂಭ್ರಮಿಸುತಿರ್ದೊಡೆ,
ಇಷ್ಟಲಿಂಗದಲಿ ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ ತೊಳಗಿ ಬೆಳಗುತಿರ್ದ
ಸುಪ್ರಭೆಯ ಕಂಡು ನಾ ಬೆಕ್ಕಸ ಬೆರಗಾದೆ
ಸಾಕಾರ ನಿರಾಕಾರ ನಿರಂಜನ ಪ್ರಭುವೇ.

೨೦

ಆಹಾ ರುದ್ರ, ಆಹಾ ಭದ್ರ ಎಂದು
ವೀರಗಾಸೆ ಉದ್ಘೋಷಿಸುವರು ನಿಮ್ಮ ಕವಿತೆ.
ನಿಗಿ ನಿಗಿಪ ಅಗ್ನಿಯನು ತುಳಿದು
ಸಾಗುವರು ಶ್ರೀ ವೀರಭದ್ರ ಎನ್ನುತೇ .
ಹೆಗ್ಗಳಕೆಯ ಗುಗ್ಗುಳವ ಬೆಳಗಿಸಿ ಉಗ್ಗಡಿಸುವರು ನಿನ್ನ ಚರಿತೆ.
ಅಂದಿಗುಂಟು ಇಂದಿಗಿಲ್ಲ
ಎನ್ನಲಾಗದು ಪಾವಿತ್ರ್ಯತೆಯ ಸತ್ಯ ಕಥೆ .
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಜಗದಾದ್ಯಂತ ಮೆರೆಯತಿದೆ ನಿಮ್ಮ ಕೀರ್ತಿ ಪತಾಕೆ.
ನಿಮ್ಮ ಕರುಣೆ ಇಹುದ ಭಕ್ತ ಸಮೂಹಕೆ

೨೧

ಆಡುವ ನುಡಿಯಲಿ ನಿಮ್ಮ ಧ್ಯಾನದ ಅರ್ಥವಿರಲಿ.
ನೋಡುವ ನೋಟದಲಿ ನಿಮ್ಮ ಕಾಣುವ ಬಯಕೆ ಇರಲಿ.
ಮಾಡುವ ಕಾರ್ಯದಲಿ ನಿಮ್ಮ ಸೇವಾಭಾವವಿರಲಿ,
ಬೇಡುವ ಮನದಲಿ ನಿಮ್ಮ ನೆನಹು ತುಂಬಿರಲಿ.
ಆಲಿಸುವ ಕರಣಂಗಳಲಿ ನಿಮ್ಮ ನಾಮವು ನಿನಾದಿಸುತ್ತಿರಲಿ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

ನಿಮ್ಮ ಅಪ್ರತಿಮ ಪ್ರಖರ ಪ್ರಜ್ವಲಿಪ ಪಾದಗಳಡಿ
ಎನ್ನ ಅಳಿದುಳಿದ ಕುಕರ್ಮಗಳು ಭಸ್ಮವಾಗಲಿ.

೨೨

ಆದ್ಯರ ವಚನಗಳೆನಗೆ ಸ್ಫೂರ್ತಿಯಾದವು.
ಸದ್ವಿಚಾರಗಳೆನಗೆ ಮೆಚ್ಚುಗೆಯಾದವು.
ಸದಾಚಾರಗಳೆನಗೆ ಆಧಾರ ಸ್ತಂಭಗಳಾಗಿ ನಿಂತವು.
ನೀತಿ ರೀತಿಗಳೆನಗೆ ದಾರಿದೀಪಗಳಾಗಿ ಬೆಳಕು ಚೆಲ್ಲಿದವು.
ನಡೆ ನುಡಿಗಳೆನಗೆ ತಂಪಾದ ನೆರಳು ನೀಡಿದವು.
ಅವರ ಅನುಕರಣೆಯಿಂದಾನು ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಪ್ರತಿಮ ವಿರಾಟ್ ದರ್ಶನ
ಕಣ್ತುಂಬಿಕೊಳ್ಳಲು ಕಾರಣವಾಯಿತ್ತು.

೨೩

ಆದಿಯಲ್ಲಿ ರುದ್ರನಿಂದ ಉದಯಿಸಿದ ಭದ್ರ.
ಸಾಧು ಸಜ್ಜನರಿಗೆ ಕರುಣಾ ಸಮುದ್ರ,
ಕಾಲನಿಗೆ ಕಾಲ, ನೀಲಕಾಯದ ವೀರಭದ್ರ.
ಆಚಾರಕೆ ದಳಪತಿ, ವಿಚಾರಕ್ಕೆ ಅಧಿಪತಿ.
ಅನ್ಯಾಯ ಅನಾಚಾರ ಸಹಿಸದ ಭೂಪತಿ.
ಕಲ್ಯಾಣದ ಬಸವನ ನಡೆಗೆ ಒಪ್ಪಿದ ಜಂಗಮ ಮೂರುತಿ.
ದಶದಿಕ್ಕುಗಳಿಗೆ ಹರಡಿದ ನಿಮ್ಮಯ ಕೀರ್ತಿ
ಸೊಕ್ಕಿಗಾಗಿ ಕುರಿತಲೆ ಪಡೆದ ದಕ್ಷ ಪ್ರಜಾಪತಿ.
ಸ್ವಾಮಿನಿಷ್ಠೆ ತೋರಿ ಚಕ್ರ ಪಡೆದ ಶ್ರೀಪತಿ.
ಭಕ್ತಿ ಭಾವದಿಂದ ಲಿಂಗ ಪಡೆದ ಮಾರುತಿ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ ಕೀರುತಿ.

೨೪

ಆಸೆಯೆಂಬ ಅಶ್ವವನೇರಿ ಮೋಸ ವಂಚನೆಗಳ
ಸುಳಿಗೆ ಸಿಲುಕಿ ಫಾಸಿಗೊಳ್ಳದಿರು ಮನವೇ
ಆಸೆಯಿಂದಾಗಿ ಬಲಶಾಲಿ ರಾವಣ
ಕೋಪದಿಂದಾಗಿ ಪರಾಕ್ರಮಿ ಕೌರವ
ನಾಶವಾದದು ಮರೆಯದಿರು ಮನವೇ.
ಹಸನಾದ ಹಾದಿಯಲ್ಲಿ ಕಾಯಕ ಗೈದು
ವ್ಯಸನಗಳಳಿದು ನಿಶ್ಚಿಂತೆಯಲಿ ಖುಷಿಯಾಗಿರು ಮನವೇ
ಹಸಿವೆಗೆ ಪರಮಾನ್ನ ತೃಷಗೆ ಜಲ ಪ್ರಸಾದಿಸುವ ಪ್ರಭು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ
ನಿತ್ಯವೂ ನೆನೆಯುತ ಸುಖದಲ್ಲಿ ಸಂಭ್ರಮಿಸು ಮನವೇ

೨೫

ಆಡುವ ನುಡಿಯಲಿ ನಿಮ್ಮ ಧ್ಯಾನದ ಅರ್ಥವಿರಲಿ.
ನೋಡುವ ನೋಟದಲಿ ನಿಮ್ಮ ಕಾಣುವ ಬಯಕೆ ಇರಲಿ,
ಮಾಡುವ ಕಾರ್ಯದಲ್ಲಿ ನಿಮ್ಮ ಸೇವಾಭಾವವಿರಲಿ,
ಬೇಡುವ ಮನದಲಿ ನಿಮ್ಮ ನೆನಹು ತುಂಬಿರಲಿ.
ಆಲಿಸುವ ಕರಣಂಗಳಲಿ ನಿಮ್ಮ ನಾಮವು ನಿನಾದಿಸುತ್ತಿರಲಿ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ
ಅಪ್ರತಿಮ ಪಾದಗಳಡಿ ಪಾಪ ಕರ್ಮಗಳು ಭಸ್ಮಗೊಳ್ಳಲಿ

೨೬

ಆಡುವಾ ನುಡಿಯು ಕಾಡದಂತಿರಬೇಕಯ್ಯಾ,
ನೋಡುವಾ ನೋಟವು ಸುಡದಂತಿರಬೇಕಯ್ಯಾ,
ತುಡಿತದಾ ಮನವು ಅಡಗದಂತಿರಬೇಕಯ್ಯಾ

ಮೃಡನ ಭಜಿಸುವಾ ಪರಿ ಕಂಡು ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸುಪ್ರಸನ್ನನಾಗಬೇಕಯ್ಯಾ, ಅಂದಾಗ ಜೀವನ ಸಾರ್ಥಕವಯ್ಯಾ.

೨೭

ಆಸೆಯನ್ನು ಅಳಿಸಯ್ಯ. ಆಸೆ
ಅಧಿಕವಾದೊಡೆ ಕಾಮಿ ಎನಿಸುವುದಯ್ಯ.
ಕಾಮನೆಗಳು ದೊರೆಯದಿರೆ
ಕ್ರೋಧ ಆವರಿಸುವುದಯ್ಯ.
ಕಾಮನೆಗಳು ಈಡೇರಿದೊಡೆ
ಮೋಹ ಆವರಿಸುವುದಯ್ಯ.
ಕಾಮಿತ ವಸ್ತು ಕಣ್ತಪ್ಪಬಾರದೆಂದು
ಲೋಭ ಆವರಿಸುವುದಯ್ಯ,
ಕಾಮಿತ ವಸ್ತು ನನ್ನದು ಎಂದು ಮದ ತುಂಬುವುದಕ್ಕೆ.
ಆ ಕಾಮಿತ ವಸ್ತುಗಳು ಬೇರಾರಲಿ
ಇದ್ದಲ್ಲಿ ಮತ್ಸರ ಉಕ್ಕುವುದಯ್ಯ
ಇದು ಕಾರಣ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಆಸೆಯ ಅಳಿಸಿ ನಿನ್ನ ನಾದದಲಿ
ಇರುವ ಆಸೆಯೊಂದೆ ಉಳಿಸಯ್ಯ

೨೮

ಆನೆಯ ಬಲ ಇರುವೆ ಬಲಕ್ಕೆ ಸಮವೇನಯ್ಯಾ.
ಜಗದೀಶನ ಶಕ್ತಿ ಮುಗ್ಧ ಮನದ
ಭಕ್ತಿಗೆ ಸರಿಸಾಟಿಯೇನಯ್ಯಾ.
ಬಲದ ಲೆಕ್ಕ ತಪ್ಪೆನಿಸಿದರೂ ಗಾತ್ರದ
ಮೇಲಿನ ಲೆಕ್ಕ ತಪ್ಪಾಗಲಾರದಯ್ಯಾ.

ಇರುವೆಗಳ ದಂಡು ಮೃತ ಗಜವನ್ನಲು–
ಗಾಡಿಸುವವು ಎಂಬುದು ಸತ್ಯವಯ್ಯಾ.
ಭಕ್ತಿಯ ಶಕ್ತಿಗೆ ಪರಶಿವ ಮೆಚ್ಚಿ ಭಕ್ತರ ಅಪೇಕ್ಷೆ
ಪೂರ್ಣಗೊಳಿಸಿದ್ದು ಜಗಜ್ಜಾಹೀರುಗೊಂಡಿವೆಯಯ್ಯಾ.
ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಷ್ಕಾಮ ಭಕ್ತಿಗೆ ಶಾಶ್ವತ ಮುಕ್ತಿ
ಕರುಣಿಸುವುದು ಖಚಿತವಯ್ಯಾ.

೨೯

ಇದ್ದದ್ದು ಇದ್ದ ಹಾಗೆ ಎಂದಿಗೂ ಇರದು.
ಬುದ್ಧಿವಂತರೂ ತಿದ್ದಿ ತೀಡಲು ಆಗದು.
ಜಿದ್ದಿಗೆ ಬಿದ್ದು ಇದ್ದುದೆಲ್ಲವ ಕಳೆದು ಕೊಂಡರಾಗದು.
ಸದ್ದಿಲ್ಲದೆ ಹಳೆಯದು ಬಿದ್ದು ಹೊಸತು ಎದ್ದು ನಿಲ್ಲುವುದು.
ಇದು ಸದ್ಬುದ್ಧಿಗೂ ನಿಲುಕದ ಜಗದ ನಿಯಮವೆಂದರಿತು
ಸದ್ಭಾವದಲಿ ಬಾಳಬೇಕೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೩೦

ಇಷ್ಟಲಿಂಗ ಧರಿಸಲು ಕಷ್ಟವೆನ್ನುವವ
ಲಿಂಗವಂತನೇನಯ್ಯಾ?
ಭಸ್ಮಧರಿಸಲಾಗದವ ಶಿವಭಕ್ತನೆಂತಯ್ಯಾ.?
ಲಾಂಛನಕ್ಕೆ ತಕ್ಕಂತೆ
ಆಚಾರವಿಲ್ಲದವನೆಂತು ವೀರಶೈವನಯ್ಯಾ?.
ಸ್ವಾರ್ಥಸಾಧನೆಗಾಗಿ ಪ್ರಭೇದ
ಕಲ್ಪಿಸುವವ ಅದೆಂಥ ಜಂಗಮನಯ್ಯಾ?
ಜಂಗಮ ಜಡವಲ್ಲ, ನಿರಂತರ ಸಮಾಜ

ಕಟ್ಟುವ ಚರಮೂರ್ತಿಯಾಗಬೇಕಯ್ಯಾ,
ವಿಚಾರದಲಿ ವೀರನಾಗಿ, ಆಚಾರದಲಿ
ಶೈವನಾಗಿರುವಾತ ವೀರಶೈವನಯ್ಯಾ.
ಲಿಂಗವನ್ನು ನಿಷ್ಠೆಯಿಂದಲಿ
ಪೂಜಿಸುವಾತ ಲಿಂಗಾಯತನಯ್ಯಾ,
ಇವನಾರವನೆನ್ನದೆ ಇವನಮ್ಮವ,
ಇವನಮ್ಮವನೆನ್ನುವವ
ಸತ್ಯಶುದ್ಧ ಲಿಂಗಾಯತನಯ್ಯಾ, ಪದಗಳು ಬೇರೆ
ನಿಜಾರ್ಥ ಒಂದೇ ಎಂದ ಜಗದಾದಿ
ಜಗದ್ಗುರು ಜಂಗಮಪುಂಗವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ.

೩೧

ಈಶನೊಲಿಮೆಗೆ ಬೇರೆ ಭಾಷೆ ಬೇಕಿಲ್ಲ.
ಆಡಂಬರದ ಪೂಜೆಗೆ ಒಲಿಯುವವನೇ ಅಲ್ಲ.
ಹಮ್ಮು ಬಿಮ್ಮುಗಳಿಗೆ ಹಿಗ್ಗುವವನಲ್ಲ.
ನಿರ್ಮಲ ಹೃದಯದ ಮುಕ್ತ ಮನದ ಸತ್ಯಭಕ್ತಿಗೆ
ನಲಿದು ಬರುವ ಎನ್ನೊಡೆಯ ನಿರಾಕಾರ
ನಿರಂಜನ ನಿರವಯ ನಿಷ್ಕಳಂಕ ನಿತ್ಯಾತ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩೨

ಉಸಿರು ಉಸಿರೋಳ್ ಬೆರೆತು ಬಸಿರು ಒಸೆದಿತ್ತು.
ಬಸಿರು ಕಸಿವಿನಿಂ ಬೆಳೆದು ಕೂಸು ಬೆಳೆಯಿತ್ತು.
ಕೂಸು ಮಿಸುಕಾಡುವ ಮುನ್ನ
ವಸುಧೆಯ ಸ್ಥಿತಿ ಅರಿತಿತ್ತು.

ವಸುಧೆಯಲಿ ರಾಗದ್ವೇಷಾಗ್ನಿ ಜ್ವಾಲೆಗೆ ಬೇಸರಿಸಿತ್ತು.
ಬೇಸತ್ತು ಮಗು ಜಗದೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ಭಜಿಸಿತ್ತು.
ನಶ್ವರದ ಬದುಕು ಆಶಿಸದೆ ಸದ್ವಿವೇಕದಿಂ
ನಿಜಪದವಿಗೆ ಭಾಜನವಾಗಿತ್ತು.

೩೩

ಏನೆಂದು ಪೂಜಿಸಲಿ ವೀರೇಶಾ,
ಏನೆಂದು ನಾ ಭಜಿಸಲಿ ಸರ್ವೇಶಾ.
ಮಂತ್ರವು ಬಾರದು ತಂತ್ರವು ತಿಳಿಯದು
ಅತಂತ್ರದಲಿ ನಿಮ್ಮ ಅರ್ಚಿಸುತಿರುವೆ
ಜಲವ ತಂದು ಸುರಿಯುವೆ. ಕೆಲ ಹೂಗಳ ಹಾಕುವೆ.
ಫಲಗಳನಿರಿಸಿ ಕೈ ಮುಗಿಯುತಿರುವೆ
ಶಕ್ತಿಯು ಎನಗಿಲ್ಲ, ಭಕ್ತಿಯು ಇನಿತಿಲ್ಲ.
ಮುಕ್ತಿಯನು ಬೇಡುತ್ತಿರುವ ಮೂಢನು
ನಾನು ಬೇಡುವೆನು ಏನೆಲ್ಲ ಮೃಡನೀ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಕಡುಪ್ರೇಮದಿ ನೋಡುತಿರುವೆ
ನಿಮ್ಮ ನಸುನಗೆಯ ಕಸುವು
ಎನಗೆ ಆಶಿಸುತಿರುವೆ ನಾ ಇದನೆ

೩೪

ಓದಿದೊಡೆ ಗಿಳಿ ಪಾಠವಾಯಿತ್ತು.
ನಾದಿದೊಡೆ ಹದವಾಯಿತ್ತು.
ಬೋಧಿಸಿದೊಡೆ ಅರಿವಿಂಗೆ ಬಂದಿತ್ತು.
ಅದು ಕ್ರಿಯೆಗೊಳಗಾರ್ದೊಡೆ ಸ್ವಾನುಭವವಾಯಿತ್ತು.

ಆನು ಮನದುಂಬಿ ನುತಿಸುತ್ತಿರ್ದೆನಾಗಿ ನಿಗಮಾಗಮಾತೀತ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಪ್ರತಿಮ ಪಾದಪದ್ಮಂಗಳೆನಗೆ
ಆಸರೆಯಾಗಿ ಶ್ರೀರಕ್ಷೆಯಾದವು ತಂದೆ.

೩೫

ಓಂ ಪ್ರಣವಾಕ್ಷರದಿ ಅತುಲ ಸತ್ವವಹುದು ಕಾಣಿರೋ,
ಓಂಕಾರದಿ ಅ, ಉ, ಮ ಸಂಗಮವಿದೆ ನೋಡಿರೋ.
ಓಂಕಾರದಿ ಸೃಷ್ಟಿ, ಸ್ಥಿತಿ, ಲಯ ಅಡಗಿಹುದು.
ಓಂಕಾರ ಸಂತಾನ ಕರುಣಿಸುವುದು.
ಓಂಕಾರ ಆರೋಗ್ಯ ಕಲ್ಪಿಸುವುದು.
ಓಂಕಾರ ಸಕಲ ದೋಷಗಳನಳಿಸುವುದು.
ಓಂ ನಮಃ ಶಿವಾಯ
ಮಹಾಮಂತ್ರ ಶ್ರೇಷ್ಠ ಕಾಣಿರೋ.
ಶ್ರೀಗುರು ಬೋಧಿಪುದು ಇದೇ ಮಂತ್ರ ನೋಡಿರೋ.
ಜಪ ತಪಗಳಲಿ ಸಾರ್ವಕಾಲಿಕ
ಸರಳಮಂತ್ರ ಕಾಣಿರೋ,
ಈ ಓಂಕಾರ ನಿನಾದದ ಝೇಂಕಾರದಲಿ ಚಿನ್ಮಯ ಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಪ್ರಜ್ವಲಿಸಿ ಭಾವುಕ ಭಕ್ತರನು ಪೊರೆಯುವದು ದಿಟ ಕಾಣಿರೋ.

೩೬

ಅಂಧರ ಬಾಳಿಗೆ ಬೆಳಕು ನೀಡಿದ ನಿಜ ಸೂರ್ಯನಯ್ಯಾ..
ಸಂಗೀತ ಸುಧೆಯನ್ನು ಸರ್ವರಿಗೂ
ಕರುಣಿಸಿದ ಗಾನ ಗಂಧರ್ವನಯ್ಯಾ,
ಅಂಗದ ಮೇಲೆ ಲಿಂಗ ಧರಿಸಿದ ಜಂಗಮ ಮೂರ್ತಿ

ತ್ರಿಕಾಲ ಪೂಜಾ ದುರಂಧರನಯ್ಯಾ
ಜಾತಿ ಮತ ಪಂಥ ಭೇದವಿಲ್ಲದೆ ಅನ್ನ, ಸಂಗೀತ,
ಜ್ಞಾನ ದಾಸೋಹ ಗೈದ ಪರಮಪುರುಷನಯ್ಯಾ,
ಗುರು ಲಿಂಗ ಜಂಗಮ ಪ್ರೇಮಿ,
ವೀರಶೈವ ಚಿಂತಾಮಣಿಯಯ್ಯಾ.
ಪುಟ್ಟ ಮೂರ್ತಿ ದಿಟ್ಟ ಹೆಜ್ಜೆಯನಿಟ್ಟು ಶ್ರೇಷ್ಠ ಕೀರ್ತಿ ಪಡೆದ
ಪುಟ್ಟರಾಜರ ಸ್ಮರಿಸುತಿರ್ದೊಡೆ ದಾರಿದ್ರ್ಯ ದೂರವಯ್ಯಾ
ಶ್ರೀ ವೀರೇಶ್ವರ ಪುಣ್ಯಾಶ್ರಮ ದರ್ಶನದಿಂದ
ಅನಂತ ಫಲಗಳು ಪ್ರಾಪ್ತಿಯೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೩೭

ಅಂಗನೆಯ ಸಂಗದಲಿರ್ದಾಗಲೂ
ಲಿಂಗವ ತೊರೆಯಲಾಗದು.
ಲಿಂಗಪೂಜೆಯಲಿರ್ದಾಗಲೂ
ಜಂಗಮವ ಮರೆಯಲಾಗದು.
ಜಂಗಮನ ಆರಾಧನೆಯಲಿರ್ದಾಗಲೂ
ಶ್ರೀ ಗುರುವನ್ನು ಕಡೆಗಣಿಸಲಾಗದು.
ಗುರು ಲಿಂಗ ಜಂಗಮವ
ಗೌರವಿಸುವ ಸತ್ಸಂಪ್ರದಾಯಲಿ
ಶಿವನ ಸಾಕ್ಷಾತ್ಕಾರವಿಹುದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩೮

ಅಂಡವು ಪಿಂಡದೊಳಗೆ ಅಡಗಿರ್ಪುದು.
ಪಿಂಡವು ಬ್ರಹ್ಮಾಂಡದೊಳಗೆ ನೆಲೆಸಿರ್ಪುದು.

ಬ್ರಹ್ಮಾಂಡವು ಲಿಂಗ ಮಧ್ಯೆ ಕಂಗೊಳಿಸುತಿರ್ಪುದು.
ಆ ಲಿಂಗವೇ ಜಗದೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನಾಗಿ ವಿಜೃಂಭಿಸುತ್ತಿರ್ಪುದು.
ಇಂತಹ ಘನತರ ಲಿಂಗವನು ಪೂಜಿಸುವ ಮಹಾಭಾಗ್ಯ
ನನ್ನದೆಂದು ಹಿಗ್ಗಿ ಬೀಗುತ್ತಿರ್ದೆನಯ್ಯಾ

೩೯

ಕದವಿಲ್ಲದ ಮನೆಗೆ ಕೀಲಿ ಎಲ್ಲಿಯದೋ?
ಹದವಿಲ್ಲದ ಭೂಮಿಗೆ ಬೆಳೆಎಲ್ಲಿಯದೋ?
ಬೆದೆಯಿಲ್ಲದ ಜೀವಿಗೆ ಗರ್ಭವೆಲ್ಲಿಯದೋ?
ಸಂಸ್ಕಾರವಿಲ್ಲದ ಮನುಜಂಗೆ ಸತ್ವಥವೆಲ್ಲಿಯದೋ ,?
ಅದು ಕಾರಣ ಎನ್ನೊಡೆಯ ನಿರವಯ ನಿಷ್ಕಳಂಕ
ಸತ್ಯಾತ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸಿ ಭವಬಂಧನ ಕಳೆದುಕೊಳ್ಳಿರೋ.

೪೦

ಕಡು ಬೆಡಗಿನ ವಚನ ಪೇಳಲು ನಾನ್ಯಾರು?
ತಡವರಿಸಿ ನಾ ಮಾತಾಡಲರಿಯೆ?
ಗಡಬಡಿಸಿ ನುಡಿಯಲು ಸಾಧ್ಯವೇ?
ಹುಡುಗ ಬುದ್ಧಿಯ ಹಿಡಿದು ಬಗ್ಗಿಸಿ ಜಡಿದು ನಿಲ್ಲಿಸಿ,
ತೀಡಿ ತಿದ್ದಿ ತನ್ನೊಡಲ
ಅಮೃತ ನುಡಿ ಪೇಳುವ
ಮೃಡನ ಮುಕುಟ ಮಣಿ,
ಎನ್ನೊಡೆಯ ಜ್ಞಾನಸಾಗರ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನೇ ನೋಡಾ.

೪೧

ಕಲ್ಲು ಲಿಂಗವಲ್ಲ. ಜಲಗಂಗೆಯಲ್ಲ.
ನೆಲ ಭೂದೇವಿಯಲ್ಲ ಎನ್ನುವವರು ಹಲವರಯ್ಯಾ,
ಸಂಸ್ಕಾರ ಪಡೆದು ಸದ್ಭಾವ ಸ್ಥಿರವಾದ
ಕ್ಷಣ ದೈವತ್ವ ನೆಲೆಗೊಳ್ಳುವುದಯ್ಯಾ.
ಅಂತಹ ಸದ್ಭಾವ ಸಂಪನ್ನಗೊಂಡ ಮನುಜಂಗೆ
ದೈವದ ಸಾಕ್ಷಾತ್ಕಾರ ಖಚಿತವಯ್ಯಾ.
ಜಗದೊಡೆಯ ನಿರ್ಮಲ ನಿರಾಕಾರ
ನಿಜ ಘನಲಿಂಗ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ಸಾಕಾರ ದರ್ಶನ ಪಡೆಯಲು
ವೈರಾಗ್ಯನಿಧಿ ಘನಮಠ ಶಿವಯೋಗಿಗಳಂತೆ
ಅರ್ಹತೆ ಪಡೆದಿರಬೇಕಯ್ಯಾ

೪೨

ಕಷ್ಟಗಳ ಹುಟ್ಟು ಅಷ್ಟಮಿಯಿಂದಲ್ಲ,
ನಷ್ಟಗಳ ಹುಟ್ಟು ನವಮಿಯಿಂದಲ್ಲ.
ಇಷ್ಟಗಳು ಫಲಿಸದಿರುವುದು ಪಂಚಮಿಯಿಂದಲ್ಲ
ಅಷ್ಟ ದಿಕ್ಪಾಲಕರ ದೂರಿದರೇನು
ನವಗ್ರಹಗಳ ನಿಂದಿಸಿದರೇನು
ಮುನ್ನ ಮಾಡಿದ ಪಾಪ ಜನ್ಮ
ಜನ್ಮಾಂತರದ ಬುತ್ತಿ ತನ್ನ ತಾನರಿತು
ಸನ್ನಡತೆಯಲಿ ಮುನ್ನಡೆದು, ಧರಣಿಗೊಡೆಯ
ನಮ್ಮ ಚನ್ನ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರು ವೀರೇಶನ ಚರಣಕ್ಕೆ
ಶರಣಾಗಿ ನಡೆದರೆ ಜನ್ಮ ಜನ್ಮಾಂತರದ ಪಾಪ
ಪರಿಹರಿಸಿ ಸಲುಹುವನು ನೋಡಾ

೪೩

ಕಳ್ಳನಲ್ಲದ ಸುಳ್ಳನಲ್ಲದ, ಗೆಳೆಯ ಸಿಗುವುದು ಕಷ್ಟ.
ಮೋಸಮಾಡದ ಘಾಸಿಗೊಳಿಸದ
ಬಂಧುಗಳು ದೊರೆಯುವುದು ಕಷ್ಟ.
ವ್ಯಸನವಿಲ್ಲದ ಹುಸಿಯ ನುಡಿಯದ
ಸಂಗಾತಿ ಆಯ್ಕೆಯಾಗುವುದು ಕಷ್ಟ.
ಆಸೆಯಿಲ್ಲದ ಭಾಷೆತಪ್ಪದ ಗುರು ಕಾಣುವುದು ಕಷ್ಟ .
ನಿಗಮಾಗಮಾತೀತ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರು
ವೀರೇಶ ನಿಮ್ಮ ಅಪ್ರತಿಮ ದಿವ್ಯ ಚರಣಂಗಳಿಗೆ
ಈ ಕಾಯ ಅರ್ಪಿತವಾಗವುದು ಬಲು ಕಷ್ಟನೋಡಾ

೪೪

ಕನ್ನಡದ ಮೂಲ ಪುರುಷ ಶ್ರೀವೀರಭದ್ರ ಕಾಣಿರೋ.
ಅಡಿಯಲ್ಲಿ ಕಣ್ಣು ಧರಿಸಿ ಮುಡಿಯಲ್ಲಿ ಶಿವಲಿಂಗ
ಹೊಂದಿದ ಕನ್ನಡಿಗ ತಿಳಿಯಿರೋ.
ಕೃಷಿ ಕಾಯಕದ ಮೂಲ ಶ್ರೀ ವೀರಭದ್ರನೆನ್ನಿರೋ.
ಅಂಧಶ್ರದ್ಧೆ ಕಂದಾಚಾರಗಳಿಗೆ ತಿಲಾಂಜಲಿ ಇಟ್ಟು,
ಕರ್ತವ್ಯಕೆ ಇಂಬುಕೊಟ್ಟ ನಿಜ ದೈವವೆನ್ನಿರೋ.
ವಿಚಾರದಲ್ಲಿ ವೀರನಾದ, ಆಚಾರದಲಿ ಶೈವನಾದ
ವೀರಶೈವ ಗೋತ್ರ ಪುರುಷ ಕಾಣಿರೋ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸಾಕಾರ ರೂಪಿ ಗುರು, ಲಿಂಗ, ಜಂಗಮನಾಗಿ
ಜಗದಲಿ ಮೆರೆಯುವ ವೀರಭದ್ರ ತಿಳಿಯಿರೋ.
ಜಾತಿ, ಮತ, ಭೇದಭಾವವಿಲ್ಲದೆ ಭಕ್ತರ ಪೊರೆಯುವ
ದೇವನ ದಿವ್ಯ ಚರಣಂಗಳ ನಮಿಸೋಣ ಬನ್ನಿರೋ.

೪೫

ಕದವಿಲ್ಲದ ಮನೆ ಅಭದ್ರತೆಯ ಗೂಡಿನಂತಯ್ಯಾ,
ಮುದವಿಲ್ಲದ ಮನ ಅಣಕದ ಅಂಗಳದಂತಯ್ಯಾ.
ಕಾದಾಡುವ ದಾಂಪತ್ಯ ದಾರಿದ್ರ್ಯಕ್ಕೆ ದಾರಿ ನೋಡಯ್ಯಾ,
ಸ್ವಾದವಿಲ್ಲದ ಬದುಕು ಸದ್ವಿವೇಕಕ್ಕೆ ಬಾಧಕವಯ್ಯಾ.
ಭಕ್ತಿಯಿಲ್ಲದ ಒಣಭಾವಕ್ಕೆ ದೈವಬಲವು ಬಲು ದೂರವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೪೬

ಕಪ್ಪೆ ಸರ್ಪನ ಬಾಯಲ್ಲಿ ಸಿಕ್ಕರೂ
ಆಹಾರಕ್ಕೆ ಅರಸುತಿರ್ಪುದು ನೋಡಾ,
ಸಾವಿನ ಸಮಯದಲ್ಲೂ ಆಸೆಯ
ಬಲೆ ಬೀಸುತಿರ್ಪುದು ಕಾಣಾ.
ಕರ್ಮಗಳಗನುಸಾರ ಕಷ್ಟ ಸುಖಗಳೆರಡರ
ಅರಿವಿದ್ದೂ ಕುಕೃತ್ಯಗಳನ್ನೆಸಗುವ
ಕೊಳಕು ಮನಕೆ ಸತ್ಯದರ್ಶನ ಅಸಾಧ್ಯವೆಂದ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೪೭

ಕಡುಬು ತಿನ್ನುವಾಗ ಸಡಗರವೋ ಸಡಗರ.
ವಡಪು ಹೇಳುವಾಗ ಉಲ್ಲಾಸವೋ ಉಲ್ಲಾಸ.
ಶಸ್ತ್ರಗಳ ಹಾಕುವಾಗ ನೋವರಿಯದಂಥ ಖುಷಿಯೋ ಖುಷಿಯು.
ಗಡಿಬಿಡಿಯಲಿ ಪಲ್ಲಕ್ಕಿಬರುವಾಗ ಆನಂದವೋ ಆನಂದ.
ಶೃಂಗಾರದ ರಥ ಹೊರಟಾಗ ಸಂಭ್ರಮವೋ ಸಂಭ್ರಮ.
ಗತಕಾಲದ ಪದ್ಧತಿಯಲ್ಲ ಇದು, ಪ್ರತಿ ನಿತ್ಯದಲಿ

ಬರುವ ಎಡರು ತೊಡರುಗಳ
ತೊಡೆದು ಜೀವಿಸಲು ಬಲನೀಡುವ
ಸಂದೇಶವಿದು ಎಂದ ಘನಮಹಿಮ ಚಿದ್ಘನ ಚಕ್ರವರ್ತಿ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ,

೪೮

ಕತ್ತಲೆಯಲ್ಲಿ ಬೆಳಕು ಬೀರುವುದು ದೀಪವಾದರೆ
ಮಸ್ತಕದಲ್ಲಿಯ ಕೊಳಕು ಕಳೆಯುವುದು ಜ್ಞಾನವಯ್ಯಾ.
ಜ್ಯೋತಿ ಬಾಹ್ಯ ಪ್ರಪಂಚ ಬೆಳಗಿದರೆ,
ಜ್ಞಾನವು ಆತ್ಮವನ್ನು ಬೆಳಗಿಸುವುದಯ್ಯಾ.
ಆತ್ಮ ಸತ್ಯದರ್ಶನ ಪಡೆಯಲು
ಗುರು ಕರುಣೆ ಬೇಕೇ ಬೇಕಯ್ಯಾ.
ನಿಶ್ಚಿತ ಗುರಿ ಸಾಧನೆಗೆ ಸದ್ಗುರುವಿನ ಪಾತ್ರ ಹಿರಿದಾದುದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೪೯

ಕತ್ತೆತ್ತಿ ನೋಡಲು ಆಗಸದೆತ್ತರಕೆ ನಿಮ್ಮ ಸಿರಿಮುಡಿ,
ಮತ್ತೆ ಬಾಗಿ ಭುವಿಯ ನೋಡಲು
ಕಾಣದಿರ್ಪವು ನಿಮ್ಮ ಅಡಿದಾವರೆಗಳು.
ಸುತ್ತಲೂ ಕಣ್ಣಾಡಿಸಲು ಎತ್ತನೋಡಿದಡತ್ತತ್ತ
ನಿಮ್ಮ ವಿಶಾಲ ಬಾಹುಗಳು,
ಕಣ್ಮುಚ್ಚಿ ನೋಡಲು ಜಗದ್ವಾಪಿ
ವಿರಾಟ್ ಸ್ವರೂಪ ದರ್ಶನ.
ಜಗದೊಳಗೆ ನೀವೋ? ಜಗವು ನಿಮ್ಮೊಳಗೋ?,
ಯುಗ ಯುಗದಲಿ ಸಾಗಿ ಬಂದ
ಸಾಧಕರಿಗೆ ನಿಲುಕದ ಸಾರ್ವಭೌಮ,

ಎನ್ನೊಡೆಯ ಅಘೋರ ಅನಂತ ಅಪ್ರತಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಸ್ಸೀಮ ನಿರವಲಯ ನೀನಯ್ಯಾ,
ನಿಮ್ಮ ಸಿರಿಚರಣಕೆ ನಮೋ ನಮೋ ಎನುತಿರ್ದೆನಯ್ಯಾ.

೫೦

ಕರಿನೆರಳು ದಾರಿಯುದ್ದಕ್ಕೂ ಬೆಂಬತ್ತಿ
ಬರುವುದು ಸಹಜವಯ್ಯಾ,
ಹಿರಿದಾದ ಕರ್ಮಫಲ ಜೀವನದುದ್ದಕ್ಕೂ
ಇರುವುದು ನಿಜವಯ್ಯಾ.
ಪರಿಪರಿಯಾಗಿ ಪರರ ನೋಯಿಸಿದ
ಮೇಲೆ ಪ್ರತಿಕೂಲ ಕಜ್ಜಾಯ ತಿನ್ನಲೇಬೇಕಯ್ಯಾ.
ಕಿರಿಕಿರಿ ಮಾಡದೆ ಸರಿದಾರಿಯಲಿರುವ
ಸಜ್ಜನರಿಗೆ ನಿರಾಳ ಜೀವನ ಪ್ರಾಪ್ತಿಯಯ್ಯಾ.
ಎನ್ನೊಡೆಯ ಸತ್ಯಾತ್ಮ ಸಂಪ್ರೀತ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ
ಕರ್ಮಾನುಸಾರ ತಕ್ಕ ಫಲನೀಡುವುದು ಖಚಿತವಯ್ಯಾ,

೫೧

ಕರ್ಮವಿಲ್ಲದೇ ಧರ್ಮವೆಲ್ಲಿಹುದೋ?
ಕರ್ಮವೇ ಧರ್ಮದ ಬೀಜ,
ಉಪಕಾರದ ಹಾದಿ ಸುಕರ್ಮ, ಅಲ್ಲುಂಟು ಶಿವನ ಆವಾಸ.
ಅಪಕಾರದ ಹಾದಿ ಕುಕರ್ಮ, ಅಲ್ಲುಂಟು ನೋವಿನ ನಿವಾಸ.
ಗುರು ಹಿರಿಯರ, ಸಜ್ಜನರ ಸಂಗದಲ್ಲಿರ್ದವಂಗೆ
ಸುಕರ್ಮದ ಹಾದಿ ಸುಲಭವೆಂದಡಿಗಡಿಗೆ

ಎಡೆಬಿಡದೆ ಕಡುಎಚ್ಚರಿಕೆ ನೀಡುವ,
ಕರುಣಾಳು ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ನಿಮ್ಮ ದಿವ್ಯಪಾದಂಗಳಿಗೆ ಶರಣು ಶರಣಾರ್ಥಿ.

೫೨

ಕಾಮಿ ನಾನು, ನಿಷ್ಕಾಮಿ ನೀನು.
ಮೋಹಿ ನಾನು, ನಿರ್ಮೋಹಿ ನೀನು.
ದೇಹಿ ನಾನು, ನಿರ್ದೇಹಿ ನೀನು ಭಕ್ತ ನಾನು,
ಸರ್ವಶಕ್ತನೀನು. ಇಂತಪ್ಪ ಎನ್ನಂಗದಲಿ
ಕ್ಷಣಕಾಲವಾದರೂ ಮಿಂಚಿ ಮರೆಯಾಗುವ
ನಿಮ್ಮ ದಿವ್ಯ ಪ್ರಭೆ ಕಂಡು
ಬೆರಗಾಗಿ ನಿಮ್ಮಯ ಪ್ರಜ್ವಲಿಪ ಪಾದಾರವಿಂದಗಳ
ಪಿಡಿದು ಪ್ರಸನ್ನನಾಗೆಂದು ಹಲಬುತಿರ್ದೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೫೩

ಕಾಡುವಾತ ದೇವರಲ್ಲ, ಬೇಡುವಾತ ದೇವರಲ್ಲ
ಮೂಢನು ದೇವರಲ್ಲ, ದಡ್ಡನೂ ದೇವರಲ್ಲ
ಗೊಡ್ಡು ಸಂಪ್ರದಾಯ ಬೇಕಿಲ್ಲ ಕಾಡುವ
ಬೇಡುವ ದೈವಗಳ ಬಿಡು
ಜಡ್ಡುಗಟ್ಟಿದ ಮನವ ತೊಳೆದು ಮೃಡನೇ
ನೀನೆಂದು ವೀರೇಶನ ಅಡಿಗೆ
ಶರಣಾದೊಡೆ ಕಡುಪ್ರೇಮದಿ ಬಿಡದೆ ಸಲಹುವನು
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೫೪

ಕೆಸರಿನಲ್ಲಿದ್ದರೂ ಕಮಲ ನಿತ್ಯ ನಿರ್ಮಲವಾಗಿರುವುದು.
ಬಸಿರಿನಲ್ಲಿದ್ದರೂ ಮಗು ಬೆಚ್ಚಗೆ ನಿಚ್ಚಳವಾಗಿರುವುದು.
ಸ್ಥಾನ ಪಲ್ಲಟವಾದೊಡನೆ ಅಡಿಗಡಿಗೆ
ಬದಲಾವಣೆ ಪಡೆಯುವುದು.
ಸದುದ್ದೇಶ ಹೊಂದಿರ್ದೊಡೆ ಕೀರ್ತಿ,
ಗೌರವ ಪ್ರಾಪ್ತಿಯಾಗುವುದು.
ಅದು ಕಾರಣ ಸತ್ಸಂಗದ ಆಶ್ರಯದೊಳಿರ್ದೊಡೆ
ಉತ್ತಮ ಬದುಕು ನಿನಗಿಹುದೆಂದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೫

ಕಂಬದೊಳಗಿಂದಿಳಿದ ನರಸಿಂಹಸ್ವಾಮಿ,
ಮುಂದೆ ನರಭಕ್ಷಕನಾಗಿ ಜಂಭದಲಿ ಮೆರೆಯುತಿರಲು,
ಅಂಬರದಿಂದಿಳಿದ ಶರಭದೇವ.
ತುಂಬು ಎಚ್ಚರದಿ ಆಗಸದಂಚಿಗೆ ಎಳೆದೊಯ್ದು
ಸಂಭ್ರಮದಿ ಕಕ್ಕಿಸಿದ ಕೆಂಪುರುಧಿರವನು ಕ್ಷಣಾರ್ಧದಲಿ.
ತಾಮಸವ ಕಳೆದು ಶ್ರೀಹರಿ ಪರಿಪೂರ್ಣನಾದ.
ತಾಮಸಕೆ ಕಡುವೈರಿ, ಸಾತ್ವಿಕತೆಗೆ ಸರಳಸ್ನೇಹಿ,
ಭಾವುಕ ಭಕ್ತರ ಬಂಧು ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ ಸರ್ವಾಂತರ್ಯಾಮಿ
ಎನ್ನುವುದು ಪರಮ ಸತ್ಯವಯ್ಯಾ.

೫೬

ಗಿಡಮರಗಳಲಿ ಫಲ ಪುಷ್ಪಗಳ ಅರಳಿಸುವವ ನೀನಯ್ಯಾ,
ಕಡುಬೆಡಗಿನ ಝರಿ ತೊರೆಗಳ ಹರಿಸುವವ ನೀನಯ್ಯಾ.

ನಾಡಿನೆಲ್ಲೆಡೆ ದವಸ ಧಾನ್ಯಗಳ ಸುರಿಸುವವ ನೀನಯ್ಯಾ,
ಕಾಡುಮೇಡುಗಳಲಿ ವನ್ಯಜೀವಿಗಳ ತುಂಬಿರುವವ ನೀನಯ್ಯಾ.
ಗಡಿಬಿಡಿಯಲಿ ಹಾರಾಡುವ ಪಕ್ಷಿ ಸಂಕುಲ ಹರಡುವವ ನೀನಯ್ಯಾ,
ಅಡಿಗಡಿಗೆ ಜಗದಲಿ ಕಂಡುಬರುವ ಸಕಲ
ಚರಾಚರಗಳ ಸೃಷ್ಟಿಸುವವ ನೀನಯ್ಯಾ,
ಜಗದೊಡೆಯ ಮಹಾದಾನಿ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ
ನೀನಿತ್ತ ಕೊಡುಗೆಯ ಪಡೆದು ಅನ್ಯರ
ಸ್ತುತಿಸುವವರಿಗೆ ನಾಯಕ ನರಕ ತಪ್ಪದಯ್ಯಾ.

೫೭

ಗಿರಿಯಲ್ಲಿ ಗರಿಗೆದರಿ ನವಿಲು ನರ್ತಿಸುವಂತೆ,
ಮನದ ತುಂಬಾ ನಿಮ್ಮ ನಾಮದ ನರ್ತನ ನೋಡಯ್ಯ.
ಸಂಪಿಗೆ ಮರದಲಿ ಇಂಪಾಗಿ ಹಾಡುವ ಕೋಗಿಲೆಯಂತೆ,
ನನ್ನ ನುಡಿ ನಿಮ್ಮ ನಾಮವ ನೆನೆಯುವ ಹಾಡು ಕಾಣಯ್ಯಾ,
ಸ್ವಾತಿಯ ಮಳೆಹನಿಗೆ ಬಾಯ್ದೆರೆದ ಜಾತಕ ಪಕ್ಷಿಯಂತೆ,
ಸದಾ ನಿಮ್ಮ ದಿವ್ಯ ದರ್ಶನದ ಬಯಕೆ ನನ್ನದು ನೋಡಯ್ಯಾ .
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ ನಿಮ್ಮ ಅಪ್ರತಿಮ
ದಿವ್ಯ ಪಾದಪದ್ಮಂಗಳೆನಗೆ ಪರಮಾಶ್ರಯವಯ್ಯಾ,
ಈ ಭಾಗ್ಯ ನನ್ನದೆಂಬ ಸಂತಸವಯ್ಯಾ

೫೮

ಗುರುವಿನ ಹಸ್ತ ಶಿಷ್ಯನ ಮುಸ್ತಕ ಸೋಂಕಲು,
ಭವಬಂಧನ ಕಳೆಯಿತ್ತು. ಜ್ಞಾನ ಹೊಳೆದಿತ್ತು.
ಜ್ಞಾನದಿ ಮಸ್ತಕ ಸೋಂಕಿದ ಹಸ್ತವು ಲೇಖನ ಸುರಿಸಿತ್ತು.
ಪುಸ್ತಕ ಎನಿಸಿತ್ತು. ಆಸಕ್ತರಿಗೆ ದಾರಿಯಾಗಿತ್ತು.

ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ ನುತಿಸಿತ್ತು.
ಮುಕ್ತಿಯ ಬೇಡಿತ್ತು. ಶಾಂತಿಯ ಪಡೆದಿತ್ತು.

೫೯

ಗುರುವಿನಲ್ಲಿ ಹರನ ಇರುವಿಕೆ ಸಂಪೂರ್ಣ ನಾನರಿತಿರುವೆ.
ಲಿಂಗದಲ್ಲಿ ಆವಿರ್ಭವಿಸಿದ ಶಿವಶಕ್ತಿಯ ಕಾಣುವೆ.
ಜಂಗಮನಲ್ಲಿ ದೇವಸೂಗೂರ ವೀರೇಶನ ನೋಡುವೆ.
ಇಂತು ಗುರು, ಲಿಂಗ, ಜಂಗಮವ ಆರಾಧಿಸುತ್ತಾ
ಪರಿಪೂರ್ಣಾನಂದ ನನಗಾಯಿತು ಎನುತಿರ್ದೆನಯ್ಯಾ
ಮಂಗಳಮೂರ್ತಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೦

ಗುರು, ಲಿಂಗ, ಜಂಗಮವ ಗೌರವಿಸಿ
ಪೂಜಿಸುವಾತ ಲಿಂಗಾಯತ.
ಸರಳತೆಯ ಕುರುಹಾಗಿ ವಿಭೂತಿ ರುದ್ರಾಕ್ಷಿ
ಮಂತ್ರಗಳ ಧರಿಸಿ ಮೆರೆವಾತ ಲಿಂಗಾಯತ.
ಗುರು, ಲಿಂಗ, ಜಂಗಮ ಕರುಣಿಸಿದ ಪಾದೋದಕ
ಪ್ರಸಾದ ಭಕ್ತಿಯಲಿ ಸ್ವೀಕರಿಸಿ
ಸಂತೃಪ್ತ ಭಾವ ಹೊಂದುವಾತ ಲಿಂಗಾಯತ.
ಈ ಐಶ್ವರ್ಯಗಳ ನಿಷ್ಠೆಯಿಂದ ಶ್ರೇಷ್ಠವೆಂದು
ಅವಧರಿಸುವಾತ ಲಿಂಗಾಯತ.
ಇಂತಪ್ಪ ಆಚಾರ ವಿಚಾರದೋಳ್ ಓಲಾಡುವಾತಂಗೆ
ನಿಜ ವೀರಶೈವ ಲಿಂಗಾಯತನೆನ್ನುವ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ.

೬೧

ಗುರು ಜಾತಿಗೆ ಜೋತು ಬೀಳಬಾರದಯ್ಯ,
ಮತಕ್ಕೆ ಮಣೆ ಹಾಕಬಾರದಯ್ಯ,
ಬಲ್ಲಿದವರೆಂದು ಓಲೈಸಬಾರದಯ್ಯ,
ಬಡವರೆಂದು ಕಡೆಗಣಿಸಬಾರದಯ್ಯ,
ಗುರು ನಿತ್ಯ ನಿರಾಡಂಬರ ನಿಷ್ಕಳಂಕ ನಿರಾಪೇಕ್ಷಿಯಾಗಿರಬೇಕಯ್ಯಾ
ಭಕ್ತಿಯ ಸಿಂಚನ ಪರಮಾತ್ಮನ
ಚಿಂತನ ವೈರಾಗ್ಯದ ಲಕ್ಷಣ ತುಂಬಿ
ತುಳುಕುತ್ತಿರುವ ಸದ್ಗುರು ಸದಾಶಿವನ
ಪ್ರತಿರೂಪ ವೆಂದರಿತು ಆರಾಧಿಸಬೇಕೆಂದ
ಎನ್ನೊಡೆಯ ಜಗದಾದಿ ಜಗದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೨

ಚಿನ್ನದುಡಿಗೆಯು ಬೇಡ. ರನ್ನದೊಡವೆಯು ಬೇಡ.
ಚನ್ನಾದಸುಪ್ಪತ್ತಿಗೆಯು ಬೇಡ. ನನ್ನೊಳಗೆ ನೀವೋ
ನಿಮ್ಮೊಳಗೆ ನಾನೋ ಎಂಬ ಜಿಜ್ಞಾಸೆ
ಕೆದಕಲು ಬೇಡ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ
ನಿರವಯ ನಿಶ್ಚಲ ಮಹಾ ಬಯಲೊಳಗೆ
ಎನ್ನನು ಬಯಲುಗೊಳಿಸೆನ್ನ ತಂದೆ.

೬೩

ಚಿಕ್ಕ ಕಾನನದಲ್ಲಿ ಲೆಕ್ಕವಿಲ್ಲದಷ್ಟು ಮರಗಳು.
ಹಾದಿ ಇಲ್ಲದ ಜಾಗದಲ್ಲಿ ಬೋಧಿ ವೃಕ್ಷವುಂಟು.

ನಾದಬ್ರಹ್ಮನ ವಾದನದ ಸಂಗೀತದ ಅಲೆ ಆಲಿಸಲುಂಟು.
ಕತ್ತಲೆಯ ಆಲಯದಲ್ಲಿ ದಿವ್ಯ ಪ್ರಭೆಯ ಲಿಂಗವುಂಟು.
ಏಕಚಿತ್ತದಲಿ ನಾದದೊಳಗೆ ತನ್ಮಯಗೊಂಡು ಆ ಲಿಂಗ
ಮುಟ್ಟಲು ಎಲ್ಲವೂ ನಿರ್ಬಯಲಾಗಿ ಭಯವಿಲ್ಲದಂತಾಯಿತ್ತು.
ಈ ವೈಚಿತ್ರ್ಯದಲಿ ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ
ಮಂದಹಾಸವ ಕಂಡು ಪ್ರಜ್ವಲಿಪ ದಿವ್ಯಪಾದಂಗಳ
ಪಿಡಿದು ಮರುಳ ಮಾನವ ನಾನು ನಿರಾಳನಾದೆನಯ್ಯಾ.

೩೪

ಜನರ ಮನದಲ್ಲಿ ಸ್ವಾರ್ಥ ತುಂಬಿ ತುಳುಕಿದಾಗ ದೇಶಕ್ಕೆ ವಿಪತ್ತು.
ಅಸೂಯೆ, ಮತ್ಸರದ ಹೊಗೆ ಹೆಚ್ಚಾದಾಗ ಸಜ್ಜನರಿಗೆ ಆಪತ್ತು.
ಪ್ರಕೃತಿಯೇ ಮುನಿದಾಗ ಭೀಕರ ಅತಿವೃಷ್ಟಿ, ಅನಾವೃಷ್ಟಿ,
ಜಗದಲಿ ಸಕಲ ಜೀವಿಗಳಿಗೂ ಸಂಕಷ್ಟ ಸ್ಥಿತಿ ಇದು
ದೈವ ನಿರ್ಮಿಸಿದ ಸುವ್ಯವಸ್ಥೆ ಎಂದ ಎನ್ನೊಡೆಯ ಅಕ್ಷಯಾತ್ಮ
ವಿಶ್ವ ಚೇತನ ವಿರಾಟರೂಪಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩೫

ಜನನವೆಂದರೆ ಲಿಂಗೋದ್ಭವ. ಮರಣವೆಂದರೆ ಲಿಂಗೈಕ್ಯ,
ಲಿಂಗ ಮುಖವೇ ಜಂಗಮ. ಅನ್ನವೆಂದರೇ ಪ್ರಸಾದ.
ದುಡಿಮೆಯದುವೇ ಕಾಯಕ. ದಯೆಯೇ ಧರ್ಮವು.
ವಿನಯವೇ ಉಸಿರು, ದೇಹವಿದುವೇ ದೇವಾಲಯ,
ಸೂತಕ ಕ್ರಿಯೆ ಕರ್ಮಾದಿಗಳಿಲ್ಲ.
ಜಾತ್ಯಾತೀತ ಕಾಯಕದಲ್ಲಿ ಕೈಲಾಸ ಕಾಣುವ
ವೀರಶೈವ ಧರ್ಮವಿದು ಜಗದಲಿ ಶ್ರೇಷ್ಠ ಧರ್ಮವೆಂದ
ಜಗದೊಡೆಯ ಘನಲಿಂಗ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೩೩

ಜನಿಸಿದುದು ಮರಣಿಸಲೇ ಬೇಕಯ್ಯಾ.
ಸತ್ಯವಾದುದು ಬೆಳಕಾಗಲೇ ಬೇಕಯ್ಯಾ,
ಕಹಿಯಾದುದು ಮದ್ದಾಗಲೇ ಬೇಕಯ್ಯಾ,
ನೆನಪಾದುದು ನಶಿಸಲೇ ಬೇಕಯ್ಯಾ ,
ಪೂಜ್ಯವಾದುದು ವಿಜೃಂಭಿಸಲೇಬೇಕಯ್ಯಾ,
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪಾದಕ್ಕೆ ಬಿದ್ದುವನು ಉದ್ಧಾರವಾಗಲೇ
ಬೇಕಯ್ಯಾ, ಇದು ಪರಿಶುದ್ಧ ಸತ್ಯವಯ್ಯಾ,

೩೭

ಜನ್ಮನೀಡಿದ ತಾಯಿಯ ಋಣ
ಕರುಣೆಯ ಕೂಗು ನೋಡಯ್ಯಾ.
ಜನ್ಮಭೂಮಿ ಅನ್ನನೀಡಿದ ಮಹಾತಾಯಿಯ
ಋಣ ಅಭಿಮಾನದ ಅಸ್ತ್ರವಯ್ಯಾ,
ಯೋಧರ ಶೌರ್ಯ ರೈತರ ಬೆವರಿಗೆ ಬೆಲೆ ಕಟ್ಟಲಾಗದಯ್ಯಾ,
ಜನನಿ ಜನ್ಮಭೂಮಿಗೆ ಗೌರವಿಸುವ ಮಗ ಸನ್ಮಾನ್ಯನಯ್ಯಾ.
ಸ್ವಾರ್ಥ ತುಂಬಿದ ಕುಲದ್ರೋಹಿ ಮನುಜ ದೇಶಭ್ರಷ್ಟನಾಗುವನಯ್ಯಾ,
ಅನ್ಯಾಯದ ಅಷ್ಟೈಶ್ವರ್ಯಗಳಿಗೆ ಆಶಿಸದ
ಶ್ರೇಷ್ಠ ಮನುಜರಿಗೆ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಶ್ಚಯದಿ ಸಲುಹುವನು ಇದಕೆ ಸಂಶಯ ಬೇಡತಪ್ಪದಯ್ಯ

೩೮

ಜೀವ ಒತ್ತೆಯಿಟ್ಟು ಹೆತ್ತವರ ಮುಂದೆ,
ಮತ್ತೊಬ್ಬ ಬೊಮ್ಮನುಂಟೇ?

ತುತ್ತುಕೊಟ್ಟು ಪಾಲನೆಗೈದವರ ಮುಂದೆ,
ಮತ್ತೊಬ್ಬ ಹರಿಯುಂಟೇ? ಬೆಟ್ಟದಷ್ಟು ಕಷ್ಟಗಳನುಂಡು
ಇಷ್ಟಪಟ್ಟು ಬೆಳೆಸಿದವರ ಮುಂದೆ,
ಅಷ್ಟದಿಕ್ಪಾಲಕ ದೈವಂಗಳುಂಟೇ?
ಎಡರು ತೊಡರುಗಳ ಹೊಸಕಿ ,
ಸುಖ ದುಃಖಗಳಿಗೆ ಕುಗ್ಗದೆ,
ಗುರು, ಲಿಂಗ, ಜಂಗಮರ ಆರಾಧನೆಗೈದ
ಮಹಾದೈವದ ಮುಂದೆ ಬೇರೆ ದೈವಗಳುಂಟೇ?
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಅಖಂಡ ದಿವ್ಯ ಪಾದಪದ್ಮಂಗಳ ಅರ್ಚಿಸುವ ಸಂಸ್ಕಾರವಿತ್ತ
ಜನ್ಮದಾತರ ಮುಂದೆ ಎನಗೆ ಅನ್ಯದೈವಗಳುಂಟೆ ಅಯ್ಯಾ

೧೯

ಜಡಿ ಮಳೆಗೆ ಜಗ್ಗದ, ಕೊರೆವ ಚಳಿಗೆ ಕುಗ್ಗದ,
ಉರಿಬಿಸಿಲು ಲೆಕ್ಕಿಸದ ಕಾಯಕ ಯೋಗಿ,
ಜಗದ ಜನಕೆ, ಪಕ್ಷಿ ಸಂಕುಲಕೆ, ಪ್ರಾಣಿ ಸಮೂಹಕೆ ,
ಅನ್ನ ನೀಡುವ ವೀರ. ಕಾಲಕಾಲಕ್ಕೆ ಎಡರು ತೊಡರುಗಳ
ಹೊಸಕಿ, ದಿಟ್ಟ ಹೆಜ್ಜೆ ಇಟ್ಟು ಬಾಳುವ ಭದ್ರ. ವೀರಭದ್ರನ ಸುಪುತ್ರ,
ಚಿನ್ನದ ಮನದ ಅನ್ನದಾತನ ಅನುದಿನ ನೆನೆದು
ಅನ್ನ ಸೇವಿಸುವ ಮನುಜನಲ್ಲಿ ಮಾನವತೆ ಇಹುದೆಂದ,
ಘನಮಹಿಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೨೦

ತನುವಿನಾ ಒಲೆಯ ಮೇಲೆ ಮನವೆಂಬ
ಮಡಕೆಯ ತೊಳೆದಿರಿಸಯ್ಯ.
ಸದ್ಗುಣಗಳನೇ ಮಡಕೆಗೆ ಸುರಿದು ಧನವೆಂಬ

ಹುಟ್ಟಿನಿಂ ಚೆನ್ನಾಗಿ ಕೆದಕಯ್ಯ,
ಅರಿಷಡ್ವರ್ಗಗಳೆಂಬ ಕಾಷ್ಠಗಳನುರಿಸಿ
ಹದವಾಗಿ ಹೃದಯವ ಬೇಯಿಸಯ್ಯ,
ಸದ್ಗುರುವಿನ ಸ್ಮರಿಸುತ ಈ ಪರಮಾನ್ನ ಎನ್ನೊಡೆಯ
ಆದಿದೇವ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಂಗೆ
ಅರ್ಪಣೆ ಮಾಡಿ ಈ ಜನ್ಮ ಪಾವನಗೊಳಸಯ್ಯಾ.

೨೧

ತಳವಿಲ್ಲದ ಘಟವಿದು, ತುಂಬುವುದು ಬಲು ಕಷ್ಟ.
ನವರಂಧ್ರಗಳ ಘಟವಿದು,
ಹತ್ತು ಹಲವು ವಾಂಛಗಳದಕೆ ನಷ್ಟ.
ನಷ್ಟವೋ ಕಷ್ಟವೋ ತಿಳಿದರೂ
ತಿಳಿಯದಿದ್ದರೂ ಆಶಿಸುವುದು ಅದಕೆ ಇಷ್ಟ.
ಇಷ್ಟವೆಂದು ಕಷ್ಟಪಡದೆ ಭ್ರಷ್ಟನಾಗಿ ಐಶ್ವರ್ಯ
ಪಡೆಯಲು ಹಾತೊರೆದರೆ ಘಟವಾಗುವುದು ಕನಿಷ್ಠ.
ಅದು ಕಾರಣ ಶುದ್ಧಮನದಿ ಸನ್ಮಾರ್ಗದಲ್ಲಿ
ನಡೆದರೆ ಮಾತ್ರ ಮನದಾಣ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ದಿವ್ಯಪಾದಂಗಳಿಗೆ
ಈ ಘಟ ಸಮರ್ಪಿತವಾಗುವುದು ನಿಶ್ಚಿತ ಕಾಣಾ.

೨೨

ತನುವೆಂಬ ಮಹಾ ತೋಟದಲಿ,
ಘನಮಹಿಮ ಶ್ರೀ ಗುರು ಕರುಣಿಸಿದ,
ಮೊನಚಾದ ಗುದ್ದಲಿಯ ಹಿಡಿದು ಕೊನೆಯಿಲ್ಲದ
ಕಾಮಕ್ರೋಧಾದಿ ಕಳೆ ಕಿತ್ತು ಹಾಕಯ್ಯಾ.

ಕಣಕಣದೊಳಡಗಿರ್ದ ಲೋಭ ಮೋಹಗಳೆಂಬ
ಗರಿಕೆಯನಾರಿಸಿ ತೆಗೆಯಯ್ಯಾ,
ನಾನು ನಾನೆಂಬ ಮುಳ್ಳಾದ ಈ ಮದ,ಮತ್ಸರಗಳ
ಸುಟ್ಟು ಬೂದಿ ಮಾಡಯ್ಯಾ.
ಎನ್ನೊಡೆಯ ಫಣಿಭೂಷಣ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ಎಣೆಯಿಲ್ಲದ ಘನಮುಕ್ತಿ ಕರುಣಿಸುವನಯ್ಯಾ

೭೩

ತನುವಲ್ಲಿ, ಮನದಲ್ಲಿ ಧನಕನಕದಲ್ಲಿ.
ಕಣ್ಣಲ್ಲಿ, ಮಣ್ಣಲ್ಲಿ, ಕಣಕಣದಲ್ಲಿ.
ಕರ್ಣದಲಿ,ವರ್ಣದಲ್ಲಿ, ಸುವರ್ಣದಲ್ಲಿ ರಸದಲ್ಲಿ,
ರುಚಿಯಲ್ಲಿ, ಒಸರುವಾ ಗಂಧದಲಿ.
ಧ್ವನಿಯಲ್ಲಿ ಸದ್ದಿನಲ್ಲಿ, ಮಾರ್ದನಿಯ ನಿನಾದದಲಿ,
ಎಲ್ಲೆಲ್ಲೂ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶ ನೀನೇ ತುಂಬಿರುವಾಗ ನನಗಾವ ಚಿಂತೆ ಪ್ರಭು
ನಿಮ್ಮ ದಿವ್ಯ ಪಾದಂಗಳು ಸಾಕೆನಗೆ.

೭೪

ತಂದೆ ನೀನು ತಾಯಿ ನೀನು ಬಂಧು ಬಳಗವು ನೀನಯ್ಯಾ.
ಗುರು ನೀನು ಲಿಂಗ ನೀನು ಜಂಗಮ ಪುಂಗವ ನೀನಯ್ಯಾ.
ವ್ಯಕ್ತ ನೀನು ಅವ್ಯಕ್ತ ನೀನು ಪರಮ ವಿರಕ್ತನು ನೀನಯ್ಯಾ.
ಹಸಿರು ನೀನು ಉಸಿರು ನೀನು ಸರ್ವೇಶ್ವರನು ನೀನಯ್ಯಾ.
ರುದ್ರ ನೀನು ಭದ್ರ ನೀನು ವೀರಭದ್ರನು ನೀನಯ್ಯಾ.
ವೀರ ನೀನು ಶೈವ ನೀನು ವೀರಶೈವರ ಮೂಲ ನೀನಯ್ಯಾ.
ಅಲ್ಲಿ ನೀನು ಇಲ್ಲಿ ನೀನು ಎಲ್ಲೆಲ್ಲೂ ನೀನೇ ಅಯ್ಯಾ.

ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಅನಂತ ಅಗೋಚರ ಅಪ್ರತಿಮ ದಿವ್ಯ ಪಾದಂಗಳಿಗೆ ನಮೋ ನಮಃ

೭೫

ದಯೆಯಲ್ಲಿ ಧರ್ಮದಲಿ, ಧೈರ್ಯದಲಿ ಸದಾ ದೈವವಿರುವುದು ಸತ್ಯ.
ಕಾಯದಲಿ ಭಾವದಲಿ, ನೋವಿನಲಿ ನಗುವಿನಲಿ
ದೇವನಿರುವುದು ಸತ್ಯ.
ಸದ್ಬುದ್ಧಿಯಲಿ ಸದ್ಭಾವದಲಿ, ಸತ್ಸಂಕಲ್ಪದಲಿ
ಸದ್ಭಕ್ತರ ಮನದಲಿ ಮಹಾದೇವನಿರುವುದು ನಿತ್ಯ ಸತ್ಯ,
ತುಂಬುಮನದಿ ನಂಬಿ ಕರೆದಾಗ
ಓ .... ಎಂಬ ಶಂಭುವೇ ತಾನೇ ತಾನಾಗಿರ್ಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ನಿಮ್ಮಪ್ರಜ್ವಲಿಪ ಪಾದಗಳ ಪಿಡಿದು ನಮೋ ನಮಃ ಎಂದೆ.

೭೬

ದೀಪಾವಳಿಯು ಕತ್ತಲೆಯನು ಕಳೆದು ಬೆಳಕು ಬೀರುವುದು,
ಮನೆ ಮನಗಳಿಗೆ ನವಚೈತನ್ಯದ ಕಳೆ ಕಟ್ಟುವುದು.
ಹತ್ತಾಸೆಗಳ ಅಳಿಸಿ ಹೊಸ ಬಾಂಧವ್ಯ ಬೆಸೆಯುವುದು.
ಅಜ್ಞಾನ ಕಳೆದು ಅರಿವಿನಾ ಸುಜ್ಞಾನ ಬೀರುವುದು.
ದೈವ ಚಿಂತನೆಯನಿತ್ತು ಬತ್ತಿದಾ ಮನ ಅರಳಿಸುವುದು.
ಹುಡುಗರಿಗೆ ಸಡಗರ ಸಕಲರಿಗೂ ಸಂಭ್ರಮ ಹೆಚ್ಚಿಸುವುದು.
ಕುಗ್ಗಿದಾ ಮನಗಳಿಗೂ ಹಿಗ್ಗಿನಾ ಸುಗ್ಗಿಯ ಕಲ್ಪಿಸುವ
ಕಾರ್ತಿಕಮಾಸವು ಅತಿಶ್ರೇಷ್ಠವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೭೭

ದೇಹವೆಂಬ ಈ ರಥದಲ್ಲಿ ಆತ್ಮವೇ ಚೈತನ್ಯ
ರಥಿಕನೆಂದು ತಿಳಿಯಯ್ಯಾ,
ಸ್ಥಿರ ಬುದ್ಧಿಯೇ ಸಾರಥಿ, ಪಂಚೇಂದ್ರಿಯಗಳೇ
ಕುದುರೆಗಳೆಂದರಿಯ ಬೇಕಯ್ಯಾ,
ಗುರು ಕಾರುಣ್ಯ ಪಡೆದು, ಮನಸ್ಸೆಂಬ ಲಗಾಮು ಹಿಡಿದು
ಸಚ್ಚಾರಿತ್ರ್ಯದ ಪಥದಲ್ಲಿ ಸಾಗಬೇಕಯ್ಯಾ,
ಹಿಡಿದ ಗುರಿ ತಲುಪಲು ಪ್ರಪಂಚವೂ ಸರಳ,
ಪಾರಮಾರ್ಥವೂ ಸರಳವೆಂದ ಎನ್ನೊಡೆಯ ಚಿನ್ಮಯ ಮೂರ್ತಿ
ಅಖಂಡ ಜ್ಞಾನಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೭೮

ದೇವರ ದಾಸಿಮಯ್ಯನವರ ವಚನ
ಸತ್ಯದ ದಾರಿ ತೋರಿತ್ತು.
ಬಸವಣ್ಣನವರ ವಚನ ಜ್ಞಾನದ ಬೆಳಕು ನೀಡಿತ್ತು.
ಅಕ್ಕನ ವಚನ ಅನುಭವ ತಂದಿತ್ತು.
ಅಲ್ಲಮರ ವಚನ ಅಮೃತವ ಸುರಿಸಿತ್ತು.
ಸರ್ವಜ್ಞರ ವಚನ ಅಜ್ಞಾನ ಅಳಿದಿತ್ತು.
ಷಣ್ಮುಖ ಶಿವಯೋಗಿಗಳ ವಚನ ಪರಿಪೂರ್ಣತೆಗೆ ಎಡೆಮಾಡಿತ್ತು.
ಇಂತೀ ಆದ್ಯರ ವಚನಗಳೆನಗೆ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಪರಮಪಾವನ ದಿವ್ಯ ಪಾದಪದ್ಮಂಗಳ
ಸಂದರ್ಶನ ಗೈವ ಸೌಭಾಗ್ಯ ಕರುಣಿಸಿದವು.

೭೯

ದೇಹಕ್ಕೆ ತಂದೆ ತಾಯಿ ಬಂಧು ಬಳಗ.
ಮೋಹಕ್ಕೆ ಸತಿ ಸುತ ಸ್ನೇಹ ಸಂಗಾತಿಗಳು.
ರಕ್ತಕ್ಕೆ ಅಂಟಿದ ಸಂಬಂಧಕ್ಕೆ ಸಿಲುಕಿ ಕಾಯ ನಲುಗುವುದು,
ಕರ್ಮಾನುಸಾರ ಬವಣೆ ಗಳಿಗೀಡಾಗುವುದು.
ಆತ್ಮಕ್ಕೆ ಪರಶಿವನೇ ತಂದೆ ತಾಯಿ,
ಸದ್ಗುರುವೇ ಬಂಧುಬಳಗ,
ಆತ್ಮೀಯ ಸಂಬಂಧಗಳೇ ಸಹೋದರರು.
ಆತ್ಮದ ನಂಟಿನ ಸಂಬಂಧ
ಆತ್ಮೋನ್ನತಿಯ ಪಥದಲ್ಲಿ ಸಾರ ಸಜ್ಜನರ ಸಂಗ ಬೆಳೆಸುವುದು,
ಅದು ಕಾರಣ ಆತ್ಮೀಯ ನಂಟಿನ ಗಂಟು
ಮುಕ್ತಿಗೆ ಸೂಕ್ತ ಸೋಪಾನವೆಂದರಿತು
ನಡೆಯಬೇಕೆಂದ ಎನ್ನೊಡೆಯ ಅಖಿಲಾಂಡ
ಕೋಟಿ ಬ್ರಹ್ಮಾಂಡ ನಾಯಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೮೦

ದೊರೆತ ನೀರು ಗಂಗಾಜಲ. ಕರಕು ಬೂದಿ ಕಲ್ಪಭಸ್ಮ.
ಹರಕು ಬಟ್ಟೆ ಮಡಿವಸ್ತ್ರ, ಗರಿಕೆ ಹುಲ್ಲು ಪಾವನಪತ್ರೆ.
ಸರಳತೆಯೆ ಪ್ರಣವ ಮಂತ್ರ. ನಿತ್ಯವೂ ತಪ್ಪದೆ
ಲಿಂಗಾರ್ಚನೆ ಮಾಡುವ ಶರಣರಿಗೆ ಎನ್ನೊಡೆಯ
ಕರುಣವಾರಿಧಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸಂತೃಪ್ತನಾಗಿ ಸನ್ಮಂಗಳವನ್ನೀಯುವುದು ಪರಮಸತ್ಯ.

೮೧

ದೋಣಿಯಿದ್ದೇನು ಫಲ ? ನಾವಿಕನಿಲ್ಲದನ್ನಕ್ಕ.
ಆನೆಯಿದ್ದರೇನು ಫಲ ? ಮಾವುತನಿಲ್ಲದನ್ನಕ್ಕ.
ಧನವಿದ್ದೇನು ಫಲ ? ದಾನವಿಲ್ಲದನ್ನಕ್ಕ.
ಬಂಧುಗಳಿದ್ದೇನು ಫಲ ? ಸಹಾಯವಿಲ್ಲದನ್ನಕ್ಕ.
ಕಾಯವಿದ್ದರೇನು ಫಲ ? ದೇವಾಧಿದೇವ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶನ ಭಜಿಸಿದನ್ನಕ್ಕ

೮೨

ಧನಿಕನುಣ್ಣವುದು ಅನ್ನವನ್ನಲ್ಲದೇ ಚಿನ್ನವನ್ನಲ್ಲಾ.
ವಣಿಕನುಣ್ಣುವುದು ಅನ್ನವನ್ನಲ್ಲದೇ ಹಣವನ್ನಲ್ಲಾ.
ಶ್ರಮಿಕನುಣ್ಣುವುದು ಅನ್ನವನ್ನಲ್ಲದೇ ಮಣ್ಣನ್ನಲ್ಲಾ.
ಧನಿಕನಲ್ಲಿ ದರ್ಪ, ವಣಿಕನಲ್ಲಿ ವಂಚನೆ,
ಶ್ರಮಿಕನಲ್ಲಿ ಸರಳತೆ ಸಹಜ ಏನಿದರ ಗುಟ್ಟು.?
ಹುಟ್ಟುವ ಗರ್ಭ, ಮೆಟ್ಟುವ ಧರೆ ಲೆಕ್ಕವಿಲ್ಲ.
ಅರಿಷಡ್ವರ್ಗಗಳ ಕಟ್ಟುವ ಭಂಟರಿಗೆ ಸರಳತೆಯ
ಸಾಕಾರವಿದರ ಗುಟ್ಟೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ಪರಮಸತ್ಯ

೮೩

ಧನವಿದ್ದು ಫಲವೇನು?, ದಾನವಿಲ್ಲದನ್ನಕ್ಕ.
ವಿದ್ಯೆಯಿದ್ದಡೇನು ಫಲ? ವಿನಯವಿಲ್ಲದನ್ನಕ್ಕ.
ಮೌನಿಯಾಗಿದ್ದೇನು ಫಲ?, ಸನ್ನಡತೆಯಿಲ್ಲದನ್ನಕ್ಕ.
ನಾನಿದ್ದುಫಲವೇನು? ಅವಿರಳಜ್ಞಾನಿ ಅಗಮ್ಯ

ಅನುಪಮ ಚೇತನ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ನಿಮ್ಮ ಅಪ್ರತಿಮ ಶಕ್ತಿ ಅರಿಯದನ್ನಕ್ಕ.

೮೪

ನರನು ಹರನಾಗಬಲ್ಲೊಡೆ, ತೆರೆದ ಮನವಿರಬೇಕು.
ಸರಳ ಸಜ್ಜನಿಕೆಯ ತರಳನಾಗಿರಬೇಕು. ಅರಿಷಡ್ವರ್ಗಗಳ
ಅಟ್ಟಹಾಸವನು, ಮೆಟ್ಟಿ ನಿಲ್ಲುವ ಗಟ್ಟಿತನವಿರಬೇಕು.
ಸದ್ಗುರುವಿನ ಕರುಣಾ ಕಟಾಕ್ಷ ಓತಪ್ರೋತವಾಗಿ ಹರಿದು ಬರಬೇಕು.
ನಿರಂತರ ಹರನ ಧ್ಯಾನದಲಿ ಅಚಲಮನ ಬೆರೆತು ಮೆರೆಯಬೇಕು.
ಅರೆಕ್ಷಣವೂ ಹರನಾಮ ಜಪಿಸುವ ಧೃಢಮನದ
ತಾಪಸಿಗೆ ಮೃಡನೊಲಿಯದಿರ್ಪನೇ?
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಅಂಥ ಶರಣ ಶಿವನಲ್ಲಿ ಐಕ್ಯಗೊಂಡು ಹರನಾಗಿ ಮೆರೆಯುವನಲ್ಲವೇ?

೮೫

ನಂಬಿಕೆಯೇ ಸುಂದರ ಜೀವನ,
ಜಂಭವೇ ಅವನತಿಗೆ ಕಾರಣ ಮೂಢಾ.
ತುಂಬದದು ತುಳುಕುವುದು,
ತುಂಬಿದುದು ತುಳಕದು ನೋಡಾ.
ಶಂಭುವಿನ ಒಲುಮೆಗೆ ನಿರಾಡಂಬರ,
ನಿಷ್ಕಲ್ಮಶ ಮುಗ್ಧ ಮನದುಂಬಿದ
ಭಕ್ತಿಯೊಂದೇ ಸಾಕೆಂದ ಎನ್ನೊಡೆಯ ಘನಮಹಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೮೬

ನಶಿಸಿ ಹೋಗುವವನಲ್ಲ. ಮಾಸಿ ಅಳಿಸುವವನಲ್ಲ.
ಆಸೆಯೆನ್ನುವ ಭಾಷೆಯವನಲ್ಲ. ಹುಸಿಯಮಾತು ಕೇಳುವವನಲ್ಲ.
ಬಸಿರಿನಿಂದ ಉದಯಿಸಿದವನಲ್ಲ.
ಜಾತಿಮತಗಳಿಗೆ ಜೋತು ಬೀಳುವವನಲ್ಲ.
ಮುಕ್ತಮನದ ಸದ್ಭಕ್ತರಿಗಲ್ಲದೆ ಮತ್ತಾರಿಗೂ ನಿಲುಕುವವನಲ್ಲ,
ಎನ್ನೊಡೆಯ ಸಾಕಾರ ನಿರಾಕಾರ ನಿರ್ಮಲ ಪರಂಜ್ಯೋತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ನಿಮ್ಮ ಪ್ರಜ್ವಲಿಪ ಸತ್ಯದರ್ಶನ ನಿತ್ಯ ಕರುಣಿಸಯ್ಯಾ.

೮೭

ನಾನು ಎಂದಲ್ಲಿ ಆಸೆ ಹುಟ್ಟಿತ್ತು.
ನಾನು ಎಂದಲ್ಲಿ ಕ್ರೋಧ ಸಿಡಿದಿತ್ತು.
ನಾನು ಎಂದಲ್ಲಿ ಮೋಹ ಮೆರೆದಿತ್ತು.
ನಾನು ಎಂದಲ್ಲಿ ಲೋಭ ಲಜ್ಜೆಗೆಟ್ಟಿತ್ತು.
ನಾನು ಎಂದಲ್ಲಿ ಮದ ಮಿಂಚಿತ್ತು.
ನಾನು ಎಂದಲ್ಲಿ ಮತ್ಸರ ಮರುಕಳಿಸಿತ್ತು.
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ
ನಾನೆಂಬ ಭಾವವಳಿದು ನೀನೇ ಎಂಬ ಭಾವ ಬಲಿತಾಗ
ನಿಮ್ಮ ದಿವ್ಯಚರಣಂಗಳಲ್ಲಿ ಈ ಮನಕೆ ಶಾಂತಿ ಲಭಿಸಿತ್ತು

೮೮

ನಾಗರಪಂಚಮಿಗೆ ನಾಗನ ಪೂಜೆ.
ಗಣೇಶ ಚತುರ್ಥಿಯಲಿ ಗಣಪನ ಪೂಜೆ.
ನವರಾತ್ರಿಯಲಿ ಶಕ್ತಿಯ ಪೂಜೆ.

ದೀಪಾವಳಿಯಲಿ ಲಕ್ಷ್ಮಿಯ ಪೂಜೆ.
ಎಳ್ಳು ಅಮಾವಾಸ್ಯೆಗೆ ಭೂದೇವಿಯ ಪೂಜೆ.
ಮಹಾಶಿವರಾತ್ರಿಯಲಿ ಶಿವನ ಪೂಜೆ
ಇಂತು ಆ ದೈವಗಳ ಪೂಜೆಗೈದು ಭಾಗ್ಯಪಡೆವರಯ್ಯ.
ಇಷ್ಟಲಿಂಗ ಪೂಜೆ ಪ್ರತಿದಿನಗೈದೊಡೆ ಜೀವಿತದಲ್ಲಿ
ಅದೆಂಥಾ ಭಾಗ್ಯವಿದೆಯೆಂದು ಅರಿಯಲೇಕೆ
ಅಸಮರ್ಥರೆಂಬುದು ನನಗೆ ತೋಚದಾಗಿದೆಯಯ್ಯಾ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಇಷ್ಟಲಿಂಗದಲಿ ನಿಮ್ಮ ರೂಹು ಸ್ಪಷ್ಟವಾಗಿ ಕಾಂಬೆನಯ್ಯಾ

೮೯

ನಾಡನಾಳುವ ನಾಯಕನಾದಡೇನು?
ಕಾಡಸೌದೆ ಕಡಿಯುವ ಬಡವನಾದಡೇನು?
ಕುಡಿಯಲು ನೀರು, ಒಡಲಿಗೆ ಹಿಡಿ ಅನ್ನ,
ಅಡಿಗಡಿಗೆ ಮೃಡ ನೀಡುವ ಗಾಳಿ ಪಡೆಯಲೇ ಬೇಕಲ್ಲವೇ?
ಮೇಲು ಕೀಳು ದೀನ ದಲಿತರೆಂಬ
ಭೇದವೆಲ್ಲಿದೆ ಪ್ರಕೃತಿಯ ಮಡಿಲಲ್ಲಿ?
ಮಾನವ ನಿರ್ಮಿತ ವಿಕೃತಿಯನ್ನಳಿಸಿ ,
ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ
ವಿಶ್ವಕ್ಕೆ ಶಾಂತಿ ಎನ್ನುವ ವೀರಶೈವ ಲಿಂಗಾಯತ
ಸಂಸ್ಕೃತಿಗೆ ಶರಣಾಗಿ ಸದಾಚಾರ ಸಂಪನ್ನರಾಗಿ ಬಾಳಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೯೦

ನಾನೆಂಬ ಕೊಂಬು ಹುಟ್ಟಿ ಶುಂಭ
ನಿಶುಂಭರಂತೆ ಬೆಂಬತ್ತಿದೆ ಜಂಭ.

ಜಂಭದಲಿ ಮೆರೆಯುತ ಸಂಭ್ರಮಿಸುವ
ನೀಚಬುದ್ಧಿಯು ಬಾರದಿರಲಿ.
ಅಲ್ಪ ನರನು ನಾನು, ಕಲ್ಪತರು ನೀನು.
ಗುರು ಲಿಂಗ ಜಂಗಮರ ಒಡನಾಟದಲಿ ಮನವ ನಿಲ್ಲಿಸಿ
ಕಡು ಪ್ರೇಮದಿ ಕಾಣುತ್ತಲಿರುವ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಬೆಡಗಿನ ನಡೆಯಿಂದಾನು ಬದುಕಿರ್ದೆನಯ್ಯಾ.

೬೧

ನಾನು ಇರುವತನಕ ಅನ್ನ,ಅರಿವೆ, ಹೊನ್ನು,
ಹೆಣ್ಣು, ಮಣ್ಣಿನ ಮೇಲಣ ಆಸೆ ಅಧಿಕ.
ನಾನು ಅಳಿಯುವತನಕ ಕೋಪ, ತಾಪ, ದರ್ಪ,
ಗರ್ವ, ಮತ್ಸರ, ಮಮಕಾರಗಳು ಅಧಿಕ.
ಈ ಅಧಿಕಗಳ ಅಧಿಕ ಪ್ರಸಂಗದಿಂದ ನಾನಾರು?
ನನ್ನ ಕರ್ತವ್ಯ ಏನು? ಎಂಬುದ ಮರೆತು
ತಿರುತಿರುಗಿ ಭುವಿಗೆ ಬರುವುದೇತಕೋ ?
ಸದ್ಗುರುವಿನ ಆಶ್ರಯಿಸಿ ಸತ್ಯ ಜ್ಞಾನ ಹೊಂದಿ,
ನಾನೆಂಬುದನಳಿದು ನೀನೇ ಎಂದು ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಪ್ರಜ್ವಲಿಪ ಪ್ರಖರ ಪಾದಂಗಳ ಪಿಡಿದು ಸ್ಥಿರಮುಕ್ತಿ ಪಡೆ.

೬೨

ನಾಲಿಗೆಯ ನುಡಿ ನರನ ಮೌಲ್ಯ ನಿರ್ಧರಿಸುವುದು.
ಒಲವಿನ ಮಾತು ಸಂಬಂಧದ ಹಿಡಿತ ತೋರುವುದು.
ನೂಲಿನ ಶಕ್ತಿ ಬಟ್ಟೆಯ ಬೆಲೆ ಕಟ್ಟುವುದು.
ಸದ್ಗುರುವಿನ ವಾಣಿ ಸತ್ಯದ ಬೆಳಕು ಬೀರುವುದು.

ಅಂತೆಯೇ ನಿತ್ಯ ಸತ್ಪಥ ತೋರುವ
ಸದ್ಗುರುವಿನ ಸೇವೆಯಲ್ಲಿರ್ದು
ಜೀವನ ಸಾರ್ಥಕ ಮಾಡಿಕೊಳ್ಳಿರೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೩

ನಿತ್ಯವೂ ಬೀರುವುದು ಬೆಳಕು, ಬೆಳಕಿನಾ ನಂತರ
ಮುತ್ತುವುದು ಕತ್ತಲೆ. ಇದು ಜಗದ ನಿಯಮ.
ಸತ್ಯವಿದು ಬಾಳಲ್ಲಿ ಸುಖ, ಸುಖ ಕಳೆಯೆ ಬದುಕಲ್ಲಿ ದುಃಖ,
ಇದು ಕರ್ಮಾನುಸಾರ ವಿಧಿನಿಯಮ.
ಧರ್ಮ ಕರ್ಮ ಬದುಕಿನ ಬದಲಾವಣೆಗೆ ಪೂರಕ,
ಮಾರಕ ತಾರಕಗಳ ಆಯ್ಕೆ ನಿನ್ನದು,
ಇದು ನಿತ್ಯ ಇದು ಸತ್ಯ ಎಂಬುದು ಮರೆಯದಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೪

ನಿಮ್ಮೊಲುಮೆ ಇದ್ದಾಗ ಓಡಿ ಹೋಗುವವು
ಕಷ್ಟ ಕಾರ್ಪಣ್ಯಂಗಳು, ದುಃಖ ದುಮ್ಮಾನಂಗಳು,
ನಿಮ್ಮೊಲುಮೆ ಇದ್ದಾಗ ಸನಿಹ ಬಾರವು
ತೊಂದರೆ ತಾಪತ್ರಯಂಗಳು, ಅಡ್ಡಿ ಆತಂಕಗಳು.
ನಿಮ್ಮೊಲುಮೆ ಇದ್ದಾಗ ಭಯವು ಬಯಲಾಗಿ
ಬದುಕಿನ ಭಾರವಳಿದು ಭಾವ ಅನುಭಾವಗೊಳ್ಳುವುದು.
ಅಪಾರಮಹಿಮ ಅಗಣಿತ ಗುಣಧಾಮ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ
ದಯೆಯಿಂದಾನು ಬವದ ಭವಣೆಂಗಳ ದಾಟುತ್ತಾ
ನಿಶ್ಚಿಂತೆಯಿಂದಾನು ಬಾಳುತಿರ್ದೆನಯ್ಯಾ

೬೫

ನಿಮ್ಮ ಪೂಜೆಗೆ ಮಡಿಯ ಜಲ, ಭಸ್ಮ ಗಂಧಾಕ್ಷತೆ,
ಧೂಪ ದೀಪಾದಿಗಳ ಜೋಡಿಸುವರಯ್ಯಾ.
ಪತ್ರಿ, ಪುಷ್ಪಾದಿ ಫಲಗಳನು ಒಪ್ಪವಾಗಿರಿಸುವರಯ್ಯಾ,
ಷೋಡಶೋಪಚಾರದ ಪೂಜೆಗೆ ಅಣಿಯಾಗುವರಯ್ಯಾ,
ಸಕಲ ಪಡಿ ಪದಾರ್ಥಗಳು ದೇವ ಕರುಣಿಸಿದ ಪರಿಕರಗಳಯ್ಯಾ .
ಸಮರ್ಪಣಾ ಭಾವದಲಿ ಅರೆ ಫಳಿಗೆ ಧ್ಯಾನಿಸುವ
ಮಾನಸ ಪೂಜೆಗೊಲಿಯುವೆ ಎಂಬುದನರಿಯರಯ್ಯಾ,
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಂಗೆ
ಭಕ್ತಿ ಭಾವವೊಂದೇ ಸಾಕಯ್ಯಾ.

೬೬

ನಿರಾಕಾರ ನಿರಂಜನ ನಿರವಯ ಶ್ರೀ ವೀರಭದ್ರ.
ಕಾಂಖೇಲಾ, ಯಡೂರ, ಚಾಂಗಲೇರಾ, ಕಾಳೆಬೆಳಗುಂದಿ
ಪುಣ್ಯತಾಣಗಳಲ್ಲಿ ಲಿಂಗರೂಪದಲ್ಲಿ ಪೂಜೆಯಯ್ಯಾ,
ಸಾಕಾರ ಸಾಂಪ್ರದಾಯಿಕ ಸರ್ವಜ್ಞ ಶ್ರೀ ವೀರಭದ್ರ,
ರಾಚೋಟಿ, ದೇವಸೂಗೂರ, ಗೊಡಚಿ, ಹಂಪಿ
ಸುಕ್ಷೇತ್ರಗಳಲ್ಲಿ ಸುಭದ್ರಮೂರ್ತಿ ಪೂಜೆಯಯ್ಯಾ,
ಶುದ್ಧ ಮನದಲಿನೋಡಲು ನಿರಾಕಾರ ಪರಬ್ರಹ್ಮ.
ಶುದ್ಧನಯನದಲಿ ಕಾಣಲು ಸಾಕಾರ ಪ್ರಚ್ಛನ್ನ
ಪರಮಾತ್ಮನಾಗಿರುವ ಎನ್ನೊಡೆಯ ನಿಷ್ಕಳಂಕ ನಿತ್ಯಸತ್ಯಾತ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ನುತಿಸಲು ಶಬ್ದಗಳೇ ಸಾಲದಯ್ಯ

೬೭

ನಿಪುಣ ಶಿಲ್ಪಿಗಳಿಂದ ದೇವಾಲಯ ಪರಿಪೂರ್ಣ.
ಕೃಪಣರ ಕೈಚಳಕದಿಂದ ವ್ಯವಸ್ಥೆ ಅಪೂರ್ಣ.
ದೈವ ಸನ್ನಿಧಿಯಲ್ಲಿ ದೀನದಲಿತರ ದುಃಖ ನಿವಾರಣ.
ಭಾವ ಭಕ್ತಿಯಲಿ ಕಾಣದೆಂದೂ ಅಸಮಾನತೆ ಗುಣ.
ಇಲ್ಲಿಹುದು ಶಿವಜೀವಿಗಳ ಪರಾಕಾಷ್ಠೆ ಪ್ರಮಾಣ.
ಅನುದಿನ ತೊಳಗಿ ಬೆಳಗುತಿದೆ ಸ್ವಾಮಿ ನಿಷ್ಠೆಯ ಕಿರಣ.
ಪಂಚತತ್ವಗಳಿಗೊಳಪಟ್ಟ ಆಚಾರ ವಿಚಾರಗಳ ಸಮ್ಮಿಶ್ರಣ.
ಇದುವೇ ಜಗದೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ಕರುಣ

೬೮

ನೀರು ನೀನಿತ್ತ ಸುರಿಮಳೆ.
ಪರಿಮಳ ನೀನಿತ್ತ ಉಡುಗೊರೆ.
ತರಿದು ತಂದ ಹೂ ಪತ್ರೆ ನೀನಿತ್ತ ಕರುಣೆ.
ಅರ್ಚನೆ ಮಾಡಿ ಮುಗಿವ
ಈ ಕೈಗಳು ನೀನಿತ್ತ ವರದಾನ.
ನೀನಿತ್ತ ಸಲಕರಣೆಯಿಂ ಪೂಜೆಗೈದು
ನೀನಿತ್ತ ಭಿಕ್ಷೆಯನುಂಡು
ನಾ ಮಾಡಿದೆನೆಂಬ ಒಣ
ದುರಹಂಕಾರ ಪಡುವರಲ್ಲಾ.
ಎನ್ನೊಡೆಯ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ನಾನೆಂಬ ಅಹಂಕಾರಿಗಳ ಕೆಡಹಿ
ಮೂಗಕೊಯ್ಯದಿರ್ಪನೇ?

೯೯

ನಿರ್ಮಲ ಹೃದಯವೇ ಪರಿಶುದ್ಧ ಜಲ.
ನಿರಹಂಕಾರ ಭಾವವೇ ಧೂಪ ದೀಪ .
ನಿರ್ಮೋಹ ಗುಣವೇ ನೈವೇದ್ಯ.
ನಿಶ್ಚಲ ಮನವೇ ಪ್ರಣವ ಪಂಚಾಕ್ಷರಿ ಮಂತ್ರ.
ನಿಷ್ಪ್ರಂಪಚವೇ ಜಪ ತಪಂಗಳು.
ಅಪ್ಪಾ, ಕೋಟಿಸೂರ್ಯ ಸಮಪ್ರಭೆಯುಳ್ಳ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಪ್ರತಿಮ ಪ್ರಜ್ವಲಿಪ ಪ್ರಖರ ಪಾದಪದ್ಮಂಗಳೆನಗೆ
ಶ್ರೀ ಕೈಲಾಸವಯ್ಯ. ನೀನೇ ಎನಗೆ ಪರಮ ದೈವ.

೧೦೦

ನುಗ್ಗಿ ಜಗ್ಗಿ ಬಲವಿಕ್ಕಿ ಪಡೆಯಬಹುದೇ ಗುರು ಕಾರುಣ್ಯ?
ತಗ್ಗದೇ ಬಗ್ಗದೇ ಅಗ್ಗದಲಿ ದೊರೆವುದೇನು? ಸಗ್ಗ.
ಅಲ್ಲ ಅಲ್ಲ ತನುಬಾಗಿ ಮನತೂಗಿ ಧನ ಕುಗ್ಗಿದೊಡೆ
ಸದ್ಗುರು ಸಂಭ್ರಮಿಸೆ ಆಗ ನಾನಳಿದು
ಭಕ್ತಿ ಚಿಮ್ಮಿ ಭಾವ ಹೊರಹೊಮ್ಮಲು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಸಗ್ಗಕ್ಕತಿಶಯದ ಸದ್ಗತಿ ಕರುಣಿಸುವನಯ್ಯ.

೧೦೧

ನೆಲ ನಿನ್ನದು, ಜಲ ನಿನ್ನದು, ಈ ಕಾಲಚಕ್ರವೂ ನಿನ್ನದಯ್ಯ,
ಹಣ್ಣು ನಿನ್ನದು,ಬಣ್ಣ ನಿನ್ನದು, ಈ ನೋಡುವ ಕಣ್ಣು ನಿನ್ನದಯ್ಯ
ಹಾಲು ನಿನ್ನದು, ಜೇನು ನಿನ್ನದು ಈ ಗೆಲುವು ನಿನ್ನದಯ್ಯ
ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಕೇಳುವವರು ನಾವಯ್ಯ.

ಅಯ್ಯಾ ಕರುಣವಾರಿಧಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಎಮ್ಮ ತಪ್ಪುಗಳ ಮನ್ನಿಸಿ ರಕ್ಷಿಸಯ್ಯಾ.

೧೦೨

ನೆಲವೊಂದೇ ಜೀವಿಗಳಿಗೆ ಆಸರೆಯಹುದು.
ಜಲವೊಂದೇ ತೃಷೆಯ ತಣಿಸುವುದು.
ಛಲವೊಂದೇ ಬದುಕಲು ಕಲಿಸುವುದು.
ಭಕ್ತಿಮಾರ್ಗವೊಂದೇ ಮುಕ್ತಿಗೆ ಸಾಧನವಹುದೆಂದ,
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦೩

ನೇತ್ರಗಳುಂಟು ನಿಮ್ಮ ಪರಮ
ಪಾವಿತ್ರ್ಯ ದರ್ಶನ ಪಡೆಯಲು.
ಕರ್ಣಗಳುಂಟು ವರ್ಣನೆಗೆ ನಿಲುಕದ
ನಿಮ್ಮ ಸುಜ್ಞಾನವನಾಲಿಸಲು.
ನಾಸಿಕವುಂಟು ಸುಮಧುರ ನಿಮ್ಮ ಸುಗಂಧ
ಧೂಪದ ಪರಿಮಳ ಆಘ್ರಾಣಿಸಲು.
ನಾಲಿಗೆಯುಂಟು ನಿಮ್ಮ ಅಚ್ಚಳಿಯದ
ಅದ್ಭುತ ಚರಿತೆಯ ಹಾಡಲು.
ತ್ವಚೆಯಿಂ ಪರಿಪೂರ್ಣಗೊಂಡ ಅಂಗಾಂಗಳುಂಟು
ನಿಮ್ಮ ಸೇವೆಯೇ ಉಸಿರಾಗಿರಿಸಲು.
ಎನ್ನೊಡೆಯ ಅಶುತೋಷ ಅದ್ವಿತೀಯ ಆದಿ ಜಗದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಪಂಚೇಂದ್ರಿಯಗಳು ನಿಮಗರ್ಪಿಸಿ ನಡೆವ ಮಹಾನುಭಾವರು
ಜಗದಲಿ ನಿತ್ಯ ನಿಶ್ಚಿಂತರು ನೋಡಾ.

೧೦೪

ಪರಶಿವನ ಆಣತಿ ಹೊತ್ತು ಧರೆಗಿಳಿದ ವೀರೇಶ.
ಮಾಂಡವ್ಯಪುರದಿ ರಾಜಗುರುವಾದ ಚನ್ನವೀರೇಶ,
ಬಸವನ ಬಿನ್ನಹಕೆ ಹರಸಿ ಆರು ಸಾವಿರ
ಜಂಗಮರನೊಪ್ಪಿಸಿದ ಗುರು ವೀರೇಶ ..
ಅನುಭವ ಮಂಟಪದ ಶರಣರಿಗೆ
ಕ್ರಿಯಾಮೂರ್ತಿ ಜಂಗಮ ವೀರೇಶ.
ಗಬ್ಬೂರ ಗ್ರಾಮದೋಳ್ ದಾಸೋಹ ಮೆರೆದ
ಬಿಬ್ಬೆ ಬಾಚರಸರ ಮನೆದೈವ ವೀರೇಶ,
ಆನಂದ ಕೆಂಚವೀರಯ್ಯರೊಂದಿಗೆ ಪರಮ
ಮೂರ್ತಿಯಾಗಿ ಬಂದುಳಿದ ದೇವಸೂಗೂರೇಶ,
ಜಾತಿಮತ ಭೇದವನಳಿದು ಸಕಲ ಸದ್ಭಕ್ತರಿಗೆ
ಸನ್ಮಂಗಳವನ್ನು ಕರುಣಿಸುತ್ತಲಿರುವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಮೋ ನಮಃ

೧೦೫

ಪಶು ಪಕ್ಷಿಗಳಿಗೆಲ್ಲ ಹಸಿವು ನೀಗಿಸುವ ಪಶುಪತಿ,
ಜೀವ ಜಂತುಗಳಿಗೂ ಕಾವ ಜಗಪತಿ.
ಸುರ ನರರ ಆಶೋತ್ತರಗಳಿಗೆ ಅಧಿಪತಿ.
ಅಣು ರೇಣು ತೃಣಕಾಷ್ಠಗಳಿಗೆ ನೀನೇಗತಿ.
ಸಜ್ಜನರಿಗೆ ಸಂಪತ್ತು ದುರ್ಜನರಿಗೆ
ವಿಪತ್ತು ಕಲ್ಪಿಸುವ ಲಿಂಗಪತಿ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ ಪ್ರಖರ
ಪ್ರಜ್ವಲಿಸುವ ದಿವ್ಯ ಪಾದಪದ್ಮಂಗಳಿಗೆ ನಮೋ ನಮಃ

೧೦೬

ಪಂಜರದಲಿರ್ದ ಪಕ್ಷಿ ಸ್ವಚ್ಛಂದವಾಗಿರಲು ಸಾಧ್ಯವೇ?
ಹಂಗಿನರಮನೆಯಲ್ಲಿರ್ದ ಮನ ಸಂಭ್ರಮಿಸಲು ಸಾಧ್ಯವೇ?
ಸ್ವಂತಿಕೆಯೇ ಸ್ವರ್ಗವೆಂದರಿತು, ಸ್ವಾವಲಂಬಿಯಾಗಿ
ಸ್ವಾಭಿಮಾನತಳೆದು, ಸದ್ಗುಣಿಯಾಗಿ ಬಾಳಿದೊಡೆ
ಜನ್ಮ ಸಾರ್ಥಕವೆಂದ ಎನ್ನೊಡೆಯ
ಅಖಂಡ ಜ್ಞಾನಿ ಪರಮ ಪರಂಜ್ಯೋತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦೭

ಪಂಚೇಂದ್ರಿಯಗಳ ಚಪಲಕ್ಕೆ ಸಿಲುಕಿ
ಸುಖಿಯಾಗಿರ್ಪೆನೆಂಬುವರಯ್ಯಾ,
ಕಿಂಚಿತ್ತೂ ಬುದ್ಧಿಯಿಲ್ಲದೆ ಕೊಂಚ ಸುಖಕ್ಕೀಡಾದ
ಸೊಣಗನಂತೆ ಜೊಲ್ಲು ಸುರಿಸುವ ಪರಿ ಕಾಣಿರಯ್ಯಾ,
ಪಂಚಕ್ಲೇಷಗಳಳಿದು ಪ್ರಪಂಚದಲಿ ಬಾಳುವುದು ಬಲುಕಷ್ಟ.
ಸದ್ಗುರುವಿನ ಬಲದಿಂದ ಅಂಗ ಸುಖವಳಿದು,
ಲಿಂಗ ಸಖಿಯಾಗಿ ಕೂಡಲ ಸಂಗಯ್ಯನೊಡಗೂಡಿ
ಓಲಾಡುವ ಸುಖವೇ ಶಾಶ್ವತಸುಖವೆಂದ,
ನಮ್ಮ ಗುರು, ಲಿಂಗ, ಜಂಗಮ ಪುಂಗವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೦೮

ಪಂಚತತ್ವಗಳಿಂದಾದ ಕಾಯವೆನ್ನುವರು,
ಪಂಚಾಚಾರಗಳ ಪಾಲಿಸದಿರ್ಪರಯ್ಯಾ.
ಪಂಚವಕ್ತ್ರನ ಕಿಂಚಿತ್ತೂ ನೆನೆಯದೆ,
ಪಂಚೇಂದ್ರಿಯಗಳ ಚಪಲಕ್ಕೆ ಬಿದ್ದಿರ್ಪರಯ್ಯಾ.

ಹೊಂಚುಹಾಕಿದ ಕಾಲನ ಪಾಶವ ಲೆಕ್ಕಿಸದೆ
ಚಂಚಲ ಮನದ ತಾಳಕ್ಕೆ ಕುಣಿಯುತಿರ್ಪರಯ್ಯಾ,
ಪ್ರಪಂಚದಲಿ ಇಂಥವರ ಆಟಾಟೋಪವ ಕಂಡು,
ಹುಸಿ ನಗೆಯ ನಗುತಿರ್ಪ ಜಗದೊಡೆಯ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೧೦೯

ಪಂಚಭೂತಗಳಿಂದ ಈ ಜಗವು.
ಪಂಚೇಂದ್ರಿಯಗಳಿಂದ ಈ ಜೀವವು.
ಪಂಚಾಂಗದಿಂದ ಜ್ಯೋತಿರ್ವಿಜ್ಞಾನವು.
ಪಂಚತತ್ವವೇ ಪರತರ ಶಕ್ತಿಯ ಮೂಲಾಧಾರವು.
ಪಂಚವಕ್ತ್ರ ಪರಮಾತ್ಮನೇ
ಸಕಲಕಾಧಾರವೆಂಬುದೇ ಪರಮಸತ್ಯವು.
ಇದನರಿತು ಶುದ್ಧ ಮನದಿ ನಡೆವ ಸತ್ಯ ಶರಣನು
ನಿತ್ಯ ತೃಪ್ತನೆಂದ ಎನ್ನೊಡೆಯ ಮಹಾರುದ್ರ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೦

ಪ್ರಣತೆಯಲ್ಲಿ ಎಣ್ಣೆ ಹೊಯ್ದು
ದೀಪ ಹಚ್ಚಲು ಕತ್ತಲೆ ಕಳೆಯುವುದು.
ಘನತೆವೆತ್ತ ಸದ್ಗುರು ಸುಜ್ಞಾನ ನೀಡಲು
ಅಜ್ಞಾನ ತೊಲಗುವುದು.
ಮೃಣ್ಮಯ ಕಾಯವು ಸತ್ಸಂಸ್ಕಾರದಿಂದ
ಚಿನ್ಮಯವಾಗುವ ಪರಿಯನರಿತು
ಶ್ರೀ ಗುರುಗಳ ಸತ್ಸಂಗದಲಿ ಬಾಳಿರೆಂದ ಸುಜ್ಞಾನ ಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೧೧

ಪಾಪ ದಹಿಸುವುದು ಪಾದೋದಕವಯ್ಯಾ.
ತಾಪ ಕಳೆಯುವುದು ಪ್ರಸಾದವಯ್ಯಾ,
ಚಿದ್ರೂಪ ತೋರುವುದು ಶ್ರೀಗುರುವಿನ ಕೃಪೆಯಯ್ಯಾ,
ಗುರು ಲಿಂಗ ಜಂಗಮ ಸಾಂಗತ್ಯ
ಅವಿನಾಭಾವ ಸಂಬಂಧವಯ್ಯಾ,
ಎನ್ನೊಡೆಯ ಜಗದಾದಿ ಜಗದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಗುರು ಲಿಂಗ ಜಂಗಮನಾಗಿ ಜಗವ ಬೆಳಗುತಲಿರ್ಪುದು
ಪರಮ ಸತ್ಯವಯ್ಯಾ, ಸತ್ಯ ದರ್ಶನ ನಿತ್ಯ ಮಾಡಿರಯ್ಯಾ,
ಪಾದೋದಕ ಪ್ರಸಾದ ಪಡೆದು ಪಾವನರಾಗಿರಯ್ಯಾ.

೧೧೨

ಪ್ರಾರಬ್ಧಕರ್ಮಕಳೆಯಲು ಪ್ರಯತ್ನವೇ
ಊರುಗೋಲುನೋಡಯ್ಯಾ.
ನಿಶ್ಶಬ್ದದನುಭವಕ್ಕೆ ಮೌನವೇ ಉಡುಗೊರೆ ಕಾಣಯ್ಯಾ,
ಚಿಶ್ಶಕ್ತಿ ಬೆಳೆಯಲು ಭಕ್ತಿಯೇ ಆಸರೆಯಯ್ಯಾ, ಸತ್ಯಶರಣನಾಗಲು
ಮಹಾಂತರ ಮಹಾ ಆಶಿರ್ವಾದವೇ ಕಾರಣವಯ್ಯಾ
ಎನ್ನೊಡೆಯ ಅಪಾರಮಹಿಮ ಅಗಣಿತ ಗುಣಧಾಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನೊಲುಮೆಗೆ ನಿಷ್ಕಾಮ ಭಕ್ತಿ ಬೇಕಯ್ಯಾ.

೧೧೩

ಪುಷ್ಪಗಳಿಗೆ ಬಣ್ಣಹಚ್ಚಿ ಪರಿಮಳವಿತ್ತೆ.
ಫಲಗಳಿಗೆ ಕವಚವಿತ್ತು ರಸವ ತುಂಬಿದೆ.

ಪಕ್ಷಿಗಳಿಗೆ ರೆಕ್ಕೆ ಇತ್ತು ಹಾರುವಂತೆ ಮಾಡಿದೆ.
ಜೀವಿಗಳಿಗೆ ಬದುಕನಿತ್ತು ಚಲನೆ ನೀಡಿದೆ.
ಮಾನವನಿಗೆ ಮೆದುಳನಿತ್ತು ವಿಚಾರಕ್ಕೆ ಹಚ್ಚಿದೆ.
ಮೆದುಳು ಸದ್ವಿಚಾರದಲ್ಲಿರ್ದೊಡೆ ಮಾನವನಾಗುವ,
ದುರ್ವಿಚಾರಕ್ಕೆಳಸಿದೊಡೆ ದಾನವನಾಗುವ,
ಈ ಪರಿ ನಾಟಕ ಕಂಡು ದಿಗ್ಭ್ರಾಂತನಾದೆ.
ಸದ್ವಿಚಾರ, ಸದ್ಭಾವ, ಸತ್ಸಂಗದಾಶ್ರಯ ನೀಡೆನಗೆ ತಂದೆ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಕರುಣೆಯ ಕಂದ ನಾನಯ್ಯಾ.

೧೧೪

ಫಲಾಪೇಕ್ಷೆಯ ಬಯಸಿ ನಡೆಯುತ್ತಿದೆ ಜನ.
ಛಲವಿಲ್ಲ, ಒಲವಿಲ್ಲ, ಬಲವಿಲ್ಲ, ನೆಲೆಯಿಲ್ಲ, ತಳವಿಲ್ಲ.,
ನೀತಿಯಿಲ್ಲ ರೀತಿಯಿಲ್ಲ, ಇಂಥ ಶ್ರಮವಿಲ್ಲದ
ಧನ ಅದೆಷ್ಟು ನೆಮ್ಮದಿ ನೀಡುವುದಯ್ಯಾ.
ಸುಳ್ಳು, ಕಪಟ, ಮೋಸ ವಂಚನೆಯ ಧನ ಪಾಪ ಕೂಪಕ್ಕೆ
ತಳ್ಳುವದಲ್ಲದೆ ಸತ್ಕಾರ್ಯಕ್ಕೆ ಸಲ್ಲದಯ್ಯಾ,
ಸದಾ ಶಿವಾನುಗ್ರಹ ಬಯಸುವ ಮನ
ದುರಾಸೆಗೊಳಗಾಗದಿರ್ದೊಡೆ ಮಹಾ ಮಹಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕೈ ಹಿಡಿದು ಕಾಪಾಡುವನು ಸಂಶಯಬೇಡ.

೧೧೫

ಬಯಕೆಗಳೆಲ್ಲ ಕೈಗೂಡಿದೊಡೆ ಭಯವೇ ಉಳಿಯದಯ್ಯಾ.
ಆಸೆಗಳೆಲ್ಲ ಈಡೇರಿದೊಡೆ ಅಹಂಕಾರ ಹೆಚ್ಚುವುದಯ್ಯಾ.
ಕನಸುಗಳೆಲ್ಲಾ ನನಸಾದೊಡೆ ನಾಕವೇ ನನ್ನದೆನ್ನುವುದಯ್ಯಾ.

ಅಂದುಕೊಂಡಂತೆಯೇ ಒದಗಿ ಬಂದರೇ
ಇಂದುಧರ ನಾನೇ ಎನ್ನುವುದಯ್ಯಾ.
ಜಗವೆಲ್ಲ ಧಗಧಗಿಸುವಂತೆ ಮಾಳ್ಪ ಮನುಜರಿವರಯ್ಯಾ.
ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕಡಿವಾಣ ತೊಡಿಸಿ ಆಟ ಆಡಿಸುವ ಸೂತ್ರಧಾರನಾಗಿರ್ಪನಯ್ಯಾ.

೧೧೬

ಬಯಲಲ್ಲಿಯೇ ಇದ್ದು, ಬಯಲಲ್ಲಿಯೇ ಎದ್ದು,
ಬಯಲಲ್ಲಿಯೇ ಮೆದ್ದು, ಬಯಲಲ್ಲಿಯೇ ಬಿದ್ದು,
ಬಯಲನ್ನೇ ಹೊದ್ದು, ಬಯಲಲ್ಲಿ ಬಯಲಾಗಿ ಹೋಗುವ
ಮುನ್ನ ಬಯಲಿನ ಎಲ್ಲೆಯನರಿಯಲು ಬಯಲಿಗೆ ಬಯಲಾದ
ಅನಘಲಿಂಗ ನಿರಾಕಾರ ನಿರ್ಗುಣ ನಿರಾಪೇಕ್ಷ ನಿಷ್ಕಲಂಕ
ಪರಂಜ್ಯೋತಿ ಪರಮಾತ್ಮ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ಭಜಿಸು ಮನವೇ.

೧೧೭

ಬರಿದಾದ ತೇರು ಸಿಂಗಾರಗೊಂಡರೆ ಪೂಜಿಸಲಾಗದು.
ದೇವರ ಮೂರ್ತಿ ಮೂರ್ತಗೊಂಡಾಗ ಪೂಜೆಯಪ್ಪುದು.
ತೇರಿನ ಭವ್ಯತೆಗೆ ಬೆಲೆ, ಮೂರ್ತಿಯ
ದಿವ್ಯತೆಯಿಂದೆಂಬುದು ಮರೆಯಲಾಗದು.
ಕಾಯವಿದು ಬರಿದಾದ ಕೊರಡು ಸದ್ಗುಣಗಳಿಂದ ಕಂಗೊಳಿಪ
ಚೈತನ್ಯ ಮೂರ್ತಿಗೆ ಬೆಲೆ.
ಸದ್ಭಾವ ವಿಲ್ಲದ ಜೀವಿಗೆ ಸಜ್ಜನರಲ್ಲಿಲ್ಲ ನೆಲೆ.
ಕಾಯ ಪರಿಶುದ್ಧಗೊಳ್ಳಲು ಸದ್ಭಾವಿಗಳಾಗಿ
ಚೈತನ್ಯ ಹೊಂದಬೇಕೆಂದ

ಎನ್ನೊಡೆಯ ಚಿನ್ಮಯ ಜ್ಞಾನಿ ಚಿದ್ಘನಲಿಂಗ ಸಂಪೂಜ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೮

ಬರಡು ಜೀವನದಲ್ಲಿ ಎಡರು ತೊಡರುಗಳಲ್ಲಿ,
ಪರಡಿ ಪಾಯಸ ಭುಂಜಿಸಿ ಕಡೆ ಮೊದಲಿಲ್ಲದೆ
ಎರಡು ಗಾಲಿಗಳ ಗಾಡಿ ಓಡುತ್ತಿದೆ ನೋಡಯ್ಯ.
ಆರು ಕಂಟಕಗಳ ದಾಟ ಮೂರು ದಾರಿಯ ತೊರೆದು
ಮಹಾಮಹಿಮ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರು ವೀರೇಶನ
ಸೇರಲು ಶ್ರದ್ಧೆ, ಭಕ್ತಿ ಕಡಾಣಿಗಳು ಸಧೃಢವಾಗಿರಬೇಕಯ್ಯ

೧೧೯

ಬರಿಯ ಸಿರಿಯು ಹಿರಿಯದೆನ್ನದಿರು,
ತೋರುವದು ಗರ್ವವನು. ಕಿರಿದಾಗಿಸಿ ಮನವನು,
ದೂರಮಾಡುವುದು ಬಂಧು ಬಳಗವನು.
ಬರಿದಾಗಿಸಿ ಬುದ್ಧಿಯನು, ಜರೆಯಿಸುವುದು
ಗುರು ಹಿರಿಯರನು ನೋಡಾ.
ಸದುವಿನಯವೇ ಸದಾಶಿವನ ಒಲುಮೆ,
ಬದುಕಿನಲಿ ಬವಣೆಗೆಟ್ಟರೂ ಸದ್ವಿಚಾರ ಸದ್ಭಾವದ
ಹಾದಿಯಲಿ ಕರೆದೊಯ್ಯುವುದು ಕಾಣಾ.
ಗರ್ವವನು ಕಳೆದು ಸಿರಿಸಂಪದ ಅನುಭವಿಸಲು
ವಿನಯವಿರಬೇಕು ನೋಡಾ.
ವಿನಯವಿಲ್ಲದ ಸಿರಿಯು, ನೆಮ್ಮದಿಗೆ ಬಾಧಕವೆಂದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ..

೧೨೦

ಬಸವನ ನಡೆ ಇವನಾರವನೆನಿಸದೆ ಇವನಮ್ಮವನೆನಿಸಿತ್ತು.
ಬಸವನ ನುಡಿ ಹಸಿವು ನೀಗಿಸಿ, ಕಾಯಕಕ್ಕೆ ಕಸುವು ತುಂಬಿತ್ತು.
ಬಸವನ ಕೊಡುಗೆ ಸಕಲರಿಗೂ ಲೇಸನೇ ಬಯಸಿತ್ತು.
ಬಸವಾಕ್ಷರ ಮೌಢ್ಯತೆ ಕಳೆದು ಜಗಕೆ ಬೆಳಕು ಬೀರಿತ್ತು.
ಬಸವಾ ಎಂದೊಡೆ ಬದುಕಿನ ಭಾರ ಕಳೆದು ಹೂವಾಗಿತ್ತು.
ಅದುಕಾರಣ ಬಸವನ ಆದರ್ಶ ಎನ್ನೊಡೆಯ ಸಚ್ಚಿದಾನಂದ ಮೂರ್ತಿ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಂಗೆ ಮೆಚ್ಚುಗೆಯಾಗಿತ್ತು.

೧೨೧

ಬಾಳಿಗೆ ಬೆಳಕು ನೀಡುವದು ಸಂಪೂಜ್ಯರ ಪ್ರವಚನ.
ತನು ಮನ ಶುದ್ಧಮಾಡುವುದು ಸದ್ವಿಚಾರಗಳ ಶ್ರವಣ,
ಸಂಶಯಗಳ ನಿವಾರಿಸುವುದು ಸತ್ಸಂಗ ಮಂಥನ .
ಭಕ್ತಿ ಪಥವ ತೋರುವುದು ನಿರುತ ಶಿವಧ್ಯಾನ.
ಗುರು ಲಿಂಗ ಜಂಗಮರ ಸೇವೆಯಿಂದ ನೀ ಮುಕ್ತಿಗೆ ಭಾಜನವೆಂದ,
ಎನ್ನೊಡೆಯ ಅಶುತೋಷ ಅಪ್ರತಿಮದೈವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೨೨

ಬಾರದ ಊರಿಗೆ ಹೋದವರಿಗಾಗಿ ಮರುಗಿದರೇನು ಫಲ?
ಅರಿತು ಆಚಾರ ಮರೆತೆನೆಂದು ಕೊರಗಿದರೇನು ಫಲ?
ಸರಿಯಾದ ಸಮಯವನು ಸದುಪಯೋಗ
ಪಡಿಸಿಕೊಳ್ಳದಿರ್ದೊಡೇನು ಫಲ?
ಊರ್ವಿಯೊಳಗಿರ್ದ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪೂಜಿಸದಿರ್ದೊಡೇನು ಫಲ? ಶಿವಶಿವಾ
ಮಾನುಷ ಜನ್ಮಕ್ಕೆ ಬಂದರೂ ಪಶುಗಳಂತಾದಿರಲ್ಲಾ.

೧೨೩

ಬೇವು ಇದೆಯೆಂದೇ ಬೆಲ್ಲಕ್ಕೆ
ಮಾಧುರ್ಯವೆಂಬುದು ನೋಡಯ್ಯಾ.
ನೋವು ಇದೆಯೆಂದೇ ನಲಿವಿಗೆ
ಸೌಂದರ್ಯ ತೋರುವುದಯ್ಯಾ.
ಸಾವು ಇದೆಯೆಂದೇ ಜೀವನಕ್ಕೆ
ಸೌಕರ್ಯ ಒದಗಿಹುದಯ್ಯಾ,
ಗುರು ಇರುವುದರಿಂದಲೇ
ಶಿಷ್ಯನಿಂದ ಸತ್ಕಾರ್ಯಗಳಯ್ಯಾ
ಎನ್ನೊಡೆಯ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ಇರುವುದರಿಂದಲೇ
ಪ್ರಕೃತಿಯ ಚಲನೆ ನಿತ್ಯ ನಿರಂತರ
ಸ್ತುತ್ಯಾರ್ಹವೆನಿಸಿದೆಯಯ್ಯಾ,

೧೨೪

ಬೆಳಕಿನ ಮೂಲ ಜ್ಯೋತಿ, ಅರಿವಿಗೆ ಮೂಲ ಗುರು.
ಅಕ್ಷರ ನೀಡುವಾತ ಗುರು, ನಿರಂತರ ಕಾಯಕಕ್ಕೆ ಆಧಾರ,
ಭವಬಂಧನ ಕಳೆವಾತ ಸದ್ಗುರು, ಗುರುವಿನ ಮಾರ್ಗ ದರ್ಶನ
ಸತ್ಯದ ಸಾಕ್ಷಾತ್ಕಾರ. ನಿತ್ಯ ನಿರ್ಮಲ ಚಿತ್ತಾರ.
ಅದುವೇ ಮೋಕ್ಷದ ಮಹಾದ್ವಾರ. ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರು ವೀರೇಶ ನಿಮ್ಮ ಅಪ್ರತಿಮ
ಅಂಗುಷ್ಠದ ಭವ್ಯಾಕಾರ ಕಂಡು
ಜಗದಾದಿ ಜಗದ್ಗುರು ನೀನೇ ಎಂದೆ.
ನಿಮ್ಮ ಪಾದಕ್ಕೆ ಬಿದ್ದೆ. ಉದ್ಧರಿಸೆನ್ನ ತಂದೆ.

೧೨೫

ಭಸ್ಮಬಳಿದರೇನು ಫಲ? ದುರಾಸೆ ದೂರವಾಗದನ್ನಕ್ಕ.
ರುದ್ರಾಕ್ಷಿ ಧರಿಸಿದರೇನು ಫಲ?
ಕ್ಷುದ್ರ ವರ್ತನೆ ಛಿದ್ರಗೊಳ್ಳದನ್ನಕ್ಕ.
ಅಷ್ಟಾಂಗಯೋಗದಲದ್ದೇನು ಫಲ?
ಪರಸತಿಗಾಶಿಸುವ ದುಷ್ಟ ಗುಣವಳಿಯದನ್ನಕ್ಕ.
ಅಂತರಂಗ ಶುದ್ಧಿ ಇಲ್ಲದ ಡಾಂಭಿಕ
ವೇಷಧಾರಿಗಳನ್ನೆಂದಿಗೂ ಗುರುಗಳೆನ್ನಲಾಗದು.
ಇಂಥ ಕಪಟಿಗಳ ಕಂಡು ಮೋಸಹೋಗಬೇಡಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೨೬

ಭಕ್ತಿ ಎಂಬುದು ಶಕ್ತಿಗೆ ಮಣಿಯುವುದಲ್ಲ.
ಭಕ್ತಿ ಎಂಬುದು ಯುಕ್ತಿಗೆ ಬಾಗುವುದಲ್ಲ.
ಭಕ್ತಿ ಎಂಬುದು ಮೂಢನಂಬಿಕೆಯಲ್ಲ.
ಭಕ್ತಿ ಎಂಬುದು ಜಡವಸ್ತು ವಿಚಾರವಲ್ಲ.
ಭಕ್ತಿ ಎಂಬುದು ಬಲ್ಲಿದರ ಆಸ್ತಿಯಲ್ಲ.
ಭಕ್ತಿ ಎಂಬುದು ಬಡವನ ಸ್ವತ್ತಲ್ಲ.
ಭಕ್ತಿ ಎಂಬುದು ಜಾತಿ ಮತ ಜಂಜಾಟವಲ್ಲ.
ಭಕ್ತಿ ಎಂಬುದು ಇಷ್ಟ ದೈವದ ಮೇಲಿನ ನಂಬಿಕೆ.
ಭಕ್ತಿ ಎಂಬುದು ಗುರು ಹಿರಿಯರ ಮೇಲಿನ ಪ್ರೀತಿ, ವಿಶ್ವಾಸ.
ಭಕ್ತಿ ಎಂಬುದು ಧೃಢಮನದ ನಿಷ್ಕಾಮ ಬಯಕೆ.
ಭಕ್ತಿ ಎಂಬುದು ಶ್ರೀಗುರು ಕರುಣೆಯ ಪಾದೋದಕ.
ಭಕ್ತಿ ಎಂಬುದು ಮೃಡ ಉಣ ಬಡಿಸಿದ ಪ್ರಸಾದ.
ಭಕ್ತಿ ಉಕ್ಕಿ ಶಕ್ತಿ ಸಂಚರಿಸಿದ ಅಸಂಖ್ಯಾತ ಶರಣರು
ಮುಕ್ತಿ ಹೊಂದಿರುವರು ಸುಳ್ಳಲ್ಲ ನೋಡಾ.

ಇಂತಪ್ಪ ಭಕ್ತಿ ಅಂಕುರಿಸಿದ ಶರಣರನು ನಮ್ಮಪ್ಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಆನಂದದಿಂದ ಮನದುಂಬಿ ಅಪ್ಪಿಕೊಳ್ಳುವನು ನೋಡಾ.

೧೨೭

ಭಕ್ತ, ಶ್ರೀ ಗುರುವಿನ ಮಾರ್ಗದರ್ಶನದಲ್ಲಿ
ಅಷ್ಟಾವರಣ ನಿಷ್ಠೆಯಿಂದ ಆಚರಿಸಿ ಮಾಹೇಶನಾಗಬಲ್ಲ.
ತ್ರಿಕಾಲ ಇಷ್ಟಲಿಂಗ ಪೂಜೆಯಲ್ಲಿದ್ದು ಪ್ರಾಣಲಿಂಗಿಯಾಗಬಲ್ಲ.
ತ್ರಿವಿಧ ದಾಸೋಹದಿಂದ ಪ್ರಸಾದಿಯಾಗಬಲ್ಲ.
ತನು ಮನ ಧನ ಸಮಾಜಕ್ಕೆ ಮುಡಿಪಾಗಿಟ್ಟು ಶರಣನಾಗಬಲ್ಲ.
ಸದ್ಭಕ್ತ ಗುರು ಲಿಂಗ ಜಂಗಮರ ಸೇವೆಗೆ
ಸಮರ್ಪಿತನಾಗಿ ಐಕ್ಯನಾಗಬಲ್ಲ.
ಇಂತು ಷಟ್ ಸ್ಥಲದೊಳು ವಿರಾಜಮಾನರಾದ ಕಲ್ಬುರ್ಗಿ
ದೊಡ್ಡಪ್ಪ ಅಪ್ಪನವರು ವಿಶ್ವದ ಶ್ರೇಷ್ಠ ದಾರ್ಶನಿಕ ಶರಣ
ನೋಡಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೨೮

ಭುವಿಯಲ್ಲಿ ಬಾನಲ್ಲಿ ನೀನೇ ವೀರಭದ್ರ.
ನಾಡಲ್ಲಿ ನುಡಿಯಲ್ಲಿ ನೀನೇ ಮಹಾರುದ್ರ.
ಅಲ್ಲಿ ಇಲ್ಲಿ ಎಲ್ಲೆಲ್ಲೂ ನೀನೇ ದೇವ.
ಭಾದ್ರಪದ ಮಾಸದ ಮೊದಲ ಮಂಗಳವಾರದಲಿ,
ಮಾನವೀಯ ಮೌಲ್ಯಗಳ ವರ್ಧಂತಿ ಇಲ್ಲಿ.
ಶರಣ ಗಣ ರುದ್ರಗಣ ಕರುಣೆಯ ಆಗರದಲ್ಲಿ,
ಮಾನವೀಯ ಮೌಲ್ಯಗಳ ವರ್ಧಂತಿ ಇಲ್ಲಿ.
ಶಕ್ತಿಸಂಚಾರ ಭಕ್ತಿ ಸಾಗರ ಭೋರ್ಗರೆಯುತಿಹುದಿಲ್ಲಿ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ

ನಿಮ್ಮ ಪ್ರಖರ ಪ್ರಜ್ವಲಿಪ ದಿವ್ಯ ಪಾದಂಗಳ ಪ್ರಭೆ ಕಂಡು
ನಿಬ್ಬೆರಗಾಗಿ ನಿಂತೆ ಓ ಎನ್ನ ಗುರುದೇವ.

೧೨೯

ಮಣ್ಣಿನ ಮಡಿಲಲ್ಲಿ ಮಾನವನ ಬದುಕು ಅಡಗಿಹುದು.
ಕಣ್ತೆರೆದು ನೋಡಿದರೆ ಸತ್ಯದ ಅರಿವಾಗುವುದು.
ಜನಿಸಿದ್ದು ಮಣ್ಣಿಂದ, ಬೆಳೆದಿದ್ದು ಮಣ್ಣಿಂದ
ಗಳಿಸಿದ್ದು ಮಣ್ಣಿಂದ, ಹೊಳೆದಿದ್ದು ಮಣ್ಣಿಂದ
ಅಂತ್ಯವು ತಣ್ಣಗೆ ಮಣ್ಣಲ್ಲಿ ಸೇರಿ ಮಾಯವಾಗುವುದು.
ಮಣ್ಣು ಮುಟ್ಟಲು ಹಿಂದೇಟು ಹಾಕುವವರಿಗೆ
ನೆಲೆಯಲ್ಲಿಹುದು?, ಬೆಲೆ ಎಲ್ಲಿಹುದು?
ಮಣ್ಣಿನ ಮಕ್ಕಳು ನಾವೆಂದು ಹೆಮ್ಮೆಪಡುವುದು ಶ್ರೇಷ್ಠ.
ಭೂದೇವಿಯ ತಾಳ್ಮೆಯ ಗುಣ ಅವಧರಿಸಿ ಬಾಳುವವರಿಗೆ
ಬಾಳು ಸುಗಮವೆಂದ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೩೦

ಮದ್ಯ ಮಾಂಸ ಸೇವಿಸಿ ಹಾದಿ
ಬೀದಿಯಲಿ ಬಿದ್ದು ಒದ್ದಾಡುವವರಯ್ಯ,
ಪರಧನ, ಪರಸ್ತ್ರೀಯರ ಆಶಿಸಿ
ಪರಪೀಡನೆಗೈದು ಪರಮಾತ್ಮನ ದೂಷಿಸವರಯ್ಯ,
ದಾನ ಧರ್ಮ ದಾಸೋಹಕ್ಕೆಳಸದೆ ಜನ ಮೋಜು
ಮಸ್ತಿ ಜೂಜಾಟದಲಿ ಧನ ವ್ಯಯಿಸುವರಯ್ಯ.
ಅಂತರಂಗದಲಿ ಅಸಹ್ಯ ವರ್ತನೆ ತುಂಬಿ ಆಡಂಬರದಿ,
ಅವಿಚಾರಿಗಳು ಪೂಜೆ ಪಾಠಗಳ ಮಾಡುವರಯ್ಯ,
ಇಂತಪ್ಪ ಜನ ನಮ್ಮ ಶ್ರೀ ವೀರಭದ್ರ ದೇವರ ಮೂರ್ತಿ

ಮನೆಯಲರಿಸಲು ಅದೆಂತು ಧೈರ್ಯ ತೋರುವರಯ್ಯ,
ಜಗಕೆ ಮಿಗಿಲಾದ ಕರುಣಾ ಸಾಗರ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ ಆರಾಧಿಸಲು
ನಿಷ್ಕಲ್ಮಶ ನಿರ್ಮಲ ಹೃದಯ,
ಮಡಿ ನುಡಿಗಳಪಪಶುಗಳಂತಾದಿರಲ್ಲಾ

೧೩೧

ಮಡಿಲಲ್ಲಿ ಮತ್ಸರ ತುಂಬಿ ಕಾಡು ಮೇಡು ಅಲೆದರೇನು ಫಲ?
ಗಿರಿ ಗಂವ್ಹರಗಳಲಿ ಸುತ್ತಾಡಿದರೇನು ಫಲ.?
ಹಳ್ಳಕೊಳ್ಳಗಳಲ್ಲಿ ಮುಳುಗೆದ್ದರೇನು ಫಲ?
ತೀರ್ಥಯಾತ್ರೆ ಕೈಗೊಂಡು ಕಂಡದೈವಕ್ಕೆ ಕೈ ಮುಗಿದರೇನು ಫಲ?
ಕುಟಿಲ ಮಾರ್ಗವ ತೊರೆದು ಪರೋಪಕಾರಕ್ಕೆ ಮನ ಮುಡುಪಾಗಿಟ್ಟು
ಜಗದೊಡೆಯ ಜಗದೋದ್ಧಾರಕ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ ಕರುಣದಿ
ಕಾಪಾಡುವುದು ಪರಮ ಸತ್ಯ ನೋಡಾ.

೧೩೨

ಮರ್ಕಟದಂತಿರುವ ಮನವ ಹಿಡಿದು ಕಟ್ಟುವುದು ಬಲುಕಷ್ಟ,
ಸತ್ಸಂಗದಲಿ ಜಡಿದು ನಿಲ್ಲಿಸಿದ ಮನ
ಆಸೆ ಆಮಿಷಗಳಿಗೆ ಬಾಯ್ದೆರೆದು
ಕ್ಷಣಕ್ಷಣಕ್ಕೂ ಟಣ್ಣನೆ ಜಿಗಿಯುವುದನು ಬಿಡುವುದೆ ಇಲ್ಲ.
ಎಡೆಬಿಡದೆ ಸತ್ಕಾರ್ಯದಲ್ಲಿ ಒಡನೆ ತ
ೊಡಗಿಸುವುದು ಕಷ್ಟ, ಬಲುಕಷ್ಟ.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ,
ನಿಮ್ಮ ಅಪ್ರತಿಮ ಪ್ರಖರ ಪ್ರಜ್ವಲಿಪ ಪಾದಪದ್ಮಂಗಳಡಿಗೆ
ಶಿರಬಾಗಿ ಬಂದೆ, ಉದ್ಧರಿಸು ತಂದೆ.

೧೩೩

ಮಂತ್ರಗಳು ಮಾನವನಿಗೆ ದಿವ್ಯಾಸ್ತ್ರಗಳಿದ್ದಂತೆ.
ದುಗುಡ ದುಮ್ಮಾನಕ್ಕೆ ಮದ್ದು ಇತ್ತಂತೆ.
ಏಕಾಗ್ರತೆಗೆ ತಾರಕ. ಕೆಟ್ಟ ತರಂಗಗಳಿಗೆ ಮಾರಕ.
ಮನಸ್ಸಿಗೆ ಶುಭ ಕಾರಕ. ದೇಹದ ಆರೋಗ್ಯಕ್ಕೆ ಪೂರಕ.
ನರಮಂಡಲಕ್ಕೆ ಚೈತನ್ಯದಾಯಕ,
ಓಂ ನಮಃ ಶಿವಾಯ ಇದು ಸಾರ್ವಕಾಲಿಕ.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶಂಗೆ ಸಂಪ್ರೀತಿ ಕಾರಕ

೧೩೪

ಮಾಡುವುದೆಲ್ಲವೂ ಧರ್ಮವಲ್ಲ. ಕಾಡುವುದೆಲ್ಲವೂ ಕರ್ಮವಲ್ಲ.
ಆಸೆಗಳೆಲ್ಲವೂ ಸ್ವಾರ್ಥವಲ್ಲ. ಭಾಷೆಗಳೆಲ್ಲವೂ ವ್ಯರ್ಥವಲ್ಲ.
ಸಮಯ ಸಂದರ್ಭಗಳನ್ನರಿತು ಕಷ್ಟದಲ್ಲೂ ನಿಷ್ಠೆಯಿಂದಲಿ
ನಿರ್ಧಾರ ತೆಗೆದುಕೊಳ್ಳುವದರಿಂದ ಫಲಾಫಲಗಳು
ಖಚಿತವೆಂದ ಎನ್ನೊಡೆಯ ಮಹಾದಾನಿ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶ

೧೩೫

ಮಾಂಡವ್ಯ ಪುರದರಸನಿಗೆ ಉದ್ದಂಡ
ದೋರ್ದಂಡ ಚನ್ನವೀರ ಗುರುಮೂರ್ತಿ.
ಕಲ್ಯಾಣದಿ ಅನುಭವ ಮಂಟಪದ ಶರಣರಿಗೆ
ಕ್ರಿಯಾಮೂರ್ತಿ ನಿರಾಭಾರಿ ನಿಷ್ಪಪಂಚಕ
ಮಹಾಜಂಗಮ ಪುಂಗವ, ಘನಮಠ ಶಿವಯೋಗಿ
ಅಂಗೈಯೊಳ್ ಇಷ್ಟಲಿಂಗದಲಿ ಸಂಭ್ರಮಿಸಿ
ಅಷ್ಟಾವರಣದಿ ಅಧಿಕನೆನಿಸಿದ ವರ ಲಿಂಗಮೂರ್ತಿ,

ಆರು ಸಾವಿರ ಜಂಗಮರೊಡಗೂಡಿ ರಂಗೋಲಿ
ಹುಡಿಯಲಿ ಗುರು ಲಿಂಗ ಜಂಗಮನಾದ ಕೋಟಿಸೂರ್ಯ
ಸಮಪ್ರಭೆಯುಳ್ಳ ಚೈತನ್ಯಮೂರ್ತಿ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ ಅಪ್ರತಿಮ
ಪ್ರಖರ ಪ್ರಜ್ವಲಿಪ ಪಾದಪದ್ಮಂಗಳೆನಗೆ ಶ್ರೀ ಕೈಲಾಸವಯ್ಯಾ.

೧೩೬

ರವಿ ಕಾಣದ್ದನ್ನು ಕವಿ ಕಾಣಬಲ್ಲ.
ಕವಿ ಕಂಡದ್ದನ್ನು ಕವಿತೆಯಾಗಿರಿಸಬಲ್ಲ.
ಬಾನಂಗಳದಲಿ ರವಿಯ ಪ್ರಕಾಶ.
ಜನಮಾನಸಕೆ ಕವಿಯ ಪ್ರಕಾಶ.
ವಿಶ್ವಕೆ ಬೆಳಕು ನೀಡುವ ರವಿಯಾದರೆ,
ನಶ್ವರದ ಭಾವುಕ ಜೀವಿಗಳಿಗೆ ನಿತ್ಯ ಬೆಳಕಾಗಿರುವ,
ಸತ್ಯಮನದ ಕವಿಯ ಜನ್ಮ ಸಾರ್ಥಕವೆಂದ
ಎನ್ನೊಡೆಯ ಸ್ವಯಂಪ್ರಕಾಶಿತ ತೇಜೋಮಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೩೭

ರುದ್ರಾ ಎಂದೊಡೆ ಭಯ ನಿವಾರಣೆಯಾಗುವುದು.
ಭದ್ರಾ ಎಂದೊಡೆ ಧೈರ್ಯ ತುಂಬಿ ಬರುವುದು.
ವೀರಭದ್ರಾ ಎಂದೊಡನೆ ವಿಜಯ ಪ್ರಾಪ್ತಿಯಾಗುವುದು.
ಅನ್ಯಾಯಕ್ಕೆ ಬಗ್ಗು ಬಡಿದು ನ್ಯಾಯಕ್ಕೆ
ಕೈ ಹಿಡಿಯುವನು ಶ್ರೀ ವೀರಭದ್ರ.
ನಿತ್ಯವೂ ಸತ್ಪಥದಲ್ಲಿರುವ ಸಜ್ಜನರಿಗೆ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ಕರುಣದಿ
ಕಾಪಾಡುವುದು ಇಂದಿಗೂ ಸತ್ಯ . ಎಂದೆಂದಿಗೂ ಸತ್ಯ

೧೩೮

ರೆಕ್ಕೆ ಇಲ್ಲದ ಹಕ್ಕಿ ನಭಕ್ಕೆ ನೆಗೆದಿತ್ತು.
ಸಿಕ್ಕ ಸಿಕ್ಕ ತಾಣದಲ್ಲಿ ಒಕ್ಕರಿಸಿತ್ತು.
ಸೊಕ್ಕಿನಿಂದ ಮೆರೆದು ಮಣ್ಣು ಮುಕ್ಕಿತ್ತು.
ದುಃಖ ಉಮ್ಮಳಿಸಿ ಬಿಕ್ಕಿತ್ತು.
ಠಕ್ಕತನಕೆ ತಕ್ಕ ಪಾಠ ಕಲಿತಿತ್ತು.
ಪ್ರಜ್ಞೆಯಲಿ ಪ್ರಾಯಶ್ಚಿತ್ತ ಬಯಸಿತ್ತು.
ಅರಿವು ಉಕ್ಕಿ ಪ್ರವಹಿಸಿದಾಗ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶನ
ಅದ್ವಿತೀಯ ಅನರ್ಘ್ಯ ಅಡಿದಾವರೆಗಳಲ್ಲಿ ಚಿರಶಾಂತಿ ಹೊಂದಿತ್ತು.

೧೩೯

ರೇಣುಕ ಪೀಠದ ಗೋತ್ರಪುರುಷ ಶ್ರೀ ವೀರಭದ್ರ.
ವೀರಶೈವ ಮೂಲ ಪುರುಷ ಶ್ರೀವೀರಭದ್ರ.
ಹಸಿರೇ ಉಸಿರೆಂದು ಕೃಷಿಕಾಯಕ ತೋರಿದ ಶ್ರೀವೀರಭದ್ರ,
ಸ್ವಾವಲಂಬಿ ಸದಾಚಾರ ಸನ್ನಡತೆಯುಳ್ಳ ಸದ್ಭಕ್ತರಿಗೆ
ಸನ್ಮಂಗಳವನ್ನೀವ ಮಹಾರುದ್ರ. ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಮೋ ನಮಃ.

೧೪೦

ಲಿಂಗದ ಮುಡಿಯನರಸುತ, ಅಜನಡೆದ ಹಂಸೆಯಾಗಿ.
ಲಿಂಗದ ಅಡಿಯ ಹುಡುಕುತ,
ಹರಿ ಹೊರಟ ವರಾಹನಾಗಿ.
ಆದಿ ಅಂತ್ಯರಹಿತ ಲಿಂಗದ ಮುಡಿಯ
ಕಂಡೆನೆಂದ ಬ್ರಹ್ಮ ಶಾಪಕ್ಕೆ ಗುರಿಯಾದ.
ಶಿವನ ಅಡಿಯ ಕಾಣಲಸಮರ್ಥನೆಂದ

ವಿಷ್ಣು, ಸತ್ಯನಾರಾಯಣನಾದ.
ಅಂಗಮಧ್ಯೆ ಜಗತ್ಸರ್ವಂ, ಸತ್ಯಂ ಶಿವಂ ಸುಂದರಂ.
ಅದು ಕಾರಣ ವಿಚಾರದಲ್ಲಿ ವೀರನಾಗಿ,
ಆಚಾರದಲಿ ಶೈವನಾಗಿ, ಇಷ್ಟಲಿಂಗ ಧರಿಸಿ
ಮಾನವ ಧರ್ಮಕೆ ಜಯವಾಗಲಿ ಎನ್ನುವ ಸತ್ಯ ಶುದ್ಧ ವೀರಶೈವಂಗೆ
ಶರಣೆಂಬೆನಯ್ಯಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪೧

ವಸ್ತ್ರಗಳ ಶುಚಿಗೊಳಿಸಿ ಉಡಲು ಅಣಿಮಾಡುವುದು ರಜಕ.
ತನುವಿಗಾದ ನೋವು ನಿವಾರಿಸಿ ಕಾಯಕಕ್ಕೆ
ಅನುಕೂಲಮಾಡುವುದು ತಜ್ಞ ವೈದ್ಯ.
ಮನಕ್ಕೆ ಜ್ಞಾನವನುಣಬಡಿಸಿ ಶಿವನ ಸಾಂಗತ್ಯಕ್ಕೆ
ಅಣಿಗೊಳಿಸುವುದು ಸದ್ಗುರು.
ಅವರವರ ಕಾಯಕಕ್ಕೆ ಅವರವರು
ಶ್ರೇಷ್ಠರೆಂಬುದು ನಿಜವಾದರೂ
ಶಿವ ಸಾಯುಜ್ಯದ ಪಥ ತೋರುವ
ಸದ್ಗುರುವಿನ ಪಾತ್ರ ಹಿರಿದಾದುದೆಂದ
ಎನ್ನೊಡೆಯ ಶಿವ ಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪೨

ವಿಶ್ವವೇ ರಂಗಭೂಮಿ. ಗಿರಿ ಗಂಪ್ವರ, ಹಳ್ಳಕೊಳ್ಳ,
ಸೂರ್ಯ ಚಂದ್ರ ನಕ್ಷತ್ರಗಳೇ ರಂಗಸಜ್ಜಿಕೆಗಳಯ್ಯಾ.
ನಶ್ವರ ದೇಹಿಗಳೆಲ್ಲ ಪಾತ್ರಧಾರಿಗಳಯ್ಯಾ.
ಅಳುವ, ನಗುವ, ಸೋಲುವ, ಗೆಲುವ, ಏಳುವ,
ಬೀಳುವ, ಕಾಡುವ, ಬೇಡುವ, ಹುಟ್ಟುವ, ಸಾಯುವ
ಬಗೆ ಬಗೆಯ ನಟನೆಗೆ ನಿಲ್ಲಿಸಿ ಆಡಿಸಿ

ಕುಣಿಸುವ ಸೂತ್ರಧಾರ ನೀನಯ್ಯಾ.
ಎನ್ನೊಡೆಯ ಶಿವ ಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ನಿಮ್ಮ ಕೈಯೊಳಗಿರುವ ಬೊಂಬೆ ನಾನಯ್ಯ..

೧೪೩

ವಿಶ್ವದ ಎಲ್ಲೆಡೆಯೂ ಶ್ರೀ ವೀರಭದ್ರ
ದೇವನ ದಿವ್ಯ ಚರಿತೆ ನೋಡಯ್ಯ.
ಅರಿವ ಮನಕೆ ತೆರೆದ ಹೃದಯಕೆ ನಮ್ಮ
ಶ್ರೀ ವೀರಭದ್ರ ದೇವರ ಗುರುತು
ದೊರೆಯುವುದು ನೋಡಾ.
ಜಗಕೆ ಮಿಗಿಲಾದ ದೇವ
ಏಕೈಕ ಮಹಾಜಂಗಮ ಪುಂಗವ
ಶ್ರೀಗುರು ಚನ್ನವೀರ ನೋಡಾ.
ಸತ್ಯ ದರ್ಶನ ನಿತ್ಯ ನಿರುತ
ಧ್ಯಾನ ಮಾಡಲು ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ
ಭವಬಂಧನ ಕಳೆಯುವನು ನೋಡಾ

೧೪೪

ವಿಭೂತಿ ಧರಿಸಿದೊಡೆ ಸಹಾನುಭೂತಿ ಮೈದುಂಬಿ ಬರಬೇಕು.
ರುದ್ರಾಕ್ಷಿ ಹಾಕಿದೊಡೆ ನೀತಿ ಸುಭದ್ರಗೊಳ್ಳಬೇಕು.
ಲಿಂಗ ಆಯತವಾದೊಡೆ,
ಅಂಗಾಂಗ ಪರಿ ಶುದ್ಧಗೊಳ್ಳಬೇಕು.
ಪೂಜೆಗೆ ಸಜ್ಜಾಗುವೆಡೆ ಗುರು ಲಿಂಗ
ಜಂಗಮರಲ್ಲಿ ಶ್ರದ್ಧೆ ಮಾರ್ದನಿಸಬೇಕು.
ಇಂತು ನಿತ್ಯ ಲಿಂಗಾರ್ಚನೆಯ ಪರಿ ಕಂಡು ಎನ್ನೊಡೆಯ

ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಸುಪ್ರಸನ್ನನಾಗಬೇಕು.

೧೪೫

ವಿಕಾರಗಳಳಸಿ, ವೀರತ್ವ ಬೆಳಗಿಸಿ,
ಸದ್ಭಕ್ತರನ್ನಾಗಿಸುವುದು ವಿಭೂತಿ.
ಭೂಮಂಡಲದಿ ಬಾಧೆಗಳ ಬಿಡಿಸಿ
ಮಾಹೇಶ್ವರನಾಗಿಸುವುದು ವಿಭೂತಿ.
ತಿಮಿರಾಂಧಕಾರವ ನಿವಾರಿಸಿ
ತ್ರಿಕರಣ ಶುದ್ಧಿಗೊಳಸುವುದು ವಿಭೂತಿ.
ಅಷ್ಟಾವರಣದಿ ಅನವರತ ಮನಾವೃತಗೊಳಸಿ
ಷಟ್ ಸ್ಥಲಕ್ಕೇರಲು ಸಾಕ್ಷಿಭೂತಿ ಶ್ರೀ ವಿಭೂತಿ.
ಇಂತಪ್ಪ ವಿಭೂತಿ ಧರಿಸಿ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ದಿವ್ಯ ಪಾದಪದ್ಮಂಗಳಲಿ ಬೆಳಗುವ ಭಾಗ್ಯ ಪಡೆಯಿರಯ್ಯಾ,

೧೪೬

ವಿಶ್ವಪೂಜ್ಯ ವೀರಭದ್ರ, ವಿಶ್ವಮಾನ್ಯ
ವೀರಶೈವ ಇದು ಸತ್ಯ ನೋಡಯ್ಯಾ.
ಪರಮ ಆತ್ಮ ಲಿಂಗರೂಪ, ನಿರುತ ಭಜಿಪ,
ಸರಳ ಜೀವನ ಕರುಣಾ ಭಾವನೆ ನಮ್ಮ ತತ್ವ ಕಾಣಯ್ಯಾ,
ಕಾಯಕದ ಬಲ ಬದುಕುವ ಛಲ, ಶಿವಶರಣರ
ನಡೆ ಸ್ಫೂರ್ತಿಯ ಸೆಲೆ ನೋಡಯ್ಯಾ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿಮ್ಮ ಧರ್ಮದಿ
ಸತ್ಪಥದಲ್ಲಿ ಸಾಗುವಾ ಸದ್ಭಕ್ತರು ನಿತ್ಯ ತೃಪ್ತರಯ್ಯಾ.
ಅವರೊಂದಿಗೆ ಇರುವ ಬಾಳು ನನ್ನದಯ್ಯಾ.

೧೪೭

ವಿಕೃತ ಮನಸ್ಸಿನ ಫಲವಿದು ದುರಾಸೆಯ ದಾಹ.
ಕುಕೃತ್ಯಗಳ ಕೂಟ ಕೊನೆಗೊಳ್ಳದ ಜಾಲ.
ಪರೋಪಕಾರದ ಪಥದಲ್ಲಿ ನಡೆದೊಡೆ ಪುಣ್ಯ.
ಪರ ಪರಪೀಡನೆಯದುವೇ ಪಾಪ,
ಸುಕೃತ ಪುಣ್ಯದ ಫಲವಿದು ಮಾನುಷ ಜನ್ಮ.
ಹಾಳು ಮಾಡದೇ ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ಭಜಿಸಿ ಜೀವನ
ಸಾರ್ಥಕ ಮಾಡಿಕೋ ಎಲೆ ಮನವೇ.

೧೪೮

ವೀರಶೈವ ಲಿಂಗಾಯತ ಧರ್ಮ ಜಾತಿ
ಮತ ಪಂಥಗಳ ಕಿತ್ತೆಸೆದ ಧರ್ಮವಯ್ಯಾ.
ಧರ್ಮವೆಂದರೆ ನೀತಿಯ ನೆಲೆ, ಆಚಾರದ ಬಲೆ, ವಿಚಾರದ ಸೆಲೆ.
ಸ್ತ್ರೀ ಪುರುಷರಿಗೆ ಸಮಾನತೆ ನೀಡಿ ಕಾಯಕದ
ಮಹತ್ವ ಅರುಹಿದ ಮಾನವ ಧರ್ಮವಯ್ಯಾ.
ಸಾತ್ವಿಕರಾಗಿ ಸಕಲರಿಗೂ ಲೇಸನೇ
ಬಯಸಿದ ಶರಣ ಧರ್ಮವಯ್ಯಾ.
ಎನ್ನೊಡೆಯ ಜಗದ್ರಕ್ಷಕ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ
ನೊಲಿಯುವುದು ಭಕ್ತಿ ಭಾವಕ್ಕೆ, ಜಾತಿ ಮತಗಳಿಗೆ ಅಲ್ಲ.

೧೪೯

ವೃಕ್ಷಗಳಲ್ಲಿ ಆಸರೆಯ ಚೆಲುವು .
ಪಕ್ಷಿಗಳಲ್ಲಿ ಅಕ್ಕರತೆಯ ಒಲವು.
ನಕ್ಷತ್ರಗಳಲ್ಲಿ ಮಂದಹಾಸದ ಗೆಲುವು.

ಪ್ರಾಣಿಗಳಲ್ಲಿ ಸ್ವಾವಲಂಬನೆಯ ಬದುಕು.
ಹೀಗೆ ಸಾಕ್ಷಾತ್ ಜಗದ ಜೀವಿಗಳಿಂದ ಪಾಠ ಕಲಿತು
ಪರಿಪೂರ್ಣ ಮಾನವನಾಗಬೇಕೆಂದ ಎನ್ನೊಡೆಯ
ಅಕ್ಷಯಾತ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೫೦

ಶರಣ ಸತಿ, ಲಿಂಗಪತಿ ಅಂಗದ ಮೇಲೆ
ಲಿಂಗವಿರುವ ಮುತ್ತೈದೆಯರು .
ಸತ್ಯ ಶುದ್ಧ ಕಾಯಕ ನಿತ್ಯ ಆಚರಿಸುತ್ತಾ
ಸಕಲರಿಗೂ ಲೇಸನೇ ಬಯಸಬೇಕಯ್ಯ
ಅದು ಕಾರಣ ವೀರಶೈವ ಲಿಂಗಾಯತ
ಸರ್ವಮಾನ್ಯ ಮಂಗಲಮೂರ್ತಿಯಾಗಿರ್ಪನಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೧೫೧

ಶಿವ ಹಾಲಾಹಲ ಸೇವಿಸಿ ಜಗವ ಉದ್ಧರಿಸಿದ.
ಭಕ್ತನಿಗಾಗಿ ಆತ್ಮಲಿಂಗವನಿತ್ತ.
ಶಿವನಂಶವೇ ಈ ಜೀವಿಯಲ್ಲವೇ?
ಮನುಜ ಸ್ವಾರ್ಥಿಯಾಗದೇ
ಸಮಾಜದ ಕಲ್ಯಾಣ ಬಯಸುವುದು ,
ದೀನ ದಲಿತರಿಗೆ ಸ್ಪಂದಿಸುವ ಮನ
ನಿನ್ನದಾದಲ್ಲಿ ಆತ್ಮಶುದ್ಧಿಯಾಗುವುದು.
ಇದುವೇ ಆತ್ಮ ಪರಮಾತ್ಮನ ಬೆರೆಯುವ
ಪರಿಯೆಂದ ಎನ್ನೊಡೆಯ
ಜಗದ್ರಕ್ಷಕ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫೨

ಶಿವನಾಣತಿ ಶಿರದಲ್ಲಿ ಹೊತ್ತು ಧರೆಗಿಳಿದ ಶ್ರೀ ವೀರೇಶ,
ಶಿವತತ್ವವನು ಭುವಿಯಲ್ಲಿ ಬಿತ್ತರಿಸಿದ ಶ್ರೀಗುರು ಚನ್ನವೀರೇಶ.
ಬಿಬ್ಬೆಬಾಚಯ್ಯನ ಭಕ್ತಿ ಗೊಲಿದು
ಗಬ್ಬೂರಿಗೆ ಬಂದ ಜಗದೀಶ,
ಆರುಸಹಸ್ರ ಜಂಗಮಾರ್ಯರೊಂದಿಗೆ ರಂಗೋಲಿ ಹುಡಿಯಲ್ಲಿ
ಅಂತರ್ಗತನಾಗಿ ಬಾವಿಗಿಳಿದು ಏಕಶಕ್ತಿಯಾದ ವೀರಭದ್ರೇಶ.
ಆನಂದ ವೀರಯ್ಯರೊಂದಿಗೆ ಸೂಗೂರಿಗೆ
ಬಂದು ಭಕ್ತರ ಪೊರೆಯುತ್ತಿರುವ
ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ,
ಸಾಕಾರ ಸ್ವರೂಪ ನಿರಾಕಾರ ನಿರ್ಗುಣ
ನಿಜ ಜಂಗಮ ಪುಂಗವನಾಗಿ
ವಿಜೃಂಭಿಸುತ್ತಿರುವ ನಿಜದೈವ ನಿಮ್ಮ ಪಾದಾರವಿಂದಗಳ
ಪಿಡಿದು ನಮೋ ನಮೋ ಎನ್ನುತಿರ್ದೆನಯ್ಯಾ,

೧೫೩

ಶ್ರೀಗುರು ಕರುಣಿಸಿದ ಇಷ್ಟಲಿಂಗ ಮಾಂಸಪಿಂಡವ
ಕಳೆದು ಮಂತ್ರಪಿಂಡವಾಗುವ ಸುಯೋಗ.
ಅಂಗದ ಮೇಲೆ ಸದಾಕಾಲವೂ ಲಿಂಗ ಧರಿಸುವುದು ಭಾಗ್ಯ.
ಅಂಗೈಯಲ್ಲಿ ಇಷ್ಟಲಿಂಗವನಿರಿಸಿ
ಪ್ರತಿನಿತ್ಯ ಅರ್ಚನೆ ಮಾಡುವುದು ಸೌಭಾಗ್ಯ.
ಇಷ್ಟಲಿಂಗದಲಿ ಸಂಗಯ್ಯನ ಕಾಣುವುದು ಮಹಾಭಾಗ್ಯ.
ಆ ಸಂಗಯ್ಯನೊಳು ಬೆರೆತು ಬೆಳಗುತ್ತಿರುವ ಅಸಂಖ್ಯಾತ
ಶಿವ ಶರಣರ ಮಾರ್ಗದಲಿ ಮುನ್ನಡೆಯಬೇಕೆಂದ,

ಎನ್ನೊಡೆಯ ಪರಮ ಜಗದ್ಗುರು ಜಂಗಮ ಪುಂಗವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ನಿಮ್ಮ ಪ್ರಜ್ವಲ ಪಾದಪದ್ಮಂಗಳಿಗೆ ನಮೋ ನಮಃ

೧೫೪

ಶ್ರೀಗುರು ಕರುಣಿಸಿದ ಇಷ್ಟ ಲಿಂಗವ ಕರದಲ್ಲಿರಿಸಿ
ಷೋಡಶೋಪಚಾರ ವರಪೂಜೆ ಮಾಡಿರಯ್ಯಾ,
ಅಂಗಾಂಗಗಳೆಲ್ಲ ಪರಿಶುದ್ಧವಾಗಿ, ಲಿಂಗಾಂಗ ಯೋಗದಲ್ಲಿ
ಮನ ತನ್ಮಯಗೊಂಡು ಸಂಗ ನಿಸ್ಸಂಗಗೊಳ್ಳಬೇಕಯ್ಯಾ.
ನೀ ಪಠಿಸುವ ಪಂಚಾಕ್ಷರಿ ಮಹಾಮಂತ್ರ
ನರನಾಡಿಗಳಲ್ಲಿ ಮಾರ್ದನಿಸಬೇಕಯ್ಯಾ.
ಗುರು ಲಿಂಗ ಜಂಗಮ ತ್ರಿಮೂರ್ತಿಯಾಗಿರ್ಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ಆ ಇಷ್ಟಲಿಂಗದ ಪ್ರಭೆಯಲ್ಲಿ
ನಿಸ್ಸಂಶಯವಾಗಿ ಸಂಭ್ರಮಿಸುವನಯ್ಯಾ.
ಆಗ ಜನ್ಮ ಸಾರ್ಥಕವಾಗುವದಯ್ಯಾ,

೧೫೫

ಸತ್ಯದ ದಾರಿಯಲ್ಲಿ ಸಾವಿರ ಮುಳ್ಳುಗಳುಂಟು.
ನ್ಯಾಯದೇವತೆಗೆ ನೋಡಲಾಗದಂತೆ ಕಣ್ಣುಕಟ್ಟಿದ್ದುಂಟು.
ನಿರ್ಭಯದಿ ಧರ್ಮ ಮಾರ್ಗದಲ್ಲಿ
ಕ್ರಮಿಸುವಂಗೆ ಆತ್ಮಬಲವುಂಟು.
ಎನ್ನೊಡೆಯ ಜಗದಾದಿ ಜಗದ್ಗುರು ಶಿವಶಕ್ತಿ ಪ್ರಿಯ ಶ್ರೀ
ದೇವಸೂಗೂರ ವೀರೇಶನ ಕೃಪೆ ಜೊತೆಯಾಗಿರುವಾಗ
ಯಾವ ಕ್ಷುದ್ರ ಶಕ್ತಿಗಳಾಟ ಏನು ತಾನೇ ಮಾಡಲುಂಟು?
ಧರ್ಮದ ತೇಜದಿಂದ ಸತ್ಯಕ್ಕೆ ಜಯವುಂಟು.

೧೫೬

ಸತ್ಯವನು ನಂಬುವುದೇ ಭಕ್ತಿಯ ಚಿಂತನ.
ಸತ್ಯವನು ಅರಿಯುವುದೇ ಶಕ್ತಿಯ ಸಮ್ಮಾನ.
ಸತ್ಪಥದಲ್ಲಿ ಸಾಗುವುದೇ ಮುಕ್ತಿಗೆ ಸಾಧನ.
ಸತ್ಯಶುದ್ಧ ಕಾಯಕದೋಳಿರ್ದ ಶರಣ ಭಕ್ತಿಯ
ಶಕ್ತಿಯಿಂದ ಮುಕ್ತಿ ಪಡೆಯುವುದು ಖಚಿತವೆಂದ
ಎನ್ನೊಡೆಯ ಸತ್ಯಾತ್ಮ ಸರ್ವಜ್ಞ ಸ್ವಯಂಭೂ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫೭

ಸತಿಪತಿಯರ ಸಲ್ಲಾಪದ ಸಲ್ಲೀಲೆಯು
ಸಮೃದ್ಧಿಯ ಸಂಕೇತವಯ್ಯಾ.
ಅನುರಾಗ ಅರಳಿದ ಅನುಭಾವದ ಅಮೃತ ಸಿಂಚನವಯ್ಯಾ,
ಪರಮ ಪತಿವ್ರತೆಯ ಪ್ರಗಾಢ ಪ್ರೀತಿ
ಪಾವನ ಪರಕಾಯ ಪ್ರವೇಶದಂತಯ್ಯಾ,
ಶರಣ ಸತಿ ಲಿಂಗ ಪತಿ ಎಂದೊಡೆ ಅಂಗಲಿಂಗ ಸಾಮರಸ್ಯದ
ಅನುಭವಾನುಭೂತಿ ಪೂಜೆಯಾಗಿ ಕಂಗೊಳಿಸಬೇಕಯ್ಯಾ.
ಎನ್ನೊಡೆಯ ಅಶುತೋಷ ಅನಘಲಿಂಗ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶ ಮೆಚ್ಚಿ ಹರಸಬೇಕಯ್ಯಾ,

೧೫೮

ಸದಾ ಭಸ್ಮ ಧರಿಸುತಿರ್ದೊಡೆ ಧಹಿಸುವವು ಪಾಪಂಗಳು
ರುದ್ರಾಕ್ಷಿ ಧರಿಸುತಿರ್ದೊಡೆ ಸದೃಢಗೊಳ್ಳುವುದು ಈ ಕಾಯ
ಮಂತ್ರ ಪಠಣ ಗೈಯುತಿರ್ದೊಡೆ ಮುಕ್ತಿಪಥಕೆ ಸಾಧನವಹುದು
ಜಾತಿ-ಮತ ಭೇದ-ಭಾವವಿಲ್ಲದೆ ಮಾನವ ಧರ್ಮಕ್ಕೆ ಜಯವಾಗಲಿ,

ಧರ್ಮದಿಂದಲೇ ವಿಶ್ವಕ್ಕೆ ಶಾಂತಿ. ಇದು ನಿತ್ಯ ಸತ್ಯ ನುಡಿಯು
ಸದಾಚಾರದಿಂದ ಭಸ್ಮ, ರುದ್ರಾಕ್ಷಿ ಧರಿಸಿ
ಪಂಚಾಕ್ಷರಿ ಮಹಾಮಂತ್ರ ಜಪಿಸುವವರಿಗೆ
ಇದು ನಿತ್ಯ ಸತ್ಯ ನುಡಿಯು ಸಾರ್ಥಕವೆನಿಸಬೇಕಯ್ಯ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಕರುಣೆ ಸದಾ ಇರ್ಪದು ನೋಡಯ್ಯಾ

೧೫೯

ಸದ್ಗುರುವಿನಿಂದ ಲಿಂಗದೀಕ್ಷೆಯನ್ನು ಪಡೆದು
ನಿಷ್ಠೆಯಿಂದ ಇಷ್ಟಲಿಂಗವ ಧರಿಸಿ
ಅಷ್ಟಾವರಣಗಳೇ ಅಂಗವಾಗಿ,
ಲಿಂಗವೇ ಪ್ರಾಣವಾಗಿ, ಷಟ್ಥಲದೋಳು
ಐಕ್ಯನಾಗಬಲ್ಲ ಮಾರ್ಗ ಅನುಕರಿಸುವವರೇ ವೀರಶೈವರು.
ಜೀವ ಶಿವನೋಳು ಐಕ್ಯ ಹೊಂದುವ
ಮಾರ್ಗ ತೋರುವ ಪರಿ ಜಗದೋಳಿದು
ಶ್ರೇಷ್ಠ ಧರ್ಮವೆಂದ ಎನ್ನೊಡೆಯ ಜಗದಾದಿ ಜಗದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೬೦

ಸತ್ಯವನು ನಂಬುವುದೇ ಭಕ್ತಿಯ ಚಿಂತನ.
ಸತ್ಯವನು ಅರಿಯುವುದೇ ಶಕ್ತಿಯ ಸಮ್ಮಾನ,
ಸತ್ಪಥದಲ್ಲಿ ಸಾಗುವುದೇ ಮುಕ್ತಿಗೆ ಸಾಧನ.
ಸತ್ಯಶುದ್ಧ ಕಾಯಕದೋಳಿರ್ದ ಶರಣ ಭಕ್ತಿಯ
ಶಕ್ತಿಯಿಂದ ಮುಕ್ತಿ ಪಡೆಯುವುದು ಖಚಿತವೆಂದ
ಎನ್ನೊಡೆಯ ಸತ್ಯಾತ್ಮ ಸರ್ವಜ್ಞ ಸ್ವಯಂಭೂ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೬೧

ಸತ್ಯ ಯಾವುದು? ಮಿಥ್ಯೆಯಾವುದು?
ಕಣ್ಣಿಗೆ ಕಾಣುವುದು ಭ್ರಾಂತಿಯ ಲೋಕ.
ಕಣ್ಣಿಗೆ ಕಾಣದಿರುವುದು ಶಾಂತಿಯ ಲೋಕ.
ಒಣಭ್ರಾಂತಿಯ ನೆಚ್ಚಿ ಸ್ವಚ್ಛ ಮನ ಘಾಸಿಗೊಳ್ಳದಿರಲಿ.
ಅರಿವಿನಾಳದಲಿಳಿದು, ಸತ್ಯದ ಬೇರನು ಹಿಡಿದು,
ನಿತ್ಯ ಸತ್ಯವ ತಿಳಿ ಮನವೇ, ಸತ್ ಚಿತ್ ಆನಂದಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ದಿವ್ಯ ಪಾದಪದ್ಮಂಗಳ ಪಿಡಿದು ಶಾಂತಿ ಪಡೆ ಮನವೇ.
ಅದುವೇ ಮುಕ್ತಿಗೆ ಸಾಧನೆ ನಿನಗೆ.

೧೬೨

ಸಾಕಾರ ರೂಪದಲಿ ಗುರುವಾಗಿ ಬಂದ ಶ್ರೀ ವೀರೇಶ.
ನಿರಾಕಾರ ಲಿಂಗವಾಗಿ ಅಂಗೈಯಲ್ಲಿ ನೆಲೆನಿಂತ ಜಗದೀಶ.
ಜಗದ ಜಡತ್ವವ ಕಳೆಯಲು ಜಂಗಮ
ಪುಂಗವನಾದ ಶ್ರೀ ಚನ್ನವೀರೇಶ,
ಗುರು ಲಿಂಗ ಜಂಗಮ ಏಕತ್ವ ವಿರಾಟ್ ರೂಪವೇ,
ಎನ್ನೊಡೆಯ ಘನಮಹಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ನಿಜದೈವ ಕಾಣಿರೋ.
ಪ್ರಖರ ಪ್ರಜ್ವಲಿಪ ಪ್ರಚ್ಛನ್ನ ಪಾದಂಗಳಂ
ಪಿಡಿದು ನಿಜ ಮುಕ್ತಿ ಪಡೆಯಿರೋ

೧೬೩

ಸಂಸ್ಕೃತಿ ಆಚಾರ ಬಿಂಬಿಸುವುದಯ್ಯಾ.
ಆಚಾರ ಕೈಕೊಳ್ಳುವ ಕರ್ಮದ ಕ್ರಮ ಬಿಂಬಿಸುವುದಯ್ಯಾ.

ವಿಚಾರ ನಡೆಯುವ ರೀತಿ ನೀತಿಗಳ ಬಿಂಬಿಸುವುದಯ್ಯಾ.
ಹಬ್ಬ ಆಚರಣೆಗಳು ಸ್ನೇಹ ಸೌಹಾರ್ದತೆ
ಪ್ರತಿಬಿಂಬಿಸುವ ಅಪೂರ್ವ ಸೇತುವೆಗಳಯ್ಯಾ.
ಮಾನವೀಯ ಮೌಲ್ಯಗಳ ಮಜಲುಗಳೇ ನಮ್ಮ
ಸಂಸ್ಕೃತಿ, ಇಂತಪ್ಪ ಸಂಸ್ಕೃತಿ ನಮ್ಮದೆಂಬ
ಅಭಿಮಾನ ದಿಂದ ಕ್ರಮಿಸುವ ಕ್ರಮವೇ ಸಂಕ್ರಾಂತಿ ಎಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದಸಾರ್ಥಕವಾಗುವದಯ್ಯ

೧೬೪

ಸುಖ ಬಯಸುವ ಪರಿ ಎಂತು ನೋಡಾ.
ದೇಹದ ಬಯಕೆ ತೀರಿಸಿಕೊಳ್ಳುವುದೇ,?
ಆಸೆಗಳು ಈಡೇರಿಸಲು ಹೆಣಗುವುದೇ, ?
ಹುಚ್ಚು ಮನಕೆ ತಕ್ಕಂತೆ ತಾಳ ಹಾಕುವುದೇ, ?
ಪ್ರಪಂಚದಲ್ಲಿ ಕೊಂಚವೂ
ಕಡಿಮೆಯಾಗದಂತಿರುವುದೇ,?
ಆಸೆಯೇ ದುಃಖಕೆ ಮೂಲವೆಂಬುದು ತಿಳಿ ಮನವೇ.
ಬಗೆಬಗೆಯ ಆಸೆಗಳಿಗೆ ಕೊನೆಯಿಲ್ಲ.
ದೇಹ ಇರುವವರೆಗೆ ದೇಹಿಯಾಗಿರದೆ,
ಜೀವಾತ್ಮನ ಅರಿತು ಆತ್ಮಶುದ್ಧಿಗಾಗಿ ಅನವರತ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ
ಭಜಿಸು ಆಸೆಯನಳಿದು ಸ್ಥಿರಮುಕ್ತಿ ಬಯಸು.
ಶಾಶ್ವತ ಸುಖವಿಹುದಲ್ಲಿ.

೧೬೫

ಸುಖ ನೀನಿತ್ತ ಭಿಕ್ಷೆ. ದುಃಖ ನೀನಿತ್ತ ಪರೀಕ್ಷೆ ಎನುತಿರ್ದೆನಯ್ಯಾ.
ನೀನಿತ್ತ ಭಿಕ್ಷೆಯನುಂಡು ಅನ್ಯರ

ಹೊಗಳುವ ಕುನ್ನಿ ನಾನಾಗಲಾರೆನಯ್ಯಾ.
ನಿನ್ನ ನಾಮದ ಸುರಕ್ಷೆಯಲ್ಲಿ ಬರುವ ಪರೀಕ್ಷೆಗಳ ಜಯಿಸುವೆನೆಂಬ
ಆತ್ಮವಿಶ್ವಾಸ ನನ್ನದಯ್ಯಾ ನಕ್ಷತ್ರಗಳ ಪುಂಜದಲಿ ಎನ್ನೊಡೆಯ
ಕೋಟಿಸೂರ್ಯ ಸಮಪ್ರಭೆಯುಳ್ಳ ಅಸಮಾಕ್ಷ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಕ್ಷಯಪೂರ್ಣ ರಕ್ಷೆಯಲಿ ನಿಶ್ಚಿಂತೆಯಲಿರ್ಪೆನಯ್ಯಾ.

೧೬೬

ಸುವರ್ಣದ ಬೆಲೆ ಕಬ್ಬಿಣಕೆ ಹೋಲಿಸುವುದುಂಟೇ?.
ಸಾತ್ವಿಕದ ಬೆಲೆ ತಾಮಸಕೆ ಉಪಮಿಸಲುಂಟೇ?
ಸರಳ ಬದುಕಿನ ಬೆಲೆ ಆಡಂಬರದ ಬದುಕಿಗುಂಟೇ ?
ತಾತ್ವಿಕ ಚಿಂತನೆ ಬದುಕಿಗೆ ಶಾಶ್ವತ,
ಭಕ್ತಿಯು ನೆಲೆಗಟ್ಟು ಮುಕ್ತಿಗೆ ನಿಶ್ಚಿತ. ಅದುಕಾರಣ
ಶುದ್ಧ ಮನದಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ದಿವ್ಯ ಪಾದಂಗಳ ಭಜಿಸುತ್ತ ನಮಿಸುತ್ತ
ನಿಶ್ಚಿಂತನಾಗಿರ್ಪುದು ಮನವೇ.

೧೬೭

ಸುಡು ಬಿಸಿಲಲಿ ದುಡಿಯುವರಿರಲಿ,
ಕಡು ಬಡತನದಲಿ ಬೇಯುತಲಿರಲಿ.
ಮೃಡನ ಅಡಿಗಡಿಗೆ ಸ್ಮರಿಸುತ ಕಾಯಕ
ಮಾಡುವ ಸತ್ಯಶರಣಂಗೆ ಮೈಲಿಗೆ ಎಲ್ಲಿಯದೋ?
ತನುವಿಂಗೆ ಸ್ನಾನ, ಮನಕೆ ಶಿವಧ್ಯಾನ, ಧನಕೆ
ದಾಸೋಹ ಭಾವವಿರುವಾಗ ಮೈಲಿಗೆ ಎಲ್ಲಿಯದೋ?
ನೀರು ಕಂಡಲ್ಲಿ ಮುಳುಗಿ, ಗುಡಿಯ ಕಂಡಲ್ಲಿ ಸುತ್ತಿ,
ಭಂಡತನದಿ ದುಡ್ಡು ಗಳಿಸುವ

ಸಿರಿವಂತರ ಮಡಿವಂತಿಕೆ ಎಲ್ಲಿಯದೋ?
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಜಾತಿ ಮತ ನೋಡುವವನಲ್ಲ,
ಆಡಂಬರದ ಡಾಂಭಿಕರ ಮೆಚ್ಚುವವನಲ್ಲ.

೧೩೮

ಹರನ ಜಟೆಯಿಂದ ಉದಯಿಸಿದ ರುದ್ರ.
ಭರದಿ ದಕ್ಷನ ಸಂಹರಿಸಿದ ಭದ್ರ.
ಪ್ರಸೂತಾದೇವಿ ಬೇಡಿಕೆ ಈಡೇರಿಸಿದ ಕರುಣಾಸಮುದ್ರ.
ಕಣ್ಣಡಿಕ ಮೂಲಪುರುಷ ಶ್ರೀ ವೀರಭದ್ರ.
ಕಲ್ಯಾಣದ ಶರಣರಿಗೆ ಕ್ರಿಯಾಮೂರ್ತಿ
ಜಂಗಮರಾಗಿ ಕಂಗೊಳಸಿದ ಶ್ರೀ ಚನ್ನವೀರ ಗುರು.
ದುಷ್ಟ ಸಂಹಾರಕ ಶಿಷ್ಟರ ಪರಿಪಾಲಕ,
ಈತನೇ ಎನ್ನೊಡೆಯ ಪರಮ ಪ್ರಚ್ಛನ್ನ ಪ್ರಣವ ಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನೋಡಿರೋ..

೧೩೯

ಹರ ಗುರು ಚರಮೂರ್ತಿಗಳು
ಪರಮಾತ್ಮನ ಪ್ರತಿರೂಪವಯ್ಯಾ.
ಪೂಜ್ಯರ ಪ್ರಸಾದವು ಪರಮ ಶ್ರೇಷ್ಠವಾದುದಯ್ಯಾ,
ಪತಿತರನ್ನು ಪಾವನರನ್ನಾಗಿಸಿ
ಭವರೋಗ ನಿವಾರಿಸುವುದಯ್ಯಾ.
ಕಷ್ಟನಷ್ಟಗಳನ್ನು ನಿವಾರಿಸಿ ಅಷ್ಟೈಶ್ವರ್ಯ
ಕಲ್ಪಿಸುವ ದಿವ್ಯಶಕ್ತಿಯಯ್ಯಾ,
ಗುರು ಲಿಂಗ ಜಂಗಮವ ಆರಾಧಿಸಿ
ಮಿಕ್ಕ ಪ್ರಸಾದವ ಪಡೆದ ಶರಣರು

ಚರಿತ್ರಾರ್ಹರಾಗಿರುವರಯ್ಯಾ, ಎನ್ನೊಡೆಯ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶ ನೀವು ಕರುಣಿಸುವ
ಪ್ರಸಾದದಿಂದಾನು ನಿತ್ಯ ತೃಪ್ತನಾಗಿ
ನಿಶ್ಚಿಂತೆಯಿಂದರುತಿರ್ದೆನಯ್ಯಾ.

೧೪೦

ಹರಿಯುವ ನೀರು, ಉರಿಯುವ ಬೆಂಕಿ,
ತರತರ ಬೆಳೆನೀಡೋ ಮಣ್ಣು,
ಧರೆಯ ಮೇಲಣ ಗಾಳಿ,
ಸರ್ವಕ್ಕೂ ಆಧಾರವೀ ಆಕಾಶ.
ಪಂಚತತ್ವಗಳಿಗೆ ಪ್ರಾಣವನಿತ್ತು ಪ್ರಪಂಚ
ಬೆಳಗಿಸುವ ಪರಮಾತ್ಮ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನೀವೇ ಎಂಬುದು ಅರಿತೆನಯ್ಯಾ,
ನಿಮ್ಮ ಅಗಮ್ಯ ಅಗೋಚರ ಅಪ್ರತಿಮ ಪಾದಂಗಳನು
ಹೃನ್ಮಂದಿರದಲ್ಲಿರಿಸಿ ಪೂಜಿಸುತಿರ್ಪೆನಯ್ಯಾ,

೧೪೧

ಹರಿಯುವ ಗಂಗೆಯಲಿ ಮಿಂದರೆ
ಪಾಪ ಕಳೆಯುವುದಿಲ್ಲ.
ಉರಿಯುವ ಅಗ್ನಿಗೆ ತುಪ್ಪ ಸುರಿದರೆ
ಪಾಪ ಕ್ಷಯವಾಗುವುದಿಲ್ಲ.
ಹಿರಿದಾದ ಮೋಜಿನಾ ಕೂಟವಿರಿಸಿದೊಡೆ
ಪುಣ್ಯ ಪ್ರಾಪ್ತಿಯಾಗುವುದಿಲ್ಲ.
ಆಡಂಬರದ ಪೂಜೆ, ಐಷಾರಾಮಿ
ಯಾತ್ರೆಗಳಿಂದ ಪುಣ್ಯ ಹರಿದು ಬರುವುದಿಲ್ಲ.

ಮಾನವೀಯತೆ ತೋರಿ ದೀನ ದಲಿತರಿಗೆ
ನೆರವಾದೊಡೆ ಪಾಪ ಭಸ್ಮ ವಾಗುವುದು.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನೊಲುಮೆ ದೊರೆಯುವುದು ಸತ್ಯ.

೧೭೨

ಹಸಿವು ಹೆಚ್ಚಾಯಿತೆಂದು ಕಸವ ತಿನ್ನಬಹುದೇ?.
ನಶಿಸಿಹೋಗುವ ವಸ್ತುವೆಂದು ಎಸೆಯಬಹುದೇ?.
ಕಸುವು ತುಂಬಿದೆಯೆಂದು ಗಿರಿಯ ಭಾರ ಹೊರಬಹುದೇ.?
ಅರಿವು ಇದೆಯೆಂದು ಹಿರಿಯರ ತೊರೆಯಬಹುದೇ?.
ದೇವನ ಇರುವ ಮರೆತು ಮೆರೆಯುವೆನೆಂದೊಡೆ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕೆಡಹಿ ಮೂಗುದಾರ ತೊಡಿಸದೇ ಬಿಡುವನೇ ? ಅದು ಕಾರಣ
ಅಹಂಕಾರ ತೊರೆದು ಸದ್ಭಕ್ತನಾಗಿ ಬಾಳು ಮನವೇ.

೧೭೩

ಹಸಿವೆಗೆ ಅನ್ನ, ತೃಷೆಗೆ ಜಲ, ವಾಸಕ್ಕೆ ಗೂಡು
ಕಂಡು ಸಂತೃಪ್ತಿ ಗೊಳ್ಳುವವು ಎಲ್ಲಾ ಜೀವಿಗಳು.
ಆಸೆಯುಳ್ಳ ಮನುಜಂಗೆ ಧನ ಕನಕ
ಕಾಮಿನಿ ದಾಹಕ್ಕೆ ಇತಿಮಿತಿ ಇಲ್ಲ.
ಅಪಚಾರ ,ಅಪರಾಧ ಗೈದು ದುಃಖದ ಸುಳಿಯಲ್ಲಿ
ಸಿಲುಕಿ ನೆಮ್ಮದಿ ಕಾಣದೇ ನರಳುವನು.
ಸನ್ಮಾರ್ಗದಲ್ಲಿ ದುಡಿದು ಭಗವಂತನಿತ್ತ ಪ್ರಸಾದವೆಂದು
ಭುಂಜಿಸುತ್ತಾ ಬಾಳುವ ಸತ್ಯಶರಣನು ಜಗದಲಿ ನಿತ್ಯ ತೃಪ್ತನೆಂದ
ಎನ್ನೊಡೆಯ ನಿರವಯ ನಿರಂಜನ ಮಹಾಪ್ರಭು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೭೪

ಹತ್ತಾರು ನಾಯಿಗಳು ಹೊತ್ತು ಹೊರಡುವ ತನಕ,
ಮತ್ತೆ ಮತ್ತೆ ಬೊಗಳುತಿರ್ದೊಡೆ ಅದು ಪ್ರಾರ್ಥನೆಯಾದೀತೇ?
ಸತ್ತ ಹೆಣವನರಸುವ, ಕತ್ತೆ ಕಿರುಬಗಳು ಮಸಣ
ಸುತ್ತುತಿರ್ದೊಡೆ ಜಾಗರಣೆ ಎನ್ನಲಾದೀತೇ?
ಕಂತುಹರನ ನಿತ್ಯ ಜಪಿಸದೆ, ತನ್ನ ಸ್ವತ್ತಿಗಾಗಿ ಕತ್ತೆತ್ತಿ
ನೋಡದೆ ಪರಿತಪಿಸುವ ಮನುಜ ಸತ್ತ ನಾಯಿ
ಕತ್ತೆಕಿರುಬಗಳಗಿಂತ ಕಡೆ ಎಂದ ಎನ್ನೊಡೆಯ ಜಗದಾದಿ
ಜಗದ್ಗುರು ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೭೫

ಹಸಿರನ್ನು ಉಸಿರಾಗಿಸಿ, ಕೃಷಿಯಲ್ಲಿ ದೃಷ್ಟಿಯಿರಿಸಿ,
ಮೊಟ್ಟ ಮೊದಲು ಹಸಿದ ಹೊಟ್ಟೆಗೆ
ಅನ್ನವನಿತ್ತ ಶ್ರೀಗುರು ವೀರಭದ್ರ.
ಪ್ರಾಣಿಬಲಿ ನಿಲ್ಲಿಸಿ ಪ್ರಪಂಚಕೆ ಸಾತ್ವಿಕ ಆಹಾರ ಪರಿಚಯಿಸಿದ
ಪ್ರಪ್ರಥಮ ಪುರುಷ ಪುಂಗವ ಶ್ರೀ ದೇವ
ವೀರಭದ್ರ ಅಹಿಂಸೆಯ ರೂವಾರಿ,
ಅಗಣಿತ ಪರಾಕ್ರಮಿ, ಅವಿರತ ಶ್ರಮದಾನಿ
ಅಖಂಡ ಭೂಮಂಡಲಾಧಿಪತಿ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಶ್ರೀ ಪಾದಂಗಳಗೆ ನಮೋ ನಮಃ.

೧೭೬

ಹರಿಯುವ ಹಾವು, ಉರಿಯುವ ಬೆಂಕಿ, ಸುರಿಯುವ ಮಳೆ,
ಬರಸಿಡಿಲಿಗೂ ಬಗ್ಗದೆ ಜಗ್ಗದೆ ನಿಲ್ಲಬಹುದು.
ಮತ್ಸರಿಪ ಮನಗಳ ಕುತ್ಸಿತ ಬುದ್ಧಿಯ

ಮುಂದೆ ಅರಘಳಿಗೆ ನಿಲ್ಲಲಾಗದು.
ಎನ್ನೊಡೆಯ ಸರ್ವಾಂತರ್ಯಾಮಿ ಸರ್ವಶಕ್ತ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಅಪಾರ ಕರುಣೆಯಿಂದಾನು ಬದುಕಿರ್ದೆನಯ್ಯಾ

೧೭೭

ಹಲವು ದೈವಗಳಿಗೆ ಮಿಗಿಲಾದ ದೈವ ಶ್ರೀ ವೀರಭದ್ರ.
ನೆಲ, ಜಲಗಳನು ಸಂರಕ್ಷಿಸುವ ಕಲೆಯ ಕಲಿಸಿದ ಮಹಾರುದ್ರ,
ಸುಲಭದಲಿ ಕೃಷಿಕಾಯಕವನರುಹಿದ ಮಹಾ ಬಲಭದ್ರ,
ಅಹಿಂಸೆಗೆ ಆದ್ಯತೆ ಇತ್ತು ಪ್ರಾಣಿ ಸಂಕುಲವ ಸಲುಹಿದ ಸುಭದ್ರ.
ಅನ್ಯಾಯ ಅಧರ್ಮಗಳನ್ನು ಅಳಿಸಿ ವೀರಧರ್ಮ ಸಾರಿದ
ಕರುಣಾ ಸಮುದ್ರ . ಎನ್ನೊಡೆಯ ಅಘೋರ ಅನಘಲಿಂಗ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸುವವರಿಗೆ ಸಂತೃಪ್ತಿಯ ಜೀವನ ನಿತ್ಯ ಕಾಣಿರೋ.

೧೭೮

ಹುಟ್ಟು ಯಾರಿಗೂ ಗೊತ್ತಿಲ್ಲ. ಚಟ್ಟ ಹತ್ತುವುದು ತಿಳಿದಿಲ್ಲ.
ನಟ್ಟನಡುವೆ ತಿಳಿದದ್ದು ಮರೆತಿಲ್ಲ.
ಕಟ್ಟೆಚ್ಚರದಿ ಸಂಸಾರ ನಡೆದರೂ ಸಮಾಧಾನವಿಲ್ಲ.
ನಟ್ಟಿರುಳಲ್ಲಿ ಎಡವಟ್ಟು ಘಟಿಸಿದೊಡೆ
ಏನು ಮಾಡುವುದೆಂದು ಅರಿತಿಲ್ಲ.
ಸರಿಯಾಗಿ ನಡೆದಾಗ ನನ್ನಿಂದ ಎನ್ನುವುದು ಬಿಟ್ಟಿಲ್ಲ.
ಕಟ್ಟಕಡೆಗೂ ಜಗದೊಡೆಯ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸದೇ ಶ್ವಾನನಂತೆ ಬೊಗಳುವುದು ಬಿಡಲಿಲ್ಲ.
ಈ ಮಾನುಷ ಜನ್ಮವು ಸಾರ್ಥಕ ಪಡೆಯಲಿಲ್ಲ.

೧೭೯

ಹುಚ್ಚುನಾಯಿ ಕಚ್ಚಿದ ಬಳಿಕ ಹುಚ್ಚು ಹಿಡಿಯತೈತಿ.
ಅಚ್ಚು ಬೆಲ್ಲ ಮೆಚ್ಚಿ ತಿಂದರೆ ಮಸ್ತಕಕ್ಕೆ ಏರತೈತಿ.
ಬೆಚ್ಚಿಬೀಳದೆ ಬಲ್ಲವರಲ್ಲಿ ತಕ್ಕ ಮದ್ದು ಹಾಕಬೇಕೈತಿ.
ತುಚ್ಛರ ಕೈಗೆ ಸಿಕ್ಕರೆ ಕೊಚ್ಚಿ ಹಾದಿಹೆಣ ಆಗೋದೈತಿ.
ಸ್ವಚ್ಛ ಮನದ ಸದ್ಗುರು ದೊರೆತರೆ
ನಿನ್ನ ಹುಚ್ಚಿಗೆ ಪರಿಹಾರ ಸಿಗತೈತಿ.
ಎಚ್ಚರದಿಂದಲಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪಾದವ ಹಿಡಿದರೆ ನಿಚ್ಚಳವಾಗುತೈತಿ.

೧೮೦

ಹೆದರಿದೊಡೆ ಬರುವುದು ಆಪತ್ತು.
ಹೆದರದಿರ್ದೊಡೆ ಪೂರ್ಣ ತಾಕತ್ತು.
ಬೆದರಿದೊಡೆ ತೋರುವುದು ವಿಪತ್ತು.
ಬೆದರದಿರ್ದೊಡೆ ಉಳಿಯುವುದು ಸಂಪತ್ತು.
ಮುದುರಿದೊಡೆ ಆವರಿಸುವುದು ದೇಹಕ್ಕೆ ಕುತ್ತು.
ಉದುರಿದೊಡೆ ತಪ್ಪಿಹೋಗುವುದು ತುತ್ತು.
ಹೊತ್ತು ಹೊತ್ತಿಗೆ ಶಿವನಾಮ ಸ್ಮರಣೆಯೊಂದೇ ಏಕೈಕ
ಮಾರ್ಗ ವೆಂಬುದನರಿತು ಬಾಳುವುದು ಶ್ರೇಷ್ಠವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೮೧

ಹೊಸ ಬಟ್ಟೆ ಧರಿಸಿದಂತೆ ಜೀವನ.
ತುಸು ಒಬ್ಬಟ್ಟು ತಿಂದಂತೆ ಯೌವ್ವನ,
ಕೂಸೊಂದು ಪಡೆದಂತೆ ತಾಯ್ತನ.
ಮುಸುಕಿನಲಿ ಕಳೆದಾಯ್ತು ಜವ್ವನ.

ನಸುನಗುತ ಬಂದಾಯ್ತು ಮರಣ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಮಾಡಲಿಲ್ಲೋ ಸ್ಮರಣ. ಆಗಲಿಲ್ಲೋ ನೀ ಮುಕ್ತಿಗೆ ಭಾಜನ.

೧೮೨

ಹೊತ್ತಾರೆ ಎದ್ದು ಹತ್ತಾರು ದೈವಗಳ
ನಿತ್ಯ ಬೇಡುವ ಮುನ್ನ
ಸದ್ಗುರು ಇತ್ತ ಶ್ರೇಷ್ಠ ಲಿಂಗವನು
ಇಷ್ಟ ಪಟ್ಟು ಪೂಜಿಸು ಮನವೇ.
ಬಿತ್ತಿ ಭಕ್ತಿ ಬೀಜವನು, ಕಿತ್ತು ಮನದ ಕಳೆಯನು
ಉತ್ತಮ ಧ್ಯಾನ ಜಲವನು ಸುರಿಸು ಮನವೇ.
ಕತ್ತೆತ್ತಿ ನೋಡುವ ಹತ್ತಾರು ಕಳ್ಳ ಕಾಕರು ನುಗ್ಗದಂತೆ
ಸುತ್ತಲೂ ಬೇಲಿಯ ಜಡಿ ಮನವೇ,
ಜಗದಾದಿ ಜಗದ್ಗುರು ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಕರುಣೆಗೆ ಪಾತ್ರನಾದೊಡೆ
ಸ್ಥಿರಮುಕ್ತಿ ಪದವಿ ಸತ್ಯ ಮನವೇ.

ಸಾಮಾಜಿಕ ವಚನಗಳು

೧

ಅರುಣೋದಯ ಜೀವ ಸಂಕುಲಕೆ ಸಂಭ್ರಮದಂತೆ.
ಕರುಳಿನ ಕೂಗು ಮಾತೃ ಹೃದಯಕೆ ಸಂತಸವಂತೆ.
ಶರಣರ ನುಡಿ ಸಮಾಜಕ್ಕೆ ದಾರಿ ದೀಪಗಳಂತೆ,
ಜಗದಾದಿ ಜಗದ್ಗುರು ಜಗದೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ನಾಮಸ್ಮರಣೆಯಿಂದ
ಅನಿಷ್ಟಗಳೆಗೆಲ್ಲ ಪರಿಹಾರ ಸತ್ಯವಂತೆ ಸರ್ವೇ ಜನಾ
ಸುಖಿನೋ ಭವಂತು ಎಂಬುದನರಿತು ಬಾಳು ಮನವೇ

೨

ಅನ್ನವನಿತ್ತು ಜ್ಞಾನವ ನೀಡಿ ತಂಗಲು ತಾಣವ ಕಲ್ಪಿಸುತ್ತಿವೆ
ಸಿದ್ಧಗಂಗಾ, ಸುತ್ತೂರು, ಕೊಪ್ಪಳದ ಗವಿಮಠಗಳಯ್ಯ,
ಅಂಧರಿಗೆ ಸಂಗೀತ ಜ್ಞಾನ ಸುಧೆಯೊಂದಿಗೆ ಅನ್ನ
ವಸತಿ ಕಲ್ಪಿಸುವುದು ವೀರೇಶ್ವರ ಪುಣ್ಯಾಶ್ರಮವಯ್ಯ.
ಕರುನಾಡಿನ ಹೆಮ್ಮೆಯ ಈ ಮಠಗಳಲ್ಲಿ
ಜಾತಿ,ಮತ, ಪಂಥ ಭೇದವಿಲ್ಲವಯ್ಯ,
ಸಕಲರಿಗೂ ಲೇಸನೇ ಬಯಸುವ ಮಠಾಧೀಶರು
ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ

ಚಿಂತನೆಯಲಿರ್ಪರಯ್ಯ,
ಜಂಗಮನ ಜೋಳಿಗೆಯ ಶಕ್ತಿಯ ಮುಂದೆ
ಜಗದ ಯಾವ ಶಕ್ತಿ ಏನೂ ಮಾಡಲಾರದೆಂದ
ಎನ್ನೊಡೆಯ ಜಗದಾದಿ ಜಗದ್ಗುರು ಜಂಗಮ ಪುಂಗವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩

ಅನ್ನವಿದ್ದಾಗ ಬಂಧುಗಳು,
ವಿದ್ಯೆ ಇದ್ದಾಗ ಮಾನ ಮರ್ಯಾದೆ.
ಬುದ್ಧಿ ಇದ್ದಾಗ ಆದರ ಗೌರವ
ಬಲ ಇದ್ದಾಗ ಆಸ್ತಿ ಅಂತಸ್ತು.
ಜೀವ ಇದ್ದಾಗ ನಾನು ನನ್ನದು.
ಏನೂ ಇಲ್ಲದಿದ್ದಾಗ ನೀನು ನಿನ್ನದು ಎಲ್ಲಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಎಲ್ಲವೂ ಶೂನ್ಯ.

೪

ಅನ್ನವನು ಉಂಬಾತ ಅನೃತವನಾಡುವುದೇ?
ನನ್ನವರೆನ್ನುತ್ತಾ ಬೆನ್ನಿಗೆ ಬರೆ ಎಳೆಯುವುದೇ?
ಕಣ್ಣುಮುಚ್ಚುತ್ತಾ ಇನ್ನೊಬ್ಬರ ಬೆಣ್ಣೆ ಕಸಿಯುವುದೇ?
ಪರರ ಹಿಂಸಿಸಿ ಖುಷಿಯ ಪಡುವಾತ ಮನುಷ್ಯನೇ?
ಸಣ್ಣ ಮಾತಲ್ಲ, ಚಿಕ್ಕ ತಪ್ಪಲ್ಲ ಇದು ನಂಬಿಕೆಗೆ ದ್ರೋಹ.
ಇಂಥ ನಯ ವಂಚಕರಿಗೆ ಭಯಂಕರ ಶಿಕ್ಷೆ ತಪ್ಪದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೫

ಅನ್ನವನುಂಡ ಮನೆಗೆ ಕನ್ನ ಹಾಕುವವರನು ಕಂಡೆ.
ತನ್ನಂತೆ ಪರರ ಕಾಣುವವರ ಬೆನ್ನಿಗೆ
ಚೂರಿ ಇರಿಯುವವರನು ಕಂಡೆ.
ಚಿನ್ನದಂಥ ಸಂಸಾರಗಳಿಗೆ ಕೊಳ್ಳಿ ಹಚ್ಚುವವರನು ಕಂಡೆ.
ಹಿಂಸೆ ಕೊಲೆ ಸುಲಿಗೆಯ ಮನಗಳೇ ಹೆಚ್ಚಾಗಿ
ಸಜ್ಜನರಿಗೆ ಉಳಿಗಾಲವಿಲ್ಲದಾಗಿದೆ.
ಅಪ್ಪಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ದುಷ್ಕರ್ಮಿಗಳ ಅಟ್ಟಹಾಸವನು ದಿಟ್ಟತನದಿ ಬಗ್ಗು
ಬಡಿಯಲು ಧರೆಗಿಳಿದು ಬಾರಯ್ಯ.

೬

ಅಳಿವಿನಂಚಿನಲಿದ್ದರೂ ಬೆಳಕಿನಾ
ಪ್ರಖರ ಕಿರಣವಾಗಿರಬೇಕು.
ಒಳಿತಿನಾ ತಿಳಿಮನದಲ್ಲಿ ಕರುಣೆ ಅರಳುತ್ತಿರಬೇಕು.
ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗ ಘಟಸರ್ಪವೇ ಸರಿ
ಕೊಳಕು ಮನವ ತೊಳೆದು, ಥಳುಕಿನಾ
ಪ್ರಪಂಚದಿ ಹೊಳಪಿನಾ ಖಣಿಯಾಗೆಂದ
ಎನ್ನೊಡೆಯ ಚಿನ್ಮಯಾತ್ಮ ಕೋಟಿ ಸೂರ್ಯ
ಸಮಪ್ರಭೆಯುಳ್ಳ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ,

೭

ಅಹಂಕಾರವೆಂದರೆ ಮದ,
ಅಹಂಕಾರವೆಂದರ ಸೊಕ್ಕು.

ಅಹಂಕಾರದಿಂದಲೇ ತಪ್ಪು.
ಅಹಂಕಾರದಿಂದಲೇ ಮುಪ್ಪು,
ಸಹಕಾರ ಸಿಕ್ಕರೆ ಅದರ ಕುಹಕತನ ಹೆಚ್ಚುವುದು.
ಮಹತ್ಕಾರ್ಯಗಳ ಮುಚ್ಚುವುದು .
ಬಹುಜನರ ಚುಚ್ಚುವುದು ..
ಸ್ನೇಹಕ್ಕೆ ಕಚ್ಚುವುದು. ಪಾಪ ಬುದ್ಧಿಗೆ ಹಚ್ಚುವುದು,
ಕೋಪವು ಹೆಚ್ಚುವುದು. ಶಾಪಕ್ಕೆ ನೆಚ್ಚುವುದು.
ಸಂಬಂಧಗಳು ಕಳಚುವುದು.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶಾ
ಅಹಂಕಾರಿಗಳ ಹಲ್ಲು ಮುರಿದು
ಸೊಲ್ಲಡಗಿಸಿ ಮೂಲೆಗಿಕ್ಕುವ
ಮಹಾದೇವ ನಿನ್ನ ಭವ್ಯ ರೂಪವ ಕಂಡು
ದಿವ್ಯಚರಣಕೆ ನಮೋನಮಃ ಎನುತಿರ್ದೆನಯ್ಯ

೮

ಅಹಂಕಾರವೆಂಬುದು ಅರೆಘಳಿಗೆ ಸುಳಿಯಬಾರದು.
ತಪ್ಪು ಒಪ್ಪಿ ತಿದ್ದಿಕೊಳ್ಳದಿರುವ ಮನ ಇರಬಾರದು.
ನಾನೆಂಬ ಮದವು ಕೂರಂಬಿನಂತೆ ಸಿಕ್ಕ ಸಿಕ್ಕವರನು
ಕೇಕೆ ಹಾಕಿ ಘಾಸಿಗೊಳಿಸುವುದು.
ಬಲ ಕುಗ್ಗಿದಾಗ ನಿನ್ನ ಬಗ್ಗಿಸಿ
ವಿಲವಿಲ ಒದ್ದಾಡಿಸದೇ ಬಿಡದು.
ನಾನೆಂಬುದನಳಿದು ಎಲ್ಲವೂ ನೀನು, ನಿನ್ನಿಂದ ಎಂದು
ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶಂಗೆ
ಶರಣಾಗು ಮನವೇ.
ಮಾನವೀಯತೆಯ ಮಾಧುರ್ಯ ಸವಿ ಮನವೇ..

೯

ಅತ್ತೆ ಸೊಸೆಯರ ಕಿತ್ತಾಟದಲ್ಲಿ ಹೆತ್ತವರ
ಕತ್ತು ಹಿಡಿದು ಹೊರಹಾಕುವವರ ಕಂಡೆ
ಒತ್ತಿ ಬಂದ ದುಃಖದಲ್ಲೂ,
ಮೌನದಿ ಮನೆ ತೊರೆದವರ ಕಂಡೆ.
ಹೊತ್ತು ಹೊತ್ತಿಗೆ ಎದ್ದು ಜೀವ ಒತ್ತೆಯಿಟ್ಟು
ಬೆಳೆಸಿದ ಮುದ್ದು ಮಕ್ಕಳ ಕ್ರೂರತನವ ಕಂಡೆ.
ಸುತ್ತು ಕತೆ ಕಟ್ಟಿ ಹೆತ್ತವರಿಗೆ ಅಪವಾದ
ಹೊರಿಸುವ ತುಚ್ಚರಿಗೆ ನರಕವೇ
ಗತಿಯೆಂದ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦

ಅಕ್ಷರದಲಿ ಶಕ್ತಿಯುಂಟು. ಶಬ್ದದಲ್ಲಿ ಅರ್ಥವುಂಟು.
ಅಕ್ಷರಕೆ ಗೌರವ, ಶಬ್ದಕ್ಕೆ ಮಾನ್ಯತೆ
ಇದ್ದಾಗ ಸಾಹಿತ್ಯಕೆ ಬೆಳಕುಂಟು.
ಸಹೃದಯಿ ಓದುಗರ ಮನ ಮಿಡಿದೊಡೆ
ಸಾಹಿತ್ಯಕ್ಕೆ ಬೆಲೆಯುಂಟು.
ಕವನವಿರಲಿ ಕಥೆ ಇರಲಿ ನೀತಿಯನು ಬಿತ್ತರಿಸುವಂತಿರಲಿ,
ಕೊಳಕು ಪದಗಳ ಬಳಕೆ ಮೊಳಕೆ ಯೊಡೆಯದಿರ್ದೊಡೆ
ಅದು ವಚನಕ್ಕೆ ಅಮೃತವನೆರಯುವದೆಂದ ನಮ್ಮ
ಅನುಭಾವದ ಅಲ್ಲಮ ಶಿವಶಕ್ತಿ
ಪ್ರಿಯ ಶ್ರೀ ದೇವಸೂಗೂರ ವೀರೇಶ

೧೧

ಅಂದದ ಮಾತಿನಲಿ ಚಂದ್ರೋದಯ ಕಾಂಬುದು.
ಬಂಧುರ ಬಾಂಧವ್ಯದಲಿ ನಂಬಿಕೆ ತುಂಬುವುದು.

ಬೆಂದ ಮನಸುಗಳು ಬೆಸೆದು ಒಗ್ಗೂಡಿ ಸಂಭ್ರಮಿಸುವುದು.
ಮಾತಿನಲಿ ವಿಷವುಂಟು, ಮಾತಿನಲಿ ಅಮೃತವುಂಟು.
ಕಾರಣ ಪುಣ್ಯ ಪಾಪಂಗಳ ಪ್ರಜ್ಞೆಯಿಂ ಬಾಳುವವರಿಗೆ
ಸದಾ ದೈವಬಲ ಉಂಟೆಂದ ನಮ್ಮ ಚಿನ್ಮಯ ಜ್ಞಾನಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೨

ಅಂಗದ ಮೇಲಿರುವ ಲಿಂಗ ದೇವರ
ಜಗುಲಿ ಮೇಲಿಟ್ಟಿರುವುದು ಕಂಡೆ.
ರಂಗು ರಂಗಿನ ಸ್ಥಳದಲ್ಲಿ ಕಂಡದ್ದು ತಿಂದು
ತಿರುಗಲು ಲಿಂಗ ಅಡ್ಡಿ ಅನ್ನುವವರ ಕಂಡೆ.
ಮೂಗುದಾರವಿಲ್ಲದ ಕೋಣ ವಿಷಯಕ್ಕೆಳಸಿ
ಕಂಡಲ್ಲಿ ತಿರುಗುವ ಹಾಗೆ ತಿರುಗುವವರ ಕಂಡೆ.
ಕತ್ತೆಗುತ್ತಮ ಮುದ್ರೆಯನೊತ್ತಲಾ ಕತ್ತೆ ಬಸವ ನಪ್ಪುದೇ?
ಅಪ್ಪಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ದೀಕ್ಷೆ ಇಲ್ಲದ, ನೀತಿ ರೀತಿ ಇಲ್ಲದವಂಗೆ
ಲಿಂಗಾಯತರೆಂದು ಒಪ್ಪಬಹುದೇನಯ್ಯ?

೧೩

ಆಶ್ಚರ್ಯ ತಂದಿದೆ ಪಾಶ್ಚಾಮಾತ್ಯರ ಅನುಕರಣೆ.
ಮಧ್ಯರಾತ್ರಿ ಕದ್ದು ಮದ್ಯ ಮಾಂಸ ಸೇವಿಸುವ ಆಚರಣೆ.
ಹೀಗೆ ಅರೆ ಬಟ್ಟೆ ಧರಿಸಿ ಮೋಜು ಮಸ್ತಿನಿಂ ಥಳಕು
ಬಳಕುತ ಅಂಗಾಂಗ ತುಳುಕಿಸುವ ಆಕರ್ಷಣೆ.
ಮನದಾಸೆಯ ಕನಸುಗಳ ನನಸಾಗಿಸಲು
ಶ್ರಮಪಟ್ಟು ಪಡೆವ ಕೊಳಕು ಬೆಣ್ಣೆ.
ಕಣ್ಣಿಗೆ ಮಣ್ಣೆರಚಿ ಸ್ವೇಚ್ಛೆಯಿಂದೋಲಾಡುವ

ಹ್ಯಾಪಿ ನ್ಯೂ ಇಯರ್ ನ ಬವಣೆ.
ಗೌರವಕ್ಕೆ, ನೀತಿ ರೀತಿಗೆ ಹೆಸರಾದ ಸನಾತನ ಧರ್ಮ
ಸಂಸ್ಕೃತಿಯನೊಮ್ಮೆ ಅವಲೋಕಿಸಿ, ಎಂದೆಚ್ಚರಿಸಿದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪

ಆಸ್ತಿಗಾಗಿ ಅಪ್ಪನ ಕಾಲು ಮುರಿಯುವವರ ಕಂಡೆ.
ವಸ್ತುವಿಗಾಗಿ ಅಮ್ಮನ ದಮ್ಮು ನಿಲ್ಲಿಸಿದವರ ಕಂಡೆ.
ಮೋಜು ಮಸ್ತಿಗಾಗಿ ಹೆಂಡತಿಯ ಬೆಂಡತ್ತಿದವರ ಕಂಡೆ.
ನೀತಿ ರೀತಿಯಿಲ್ಲದೆ ಮಾನ ಮರ್ಯಾದೆ ಕಳೆದುಕೊಂಡ,
ಕೊಳಕು ಜನರನು ಕಣ್ಣೆತ್ತಿಯೂ ನೋಡಬಾರದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೫

ಆಕಾಶದಂಗಳದಲಿ ಹಾರಾಡುವ
ಮಾನವ ಓಝೋನ್ ನಿರ್ಮಿಸಲಾರ.
ಸಾಗರದಾಳಕ್ಕಿಳಿವ ಮಾನವ ಅದರ
ಅಬ್ಬರವನ್ನು ತಡೆಯಲಾರ.
ಗಿರಿಯನ್ನು ಕೊರೆದ ಮಾನವ
ವರುಣನನ್ನು ತಡೆಯಲಾರ.
ಜ್ಞಾನ, ವಿಜ್ಞಾನ, ಸುಜ್ಞಾನ ಪಡೆಯಲು
ಮಾನವನಿಗೆ ಶಿವನಿತ್ತ ವರ ಮಾತ್ರ.,
ಪ್ರಕೃತಿ, ವಿಕೃತಿಗಳ ಕಾರ್ಯ ಅಪ್ರತಿಮ ಮಹಿಮ
ಶಿವಶಕ್ತಿ ಪ್ರಿಯ ಶ್ರೀದೇವಸೂಗೂರ ವೀರೇಶನ
ಸುಪರ್ದಿಗೆ ಮಾತ್ರ, ಎಂದರಿತು ಬಾಳಬೇಕು ಮಾನವ.

೧೬

ಆದರಿಸುವವರಲ್ಲಿ ಅರ್ಥವನೆಣಿಸುವುದು ತರವಲ್ಲ.
ಮೂದಲಿಸುವವರಲ್ಲಿ ಮಾತನಾಡುವುದು ಸರಿಯಲ್ಲ.
ಹೃದಯ ಹೀನರಲ್ಲಿ ಬಾಧೆಯನುಸುರುವುದು ತರವಲ್ಲ.
ಸದಾಚಾರಿಗಳಲ್ಲಿ ಕಾದಾಟಕ್ಕಿಳಿಯುವುದು ಸರಿಯಲ್ಲ.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಭಕ್ತರಲ್ಲಿ ಅಹಂಕಾರಕ್ಕೆ ಕಿಂಚಿತ್ತೂ ಇಂಬಿಲ್ಲವಯ್ಯಾ.

೧೭

ಇಷ್ಟವಾದುದರಲ್ಲಿ ದೋಷವೇ ಕಾಣದು.
ಕಷ್ಟವೆನಿಸದು, ಅನಿಷ್ಟವೆನಿಸದು; ನಷ್ಟವೇ ತೋರದು.
ವಿಶಿಷ್ಟವಾಗಿ ಅಪ್ಯಾಯಮಾನವೆನಿಸುವುದು.
ಎಲ್ಲಕ್ಕೂ ಪುಷ್ಟಿಕರಿಸುವುದು ಮನ.
ಮನದಲಿ ಮನೆ ಮಾಡಿದ ನಂಬಿಕೆ
ನಂಬಿಕೆಯ ಶಕ್ತಿಗೆ ಸಂಶಯದ ಹುಳು
ಹೊಕ್ಕ ಕ್ಷಣವೇ ಎಲ್ಲವೂ ಬದಲಾಗುವುದು.
ಅದು ಕಾರಣ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ
ನೋಡುವ ಮನಸ್ಸು ಬೆಳೆಸಿಕೊಳ್ಳಬೇಕೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೮

ಉದರದಲಿರ್ಪ ಮತ್ಸರದ ವಿಷ ಉರಗದ
ವಿಷಕ್ಕಿಂತ ಮಿಗಿಲು ನೋಡಯ್ಯಾ,
ಕುದಿವ ಮನದಲಿ ಮಾತ್ಸರ್ಯದ ವಿಷಜ್ವಾಲೆ,
ಭುಗಿಲೇಳುವುದು ಕಾಣಯ್ಯಾ.

ಪರರ ಪೀಡನೆಯ ಮನೋಭಾವ
ಸಮಾಜಕ್ಕೆ ವಿಷಕಾರಿಯಯ್ಯಾ,
ದುರಾಲೋಚನೆ ತನು, ಮನ,
ಧನ, ಹಾಳುಗೆಡುವುದಯ್ಯಾ.
ತಾನು ಉಣ್ಣದ ಪರರಿಗಿಕ್ಕದ ಮತ್ಸರದ
ಮನ ತರವಲ್ಲ ನೋಡಯ್ಯಾ.
ನಮ್ಮ ಶಿವಶಕ್ತಿ ಪ್ರಿಯ ಶ್ರೀದೇವಸೂಗೂರು ವೀರೇಶನ
ಪ್ರಜ್ವಲಿಪ ಪಾದಗಳ ಪಿಡಿದು ಭಜಿಸಿ ಸದ್ಭಕ್ತನಾಗಬೇಕಯ್ಯಾ,
ನಿಜಶರಣನೆನಿಸಿ ಸದ್ಗತಿ ಪಡೆಯಬೇಕಯ್ಯಾ

೧೯

ಉತ್ತಮರ ಸಂಗ, ಅತ್ತರಿನ ಸುವಾಸನೆ
ಸುತ್ತಮುತ್ತಲೂ ಉತ್ತಿ ಬಿತ್ತಿದಂತೆ.
ಅಧಮರ ಸಂಗ, ಅಭಿಮಾನ ಭಂಗ,
ಎತ್ತ ನೋಡಿದಡತ್ತ ಕೊಳಚೆ ಮೈಗೆ ಮೆತ್ತಿದಂತೆ.
ಅತ್ಯುತ್ತಮ ಹೊತ್ತಿಗೆಗಳು ಹೊತ್ತು ಹೊತ್ತಿಗೆ
ನಿನ್ನ ಎತ್ತಿ ಹಿಡಿವ ಸನ್ಮಿತ್ರರಿದ್ದಂತೆ.
ಎಂದರಿತು ಎಚ್ಚರದಿ ಬಾಳಬೇಕೆಂದ
ಎನ್ನೊಡೆಯ ಚಿನ್ಮಯ ಚಿದ್ರೂಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೨೦

ಉಪ್ಪಿಲ್ಲದ ಅಡುಗೆ ಸಪ್ಪೆಯಾಗಿರ್ಪುದು.
ಸೊಪ್ಪಿಲ್ಲದ ಸಾರು ಅಹಿತಕರವಾಗಿರ್ಪುದು.
ತಪ್ಪು ಹೆಜ್ಜೆ ನಡೆವೊಡೆ ಸಂಬಂಧ ಕಳಚುತಿರ್ಪುದು.
ಒಪ್ಪಾದ ಪಥವಿರೆ ಬಲ ಪೆರ್ಚುತಿರ್ಪುದು.

ಕಪ್ಪೆಚಿಪ್ಪು ಮುತ್ತಿನಾ ಹುಟ್ಟಿಗೆ ನೆಲೆಯಾಗಿರ್ಪಂತೆ,
ಸತ್ಯ ಶರಣರ ವಚನಗಳು ಬಾಳದೀವಿಗೆಯಾಗಿರ್ಪವು.
ಇದನರಿತು ನಡೆಯುವವರ ಜೀವನ ಸಾರ್ಥಕವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೨೧

ಏಕಾಗ್ರತೆ ಬೇಕು ವಿದ್ಯಾರ್ಥಿಗೆ.
ಏಕಾಗ್ರತೆ ಬೇಕು ಕುಶಲಕರ್ಮಿಗೆ.
ಏಕಾಗ್ರತೆ ಬೇಕು ವೈದ್ಯಂಗೆ,
ಏಕಾಗ್ರತೆ ಬೇಕು ತಂತ್ರಜ್ಞಾನಿಗೆ.
ಏಕಾಗ್ರತೆ ಬೇಕು ಮುಮುಕ್ಷುಗೆ,
ಏಕಾಗ್ರತೆಯ ಮನಸ್ಸು ಕಾರ್ಯ
ಪರಿಪೂರ್ಣ ಗೊಳಸುವುದು
ಯಶಸ್ಸು ತರುವುದು ಕೀರ್ತಿಗೆ ಭಾಜನವಾಗುವುದು.
ಏಕಾಗ್ರತೆಯಿಂದ ಮಾಡುವ ಧ್ಯಾನಕ್ಕೆ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಮನದುಂಬಿ ಹರಸುವನಯ್ಯಾ

೨೨

ಕಷ್ಟದಲ್ಲಿದ್ದವರಿಗೆ ಕನಿಕರಿಸಿ ಇಷ್ಟವಾದವರಿಗೆ ಸ್ವಾಗತಿಸಿ
ಅಷ್ಟಿಷ್ಟು ನೆರವಾದವರಿಗೆ ಅದರಿಸ ಬನ್ನಿ
ನಷ್ಟಕ್ಕೆ ಈಡಾದವರ ನೆನಪಿಸಿ ದುಷ್ಟಜನರನು
ದೂರವಿರಿಸಿ ಶ್ರೇಷ್ಠವಾದವರ ಗೌರವಿಸ ಬನ್ನಿ
ಅರಿಷಡ್ವರ್ಗಗಳನು ಜಯಿಸಿ ಭಾವೈಕ್ಯತೆಯ ಬಾಂಧವ್ಯ ಬೆಳೆಸಿ
ನಾಡದೇವಿ ಬನ್ನಿಮಹಾಂಕಾಳಿಯ ತಾಪತ್ರಯಗಳು ಬಿಮ್ಮನಳದು

ಕಲ್ಮಷವ ಕಳೆದು ಹೃದಯ ವೈಶಾಲ್ಯತೆ ಮೆರೆಯ ಬನ್ನಿ ಎಂದ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೨೩

ಕಂದುಗೊರಳನ ನೆನೆದರೆ ಕುಂದುಕೊರತೆಗಳಿಲ್ಲ.
ಸಂದು ಸಂದಿಗೆ ಕಾಡುವ ನೋವುಗಳಿಲ್ಲ.
ಅಂದಚೆಂದಗಳಿಗೆ ಯಾವ ಅಡ್ಡಿಆತಂಕಗಳಿಲ್ಲ.
ಪೂರ್ಣಚಂದಿರನ ಮುಂದೆ ಕತ್ತಲೆಯೆಂಬುದೇ ಇಲ್ಲ.
ಶುದ್ಧ ಕಾಯಕವಿರುವಲ್ಲಿ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸುತಿರುವಲ್ಲಿ ಯಾವ ಭಯವಿಲ್ಲ

೨೪

ಕರುಳನರಿಯದ ಬಳಗವಿರ್ದೊಡೇನು ಫಲ.
ಸರಳತೆಯಿಲ್ಲದ ಸತಿಯಿರ್ದೊಡೇನು ಫಲ,
ದಾರಿ ತಪ್ಪಿದ ತರಳನಿರ್ದೊಡೇನು ಫಲ.
ದುರುಳ ಗೆಳೆಯರಿರ್ದೊಡೇನು ಫಲ.
ಕಾರುಣ್ಯ ತೋರದ ಗುರುವಿರ್ದೊಡೇನು ಫಲ,
ಇಂತಪ್ಪ ಪ್ರಪಂಚದಲಿ ಬದುಕುವುದಕ್ಕಿಂತ, ಬೈರಾಗಿಯಾಗಿ
ಬಾಳಲೋಚನನ ಧ್ಯಾನದಲ್ಲಿ ಕಾಲ ಕಳೆಯೆಂದ
ಎನ್ನೊಡೆಯ ಅಪ್ರಮೇಯ ಅನನ್ಯ ಕಾರುಣ್ಯ ಮೂರ್ತಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೨೫

ಕಳೆದ ದಿನಗಳು ತಿರುಗಿ ಬಾರವಯ್ಯಾ.
ಬೆಳೆಸಿದ ಮನಗಳ ತ್ಯಾಗ ಮರೆಯಲಾಗದಯ್ಯಾ,

ಉಳಿದ ಜನಗಳ ಪ್ರೀತಿ ಮನದಿಂದ ಬೇರ್ಪಡಿಸಲಾಗದಯ್ಯಾ.
ಸತ್ಪಥತೋರಿದ ಗುರುಗಳ ಕರುಣೆ
ಹೃದಯಕ್ಕೆ ಹೊರೆಯಾಗದಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ಅಡಿಗಡಿಗೆ
ನಿನ್ನ ಸ್ಮರಿಸದೇ ಈ ನಾಲಗೆಗೆ ಬಲವೆಲ್ಲಿದೆಯಯ್ಯಾ.

೧೬

ಕಳೆದು ಹೋದ ಸಮಯ ಮತ್ತೆ ಸಿಗದು.
ನಾಳೆ ಎಂದರೆ ವೇಳೆ ಮತ್ತೆ ಬಾರದು.
ಶಕ್ತಿ ಇದ್ದಾಗಲೇ ಗಳಿಕೆ, ಯುಕ್ತಿ ಇದ್ದಾಗಲೇ ಉಳಿಕೆ.
ಮುಕ್ತಿಯ ಬಯಕೆ ಇದ್ದಾಗಲೇ ಭಕ್ತಿಯಿಂದ ಎನ್ನೊಡೆಯ
ಮಹಾದಾನಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಪ್ರಜ್ವಲಿಪ ದಿವ್ಯ ಪಾದಪದ್ಮಂಗಳ ಪಿಡಿದು ಪಾವನರಾಗಬೇಕಯ್ಯಾ

೧೭

ಕಟ್ಟು ಕಟ್ಟಳೆಗಳಿಲ್ಲದೆ ಹುಟ್ಟುವವು ಸಮಸ್ಯೆಗಳು,
ರಟ್ಟು ಮಾಡಿದರೆ ಬೆನ್ನಟ್ಟಿ ಬರುವವು ತಾಪತ್ರಯಗಳು.
ದೃಷ್ಟಿ ಇಟ್ಟು ಗೊಂದಲವ ಸೃಷ್ಟಿಸುವರು ಸಾಕಷ್ಟು ಸಂಬಂಧಿಗಳು.
ಭ್ರಷ್ಟ ಜನರಿಂದ ಒಟ್ಟಾರೆ ಬರುವ ಕಷ್ಟಗಳಿಗೆ ಕುಗ್ಗದಿರು ಮನವೇ.
ನಿಟ್ಟುಸಿರು ಬಿಡದೆ ಸ್ವಚ್ಛಮನದಿ ಸ್ಪಷ್ಟ
ಮಾರ್ಗದೊಳು ನಡೆವಾಗ ಸೃಷ್ಟಿಗೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸಮಸ್ಯೆಗಳ ದಿಟ್ಟತನದಿ ಮಟ್ಟಹಾಕಿ
ಬಟ್ಟ ಬಯಲು ಮಾಡುವನು ಸಂಶಯ ಬೇಡ.

೧೮

ಕಷ್ಟಗಳನಿತ್ತು ಖುಷಿಪಡುವವರು ಹಲವು ಜನರಯ್ಯಾ.
ಕಷ್ಟದಲಿದ್ದವರ ಕಂಡು ಕನಿಕರಿಸುವವರು ಕೆಲವರಯ್ಯಾ.
ಕಷ್ಟದಲ್ಲಿ ನೆರವಾಗುವವರು ಒಬ್ಬಿಬ್ಬರು ಮಾತ್ರವಯ್ಯಾ.
ಅವರವರ ಕೃತ್ಯಕ್ಕೆ ತಕ್ಕಪ್ರತಿಫಲ ಉಣ್ಣಲೇಬೇಕಯ್ಯಾ.
ಅದು ಕಾರಣ ಪರೋಪಕಾರದ ಪಥದಲ್ಲಿ ನಡೆದೊಡೆ
ಬರುವ ಕಂಟಕಗಳು ನಿರ್ಭಯಲಾಗುವವೆಂದ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೯

ಕಾಣಲರಿಯದ, ಕೇಳಲರಿಯದ,
ನೋಡಲರಿಯದ,ಮಾಡಲರಿಯದ,
ಬೇಡಲರಿಯದ, ಹಾಡಲರಿಯದ,
ದುಡಿಯಲರಿಯದ,ಒಡಲರಿಯದ,
ಜಡದೇಹದ ಕಡು ಭಂಡರ ಕಂಡೂ
ಕಾಣದಂತೆ ದೂರವಿರಬೇಕೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೨೦

ಕತ್ತಲು ಇಲ್ಲದಿರ್ದೊಡೆ ಬೆಳಕಿಗೆ ಯಾವ ಬೆಲೆ ?
ಕಷ್ಟಗಳು ಇಲ್ಲದಿರ್ದೊಡೆ ಸುಖಕ್ಕೆ ಯಾವ ಬೆಲೆ?
ಕಳ್ಳಕಾಕರು ಇಲ್ಲದಿರ್ದೊಡೆ ಆರಕ್ಷಕರ ಕೆಲಸಕ್ಕೆ ಯಾವ ಬೆಲೆ?
ರೋಗಗಳು ಇಲ್ಲದಿರ್ದೊಡೆ ವೈದ್ಯರಿಗೆ ಯಾವ ನೆಲೆ ?
ಸಮಾಜದಲ್ಲಿ ಸೌಹಾರ್ದತೆ ಇಲ್ಲದಿರ್ದೊಡೆ
ಮಾನವೀಯತೆಗೆ ಯಾವ ಮೌಲ್ಯ?

ಶಿವ ಶಿವಾ ಒಂದಕ್ಕೊಂದು ಪೂರಕವೋ?. ಮಾರಕವೋ?
ನಾನರಿಯ ಮಾರಕವೋ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ ನಿನ್ನಯ ಆಲೆ.

೩೧

ಕತ್ತಲು ಕಾಳರಾತ್ರಿಯಲಿ ಕಳ್ಳಕಾಕರದೇ ಕಾರುಬಾರು
ಹೊತ್ತು ಗೊತ್ತಿಲ್ಲದೆ ಇರುವ ಮೋಸಗಾರರಿಗೆ ದಿನವೆಲ್ಲಾ ಜೋರು
ಸುತ್ತಮುತ್ತಲು ಬೆತ್ತಲೆ ಪ್ರಪಂಚದ ಪುಡಾರಿಗಳದೇ ದರ್ಬಾರು
ಎತ್ತ ನೋಡಿದಡತ್ತ ಕಣ್ಣು ಕೋರೈಸುವ ಕ್ಲಬ್ಬು, ಬಾರು
ಮತ್ತಿನಲಿ ಮುಳುಗೇಳುತಿರುವ ಜಗಳದಲ್ಲಿ
ನಿಮ್ಮ ಸದ್ವಿಚಾರ,ಸದ್ಭಾವ, ಸತ್ಸಂಗದ ಆಶ್ರಯದ ತಾಣಗಳು
ಅಲ್ಲಲ್ಲಿ ಚದುರಿದ ನಕ್ಷತ್ರಗಳಂತೆ ಗೋಚರಿಸುತ್ತಿದೆಯಲ್ಲಾ ತಂದೆ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಆಟವೇನೆಂದರಿಯದೆ ಮಂಕಾಗಿ ನಿಂತೆನಯ್ಯಾ

೩೨

ಕತ್ತಲಲ್ಲಿ ನಡೆವ ಕಳ್ಳಾಟದ ಹಾವಳಿ ಕಂಡೆ.
ಮತ್ತಿನಲಿ ಮುಳುಗಿದ ತರುಣರ ತುಂಟಾಟ ಕಂಡೆ.
ಗತ್ತಿನಲಿ ಮಾಡುವ ಅವ್ಯವಹಾರದ ಆರ್ಭಟ ಕಂಡೆ.
ಅತ್ತ ಇತ್ತ ಎತ್ತ ನೋಡಿದರೂ ಅಸಭ್ಯ ಅಶ್ಲೀಲ ಅಮಾನವೀಯ
ಅಂಧಕಾರದಲಿ ಅಡಗುವ ಆಟ ಕಂಡು ನಗರಗಳಿಗಿಂತ
ಗ್ರಾಮೀಣ ಜೀವನವೇ ಉತ್ತಮವೆಂದೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩೩

ಕಸುವುಳ್ಳ ವಸುಧೆಯಲಿ ಸಂಪತ್ತು
ಹಿಡಿದು ಸಾಸಿರ ಧಾನ್ಯಗಳುಂಟು.
ಹಸಿರು ಸೊಪ್ಪು ಒಸೆವ ಉಪ್ಪು.
ಕಣ್ಮನ ಸೆಳೆಯುವ ಫಲಪುಷ್ಪಗಳುಂಟು.
ದೇಹ ಪೋಷಿಸಲು ಭಾಷೆಗೆ ನಿಲುಕದ ಸಸ್ಯ ಸಂಪತ್ತು ಉಂಟು.
ಅಶನ ವ್ಯಸನವಿರಲು ದುರ್ವ್ಯಸನಗಳ ದಾಸನಾದರೆ
ನಿನಗೆ ಸುಖ ಎಲ್ಲುಂಟು ? ಅಸಮಾಕ್ಷ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ ಕರುಣಿಸಿದ ಸಂಪತ್ತು,
ಸದುಪಯೋಗ ಪಡಿಸಿಕೊಂಡೊಡೆ ನಿನಗಾರು
ಸರಿಸಮರುಂಟು ? ಅರಿತು ನಡೆದರೆ ಸ್ವಚ್ಛ ಬಾಳುಂಟು.

೩೪

ಕಾಯಕವು ತನುವಿಂಗೆ ಸ್ಫೂರ್ತಿಯಯ್ಯಾ,
ಕಾಯಕವು ಮನಕ್ಕೆ ಸಂಪ್ರೀತಿಯಯ್ಯಾ
ಕಾಯಕದಿಂದ ಧನಧಾನ್ಯ ಸಮೃದ್ಧಿಯಯ್ಯಾ,
ಕಾಯಕದ ಶರಣಂಗೆ ಮಾನ, ಸನ್ಮಾನವಯ್ಯಾ,
ಕಾಯಕವಿಲ್ಲದ ಸೋಮಾರಿಗೆ ಅಪಮಾನವಯ್ಯಾ.
ಕಾಯಕವು ಧರ್ಮಕ್ಕೆ ಸೋಪಾನವಯ್ಯಾ.
ಕಾಯಕ ಹಿರಿದಾದಡೇನು? ಕಿರಿದಾದಡೇನಯ್ಯಾ,
ಎಂತಿದ್ದರೇನು ಕಡೆಗಣಿಸದಿರಯ್ಯಾ,
ನಿತ್ಯ ಶುದ್ಧ ಕಾಯಕದಲರ್ಪ ಸತ್ಯಶರಣಂಗೆ,
ಹುಟ್ಟು ಸಾವಿನ ಚಕ್ರದ ಭಯ ಇಲ್ಲವಯ್ಯಾ,
ಇಂತಪ್ಪ ಶರಣರಿಗೆ ಸ್ಥಿರಮುಕ್ತಿ ಶಾಶ್ವತವಹುದೆಂದ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ.

೩೫

ಕಾಯದ ಬೆಲೆ ಕಾಯಕದ ಬೆಲೆಗೆ ಸಮವೆನ್ನಬಹುದೇ?
ವೇಳೆಯ ಬೆಲೆ ಬೇಳೆಯ ಬೆಲೆಗೆ ಸರಿಎನ್ನಬಹುದೇ?
ಮಾತೆಯ ಮಮತೆ ಮಾನಿನಿಯರಲಿ ಕಾಣಬಹುದೇ ?
ಎನ್ನೊಡೆಯ ಅಘೋರ ಅಪ್ರತಿಮ ಅನಂತಫಲದಾಯಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ ನಿಮ್ಮನ್ನು
ತೊರೆದು ಅರೆಕ್ಷಣ ನಾ ಜೀವಿಸಬಹುದೇ?
ಆಗದು ತಂದೆ ಊಹಿಸಲೂ ಆಗದು.

೩೬

ಕಾವಿಧಾರಿಗಳು ಕಾಮನೆಗಳ ಕಡೆಗಣಿಸಬೇಕಯ್ಯಾ,
ಖಾದಿಧಾರಿಗಳು ಶೋಕಿಲೋಲರಾಗಬಾರದಯ್ಯಾ,
ಖಾಕಿಧಾರಿಗಳು ಕಳ್ಳ ಖದೀಮರ ಸ್ವತ್ತಾಗಬಾರದಯ್ಯಾ,
ಸಮಾಜದ ಸರ್ವತೋಮುಖ ಅಭಿವೃದ್ಧಿಗೆ
ಇವರ ಸಹಕಾರದ ಅಗತ್ಯವಿದೆಯಯ್ಯಾ,
ಸ್ಥಾನದ ಮಹತ್ವವನ್ನರಿತು ಚ್ಯುತಿ ಬಾರದಂತೆ
ನಡೆದುಕೊಂಡಾಗ ಕಾವಿಗೆ ಗೌರವ,ಖಾದಿಗೆ ಮನ್ನಣೆ,
ಖಾಕಿಗೆ ವಿಶ್ವಾಸ ಜನ ತೋರುವರಯ್ಯಾ,
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ದಕ್ಷತೆಯ ಬದ್ಧತೆಗೆ ಬಲವನಿತ್ತು ಗೆಲಿಸುವುದು ಸತ್ಯವಯ್ಯಾ,

೩೭

ಕುಲಕ್ಕೊಂದು ಜಲವಿಲ್ಲ. ಕುಲಕ್ಕೊಂದು ನೆಲವಿಲ್ಲ.
ಕುಲಕ್ಕೊಂದು ಬೆಳೆಇಲ್ಲ. ಕುಲಕ್ಕೊಂದು ಬೆಳಕಿಲ್ಲ.
ದೇವನ ಸಲ್ಲೀಲೆಯಲಿ ಕುಲವೆಂಬುದಿಲ್ಲ.
ಮಾನವ ಕುಲವೊಂದೇ. ಮಾನವೀಯತೆಗೆ ಬೆಲೆ ಒಂದೇ.

ಇದನರಿತು ಸತ್ಯದ ಹಾದಿಯಲ್ಲಿ ನಿತ್ಯ ನಡೆಯುವ
ಶರಣಂಗೆ ನಮೋ ನಮೋ ಎನುತಿರ್ದೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೩೮

ಕುರುಡು ಕಾಂಚಾಣ ಸದ್ದು ಮಾಡಿತ್ತು
ಬರಡು ಜೀವಿಗೆ ಆಧಾರವಾಗಿತ್ತು.
ಆಸೆಗಳ ರೋಷ ಹೆಚ್ಚಿಸಿತ್ತು ವೇಷಗಳ ಬಣ್ಣ ಬದಲಿಸಿತ್ತು
ಭಂಡ ಜನರ ದಂಡ ಕಟ್ಟಿಸಿತ್ತು
ಪುಂಡಪೋಕರಿಗಳ ಚೆಂಡು ಬಾಗಿಸಿತ್ತು
ಅಧರ್ಮಕ್ಕೆ ಅದು ಆಸರೆಯಾಗಿತ್ತು
ಧರ್ಮಕ್ಕೆ ಅದು ಸಂಕಟ ತಂದಿತ್ತು
ಅಜ್ಞಾನಕ್ಕೆ ಅಧಿಪತಿ ಎನಿಸಿತ್ತು
ಸುಜ್ಞಾನಕ್ಕೆ ಮುಂದೆ ಶರಣಾಗಿ ಬಿದ್ದಿತ್ತು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ ಪ್ರಜ್ವಲಿಪ
ಪಾದದಡಿ ಹೊರಳಾಡಿ ಬಿದ್ದಿತ್ತು ಕಣ್ಣಿಗೆ ಬೆಳಕು ನೀಡಿತ್ತು.

೩೯

ಕೆಟ್ಟ ಯೋಚನೆಯಲ್ಲಿ ತೊಡಗಿದವನು ದುಷ್ಟನಲ್ಲವೇ.?
ಭ್ರಷ್ಟಾಚಾರದಲ್ಲಿ ನಿರತನಾದವನು ಜೇಷ್ಠನಾಗುವನೇ?,
ದಟ್ಟ ದಾರಿದ್ರವಿದ್ದರೂ ನಿಷ್ಠೆಯಿಂದ
ಪರಧನ ಮುಟ್ಟದಾತನು ಶ್ರೇಷ್ಠನಲ್ಲವೇ ?
ನಷ್ಟದಲ್ಲಿದ್ದರೂ ಅಷ್ಟೈಶ್ವರ್ಯಕ್ಕಾಶಿಸದ ಉತ್ಕೃಷ್ಟ
ಮನುಜನಿಗೆ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಸಂಪ್ರೀತಿಯಲಿ ಸಲುಹುವನು.

೪೦

ಕೊಲೆಗಾರನಿಗಿಂತ ಕೊಲೆ ಮಾಡಿಸುವವನ
ಪಾಪದ ಪಾಲು ಬಹುದೊಡ್ಡದಯ್ಯ.
ಅರೆಕ್ಷಣದ ಚಾಡಿ ಮಾತು ಅನುಗಾಲ ಕಷ್ಟವನೊಡ್ಡುವುದಯ್ಯ,
ಕಷ್ಟಪಟ್ಟವರ ಬಿಸಿಯುಸಿರ ಜ್ವಾಲೆ ಸುಟ್ಟು ಹಾಕದೇ ಬಿಡದಯ್ಯ,
ಕುತ್ಸಿತ ಮನದ ಮತ್ಸರವ ಬಿಟ್ಟು ನಿಮ್ಮ
ನಿಮ್ಮ ಮನವ ಸಂತೈಸಿಕೊಳ್ಳಿರಯ್ಯ,
ಅದು ನಿಮ್ಮ ಬಾಳಿಗೆ ಬೆಳಕು ನೀಡುವದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೪೧

ಗೆಜ್ಜೆಯನಾದಕ್ಕೆ ಹೆಜ್ಜೆ ಹಾಕಿ ಹಲವರು ಮೋಜು ಮಾಡುವರಯ್ಯಾ .
ದುರ್ಜನರು ಹಣದ ಒಜ್ಜೆಯಲಿ
ಸಜ್ಜಾಗಿ ಸೆಜ್ಜೆಯಲ್ಲಿ ಪವಡಿಸುವರಯ್ಯಾ.
ಸಜ್ಜನರು ಇಣುಕಿ ನೋಡಿದ ಅಪರಾಧದಿ
ಇಲ್ಲದ ಆರೋಪಕ್ಕೆ ಭಾಜನರಾಗುವರಯ್ಯಾ,
ಕಾವಿ, ಖಾಖಿ, ಖಾದಿಯ ಜನ ಧರ್ಮ ರಕ್ಷಣೆ ಕಾರ್ಯದಲಿ
ಪರಿಶುದ್ಧವಾದ ನಡೆ ನುಡಿಯಲಿರ್ದೊಡೆ
ಯಾವ ಭಯವಿಲ್ಲ ಎಂದ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೪೨

ಚಾಡಿಕೋರರ ಮಾತಿಗೆ ನಾಡು ಹಾಳಾಯಿತಂತೆ.
ನೆಟ್ಟಗೆ ನಡೆದರೆ ಸೊಕ್ಕಿನವನಂತೆ.
ಬಾಗಿ ನಡೆದರೆ ಡೂಗನೆಂಬಂತೆ

ಆಡಿಕೊಳ್ಳುವವರ ನುಡಿಗೆ ತಾತ್ಸಾರವೇ ತಕ್ಕ ಮದ್ದಂತೆ,
ಕಟು ಮಾತುಗಳ ಕಡೆಗಣಿಸಿ ಮನ ಒಪ್ಪುವ
ತೆರದಿ ನಡೆದರೆ ಮೃಡ ಸಂಪ್ರೀತನಂತೆ,
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ನಂಬಿ ನಡೆದರೆ ಸರಿದು ಹೋಗುವವು ಎಲ್ಲ ಚಿಂತೆ,

೪೩

ಚಿಂದಿ ಬಟ್ಟೆಗಳ ಹೊಂದಿಸಿ ಹೊಲಿದ ಭಿಕ್ಷುಕರ
ನನಪಿಸುವ ದಿರಿಸುಗಳು ಫ್ಯಾಷನ್.
ಒಂದೊಂದು ಕಡೆ ಹರಿದು ಅಂಗಾಂಗ ಕಾಣುವ
ಹುಚ್ಚರ ನನಪಿಸುವ ದಿರಿಸುಗಳು ಫ್ಯಾಷನ್..
ಗಂಟೆಗಳು ಲಾಡಿಗಳು ಅಲ್ಲಾಡುವ ಮೋಡಿಗಳು
ಅಲೆಮಾರಿಗಳಂತೆ ತೋರುವದೊಂದು ಫ್ಯಾಷನ್.
ಅಂದಚೆಂದವೆಂದು ಅಂಗಾಂಗಗಳಿಗೆ
ಮೆತ್ತಿಕೊಳ್ಳುವ ಹಚ್ಚುಚ್ಚಾರ ಹಚ್ಚೆಗಳೊಂದು ಫ್ಯಾಷನ್.
ಲಕ್ಷಣದ ಬಾಳು ಬಿಟ್ಟು ಅವಲಕ್ಷಣ ಅಪ್ಪಿಕೊಂಡು
ಅನಾರೋಗ್ಯಕ್ಕೀಡುಮಾಡುವ ಸ್ವೇಚ್ಛಾಚಾರಕ್ಕೆಳಸುವ
ಈ ಫ್ಯಾಷನ್ ಪ್ರಿಯರ ಕಂಡು
ಎನಗೆ ಗರಬಡಿದಂತಾಯಿತ್ತಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೪೪

ಚಿಂತೆ ಎಂಬುದು ತಲೆ ತಿನ್ನುವ ಹುಳು ನೋಡಯ್ಯಾ.
ಸಮಯ ಸಂದರ್ಭಗಳೆಂಬುದು ಕೇಳದಯ್ಯಾ.
ಚಿಕ್ಕದೋ ದೊಡ್ಡದೋ ತಿಳುವಳಿಕೆಗೆ ತೋರದಯ್ಯಾ,
ಊಟೋಪಚಾರಕ್ಕೆ ಮನ ಬಾರದಯ್ಯಾ,

ಸಡಗರ, ಸಂಭ್ರಮ ಸಂತೋಷಗಳನು ನಾಶಗೊಳಸುವುದಯ್ಯಾ.
ದಿನದಿಂದ ದಿನಕ್ಕೆ ಹೆಚ್ಚುತ್ತ ದಾರಿ ಕಾಣದೆ ದಿಕ್ಕು ತಪ್ಪಿಸುವುದಯ್ಯಾ,
ಸಚ್ಚಾರಿತ್ರ್ಯದ ಸನ್ಮಿತ್ರರಲ್ಲಿ ಕೊಂಚ ಪರಿಹಾರ ಸಿಗಬಹುದಯ್ಯಾ.
ಶುದ್ಧ ಆತ್ಮ ಬಲವುಳ್ಳ ಮನುಜ ಸದಾ ನಿಶ್ಚಿಂತನಾಗಿರ್ಪನೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೮೫

ಛಲವಿಲ್ಲದ ಸಂಸಾರಕ್ಕೆ ನೆಲೆಯೆಲ್ಲಿಯದೋ ?,
ಒಲವಿಲ್ಲದ ಮದುವೆಗೆ ಬೆಂಬಲವೆಲ್ಲಿಯದೋ ?
ಸಂಸ್ಕೃತಿ ಇಲ್ಲದ ಶಿಕ್ಷಣಕ್ಕೆ ಬೆಲೆಯೆಲ್ಲಿಯದೋ ?
ಗುರು ಇಲ್ಲದ ಶಿಷ್ಯಂಗೆ ವಿದ್ಯೆಯೆಲ್ಲಿಯದೋ ?
ಗುರಿ ಇಲ್ಲದ ಕಾಯಕಕ್ಕೆ ಪ್ರತಿಫಲವೆಲ್ಲಿಯದೋ?
ಧ್ಯಾನವಿಲ್ಲದ ಪೂಜೆಗೆ ಫಲವೆಲ್ಲಿಯದೋ ?
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸದ ಜೀವಿಗೆ ಸದ್ಗತಿಯಲ್ಲಿಯದೋ?

೮೬

ಜನನಕ್ಕೆ ಮೊದಲು ನಾನು ಎಂಬುದು ಇಲ್ಲ.
ಜನಿಸಿದ ಮೇಲೆ ನಾನೇ ಎಲ್ಲ.
ನಾನು ಬೆಳೆದಂತೆ ನನ್ನದೇ ಎಲ್ಲ .
ನಿನ್ನದೇನು ಎಂಬುದು ಇಲ್ಲವೇ ಇಲ್ಲ.
ಹೆಣ್ಣು ಮಣ್ಣು ಹೊನ್ನು ಗಳಸಿ ಅನುಭವಿಸಿದೆಯಲ್ಲ.
ಕೊನೆಗಾಲದಲ್ಲಿ ಇವು ಬರುವುದೇ ಇಲ್ಲ.
ನಿತ್ಯವೂ ಪರರಿಗೆ ಪೀಡಿಸಿದೆಯಲ್ಲ.
ಸದ್ಗುರುವಿನ ಮಾತು ಕೇಳಲೇ ಇಲ್ಲ.
ಸತ್ಯದ ದಾರಿ ತಿಳಯಲೇ ಇಲ್ಲ.

ರೋಗ ರುಜಿನಗಳ ಬಾಧೆಯಲಿ ನರುಳುವೆಯಲ್ಲ.
ನಾನೆಂಬುದು ಅಳಿಯುವ ತನಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಎಂತೊಲಿಯುವನಯ್ಯಾ.

೮೭

ಜನನ ಜಗದ ಜನರಿಗೆ ಸಂಭ್ರಮದ ಒಡಲು.
ಮರಣ ಮನುಜರಿಗೆ ಕಾಣುವುದು ದುಃಖದ ಕಡಲು.
ನಡುವೆ ಜೀವನ ಕಷ್ಟನಷ್ಟಗಳ ಮಡಿಲು.
ಜನನ ಮರಣ ದೈವ ನಿರ್ಮಿತ ತೂಗುವ ತೊಟ್ಟಿಲು.
ಜೀವನದಲಿ ಜೀವಿ ಹರಿಸಬೇಕು ಸಾಧನೆಯ ಹೊನಲು.
ಮರಳಿ ಮಣ್ಣಿಗೆ ಈ ಕಾಯ ಎನ್ನುವದನರಿತು ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ ಭಜಿಸಲು
ಸುಖ ದುಃಖಕ್ಕೆ ಮನ ಬಗ್ಗದು ತನು ಕುಗ್ಗದು ನೋಡಯ್ಯ

೮೮

ಜನ್ಮವಿತ್ತ ತಾಯಿ ತಂದೆ ದೇವರಿಗಿಂತ ಮಿಗಿಲು.
ಜನಿಸಿದ ನಾಡು ನುಡಿ ಸ್ವರ್ಗಕ್ಕಿಂತ ಮಿಗಿಲು.
ಜ್ಞಾನವಿತ್ತ ಶ್ರೀ ಗುರು ಪರಬ್ರಹ್ಮನಿಗಿಂತ ಮಿಗಿಲು.
ಇವರೆಲ್ಲರ ಋಣ ಶ್ರೀಗಿರಿಗಿಂತ ಮಿಗಿಲು.
ಇದನ್ನರಿತು ಅವರನು ಆದರದಿಂ ಉಪಚರಿಸುವವರಿಗೆ
ಇದಿರು ಬರುವ ಕಷ್ಟ ನಷ್ಟ ಪರಿಹಾರ ಖಚಿತವಯ್ಯಾ.
ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಕರುಣದಿ ಹರಸಿ ಕಾಪಾಡುವುದು ಸತ್ಯವಯ್ಯಾ.

೪೯

ಜಾತಿ ಮತ ಪಂಥಗಳಮಿಗಿಲು
ಮೇಲು ಕೀಳು ಭಾವನೆಗಳಿಲ್ಲ
ದಯವೇ ಧರ್ಮವೆನ್ನುವ ಧ್ಯೆಯ,
ಸಕಲಜೀವಾತ್ಮರಿಗೂ ಲೇಸನೇ ಬಯಸುವ ಗುರಿಯುಳ್ಳ,
ವೀರಶೈವ ಲಿಂಗಾಯತ ಧರ್ಮ ಜಗದಲಿ ಶ್ರೇಷ್ಠ
ಧರ್ಮವೆಂದ ಎನ್ನೊಡೆಯ ಜಗದಾದಿ ಜಗದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೦

ಜಿದ್ದು ಮಾಡಿ ಕೌರವ ಮಣ್ಣಾದ.
ಕದ್ದು ತಂದ ರಾವಣ ಹಾಳಾದ.
ನಿದ್ದೆ ಮಾಡಿ ಕುಂಭಕರ್ಣ ತಣ್ಣಗಾದ.
ಸದುವಿನಯವೇ ಸದಾಶಿವನ ಒಲುಮೆ ಎಂಬದನರಿತಿಲ್ಲ.
ಗುರು ಹಿರಿಯರ ಬುದ್ಧಿ ಮಾತು
ಧಿಕ್ಕರಿಸಿದವರಾರೂ ಎದ್ದು ನಿಂತಿಲ್ಲ.
ಗೆದ್ದು ಬಂದಿಲ್ಲ. ಸದ್ಗುರುವಿಂಗೆ ಶರಣಾಗಿ
ಸದ್ವಿನಯದಿ ಸದಾಕಾಲ ಬಾಳಬೇಕೆಂದ
ಎನ್ನೊಡೆಯ ವಿವೇಕ ಚಿಂತಾಮಣಿ ವಿಭಿನ್ನ ರೂಪಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೧

ಜಿದ್ದು ಒಂದು ಛಲ. ಜಿದ್ದು ನಿದ್ದೆಗೆಡಿಸಿ
ಯುದ್ಧಕ್ಕೆ ನಾಂದಿಯಾಗುವುದು.
ಮಧ್ಯ ಬಂದವರಿಗೆ ಒದ್ದು ಓಡಿಸುವುದು.
ಬುದ್ಧಿ ಕಳೆದುಕೊಂಡು ಗದ್ದಲ ಎಬ್ಬಿಸುವುದು.

ಸದ್ದಿಲ್ಲದೆ ಕುಕೃತ್ಯಗಳ ರಾದ್ಧಾಂತ ಮಾಡುವುದು.
ಜಿದ್ದಾಜಿದ್ದಿನ ಕಣದಲ್ಲಿ ಮುಗ್ಧರಿಗೆ ಸಂಕಷ್ಟವಾಗುವುದು.
ಇದು ಕಾಲಕಾಲಕ್ಕೆ ಕಾಂಬ ಪ್ರಕೃತಿ ನಿಯಮ.
ಅದು ಕಾರಣ ಸಿದಮಾಡುವುದುತೆ ಮೂಕ
ಪ್ರೇಕ್ಷಕನಾಗಿರಬೇಕೆಂದ ಎನ್ನೊಡೆಯ ಜಗನ್ನಿಯಾಮಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೨

ಜೀವಜಲ ಅನಾವಶ್ಯಕ ಪೋಲು ಮಾಡದಿರ್ಪುದು.
ಅದು ಜೀವಿಗಳಿಗೆ ಅಮೃತ ಸದೃಶವಾಗಿರ್ಪುದು.
ನಾವೀಗ ಮಿತವಾಗಿ ಬಳಸಿದೊಡೆ ಹಿತವಾಗಿರ್ಪುದು.
ಪೋಲು ಮಾಡಿದೊಡೆ ಸಂಕಷ್ಟ ಬಂದೇ ಬರ್ಪುದು
ಇಂದು ಮುಂದು ಎಂದೆಂದಿಗೂ
ಉಳಿತಾಯದ ಭಾವವವಿರಲಿ.
ಅದು ಗಳಿಕೆಯ ಆಗರವೆಂಬುದು ಅರಿವಿರಲಿ.
ಅಂದಾಗ ಸಮೃದ್ಧಿಯ ಸಂಕೇತವಾಗಿ
ಬದುಕು ಸುಂದರವಾಗಿರ್ಪುದು ಎಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೫೩

ಜ್ಯೋತಿಷ್ಯ ಶಾಸ್ತ್ರ ಮೂಢನಂಬಿಕೆ ಅಲ್ಲ.
ಅದು ಜ್ಯೋತಿರ್ವಿಜ್ಞಾನದ ಕೈಗನ್ನಡಿಯಯ್ಯಾ,
ಜ್ಯೋತಿ ಜ್ಞಾನದ ಸಂಕೇತ,
ಅದು ಜ್ಯೋತಿರ್ವಿಜ್ಞಾನವಯ್ಯಾ.
ಗ್ರಹಗಳ ಚಲನೆ ಭೂಮಿಯ ತುಲಸಂಸ್ಕಾರವಿತ್ತ
ಆವಾಹನೆ ಅಲ್ಲಗಳೆಯುವಂತಿಲ್ಲವಯ್ಯ, ರವಿ ಚಂದ್ರರಿಗೆ ಗ್ರಹಣ.,

ಪರ್ವಕಾಲದ ಸಂಕ್ರಮಣ,
ಕ್ಷಣಕ್ಷಣದ ಅಧ್ಯಯನ ಒಪ್ಪಿದ ವಿಜ್ಞಾನವಯ್ಯ,
ಸಹಸ್ರಾರು ವರ್ಷಗಳ ಸುದೀರ್ಘ ಸಮಯದ
ಪೂರ್ವಜರ ಪರಿಶ್ರಮ ಅಮೂಲ್ಯ ಕೊಡುಗೆಯಯ್ಯಾ
ಅದರ ಸದ್ಬಳಕೆ ಸರ್ವರಿಗೂ ಸನ್ಮಂಗಳಕರ
ದುರ್ಬಳಕೆ ಹಾನಿಕರವೆಂದರಿಯಬೇಕೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೪

ತಪ್ಪು ಮಾಡಿ ಬೆಪ್ಪನಂತಿರಬೇಡ, ಅದು
ಇನ್ನೊಂದು ತಪ್ಪಿಗೆ ಕಾರಣವಾಗುವುದು ಮನವೇ,
ಕಪ್ಪು ಕಳಂಕಕ್ಕೆ ಎಡೆಗೊಡದೆ, ಪ್ರಾಂಜಲ ಮನದಿ
ಒಪ್ಪಿಕೊ ಮನವೇ. ನಡೆಯುವವನು ಎಡುವುದು ಸಹಜ.
ಮೃಡನೊಪ್ಪುವ ತೆರದಿ ಸಧೃಡವಾಗಿ ಅಡಿಯಿಡು ಮನವೇ,
ಬಡತನವಿರಲಿ, ಸಿರಿತನವಿರಲಿ,
ಜಡತನ ತೊರೆದು ಧೃಢಮನದಿ ಸನ್ನಡತೆಯಲಿ,
ಬಾಳುವವನೇ ನಿಜ ಶರಣನಾಗುವನೆಂದ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೫೫

ತಾಯಿಯ ಕೊಡುಗೆ ಸ್ವಾಭಿಮಾನವಯ್ಯಾ,
ತಂದೆಯ ಕೊಡುಗೆ ಮೌನ ಧ್ಯಾನವಯ್ಯ.
ಗುರುವಿನ ಕೊಡುಗೆ ಜ್ಞಾನ ಶಿವಾನುಭವವಯ್ಯಾ,
ಸ್ವಾಭಿಮಾನದಿಂದ ಬಾಳ ಎಡರು ತೊಡರು ಬಂದಾಗ
ಮೌನಕ್ಕೆ ಶರಣಾಗಿ ಧ್ಯಾನದಲಿರ್ಪನಯ್ಯ,
ಶ್ರೀಗುರು ಕರುಣಿಸಿದ ಜ್ಞಾನದಿಂದ

ಶಿವಾನುಭಾವದಲಿ ತೊಡಗಿರ್ಪೆನಯ್ಯಾ.
ಗುರು ಲಿಂಗ ಜಂಗಮ ಏಕರೂಪವಾಗಿ ಕಂಗೊಳಿಸುವ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ ನಿಮ್ಮ ಚಿದ್ಘನ
ಚರಣದಲ್ಲಿ ಎನ್ನ ತಾಯಿತಂದೆಗಳ ಕಂಡು ಆನಂದದಿಂದ,
ಆ ನಿಮ್ಮ ಶ್ರೀಚರಣಕ್ಕೆರಗಿ ನಿಶ್ಚಿಂತನಾಗಿರ್ಪನಯ್ಯ

೫೬

ತಾಯಿಯ ಒಡಲ ಕುಡಿಗಳು ನಾಡಿನ ಕಳಸಗಳಯ್ಯಾ,
ತಾಯ್ನಾಡಿನ ಸಿಡಿಲಮರಿ ಶೌರ್ಯದ ಕೇಸರಿಗಳಯ್ಯಾ.
ತಾಯಿಯ ತಾಯ್ನಾಡಿಗೆ ವಿಜಯದ ತೋರಣಗಳಯ್ಯಾ.
ನಾಡಿನ ಹಿರಿಮೆಯ ಸಾರುವ ಸಾರಥಿಗಳಯ್ಯಾ.
ನಮ್ಮ ದೇಶ ನಮ್ಮ ಜನ ನಮ್ಮಪ್ರಾಣ
ಇದು ಮಂತ್ರ ಘೋಷಣೆಯ ತಾಣವಯ್ಯಾ.
ವಿವಿಧತೆಯಲ್ಲಿ ಐಕ್ಯತೆಯ ತಾನ
ದಿಗ್ದಗಂತಕೆ ಮುಟ್ಟಿದೆ ನೋಡಯ್ಯಾ,
ಭರತ ಖಂಡದಲ್ಲಿ ದೇಶಭಕ್ತಿ ಸ್ವಾಮಿನಿಷ್ಠೆ ತುಂಬಿ ತುಳುಕಲೆಂದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೭

ತಿಂಗಳ ಬೆಳಕಿನ ಚಂದಿರನಂತೆ,
ಅಂಗಳದೊಳಗೆ ಮಂಗಳ ಕಾರ್ಯ ನಡೆದಂತೆ,
ಕಂಗೊಳಿಸುವುದು ನಿರ್ಮಲ ಮನಸು,
ಸಕಲ ಜೀವಾತ್ಮರಿಗೆ ಸನ್ಮಂಗಳ ಬಯಸುವ
ಸುಮನಸುಗಳಿಗೆ ಎನ್ನೊಡೆಯ ಸತ್ಯಾತ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸಂಪ್ರೀತಿಯಲಿ ಸಲುಹುವನು ಇದಕೆ ಸಂಶಯ ಬೇಡ.

೫೮

ತುಂಬು ಕುಟುಂಬಗಳಲ್ಲಿ ಕರುಳಿನ
ಸಂಬಂಧ ಗಟ್ಟಿಯಾಗಿರುವುದು ನೋಡಾ.
ಪ್ರೀತಿ ವಿಶ್ವಾಸ ವಾತ್ಸಲ್ಯದ ಅನ್ಯೋನ್ಯತೆಯ
ಚಿಲುಮೆ ಚಿಮ್ಮುತ್ತಿರುವುದು ಕಾಣಾ.
ಒಗ್ಗಟ್ಟಿನ ಬಲದಿಂದ ಕಷ್ಟಕಾರ್ಪಣ್ಯದ
ನೋವೇ ಕಾಣದು ನೋಡಾ.
ನಿಸ್ವಾರ್ಥ ಮನೋಭಾವದಿಂದ ನಡೆದುಕೊಂಡ
ಮನೆ ಸಮೃದ್ಧಿಯ ತಾಣವು ಕಾಣಾ.
ಸದಾಚಾರ ಸಂಪನ್ನತೆಯ ತಾಣಗಳಿಂದು ಸುಶಿಕ್ಷಿತ
ಜನರಿಂದಲೇ ಛಿದ್ರಗೊಳ್ಳುತ್ತಿರುವುದು ಕಂಡು ಬಲು
ನೊಂದೆನಯ್ಯಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೫೯

ದಯವೇ ಧರ್ಮದ ಮೂಲವಯ್ಯಾ.
ನೀತಿಯೇ ಧರ್ಮದ ಸಾರವಯ್ಯಾ,
ಕರ್ಮಗಳ ಕಳೆಯುವ ಶಕ್ತಿ ನೋಡಯ್ಯಾ,
ಹಣ,ಅಧಿಕಾರ ಅಪೇಕ್ಷಿಸುವುದು ಅಧರ್ಮವಯ್ಯಾ,
ಜಾತಿ ಧರ್ಮವಲ್ಲ, ಮತ ಧರ್ಮವಲ್ಲ, ಪಂಥ ಧರ್ಮವಲ್ಲ,
ಸ್ವಾರ್ಥ ಮನೋಭಾವವು ಧರ್ಮವಲ್ಲ.
ಆಳುವ ಪ್ರಭುಗಳಲ್ಲಿ ಧರ್ಮವು ಅಳಿದು ಹೋಗಿದೆಯಯ್ಯಾ,
ರಾಜಾಧಿರಾಜ ಪ್ರಜಾಪ್ರಭುತ್ವದಲ್ಲಿ ಧರ್ಮದ
ಕೊರತೆ ಎದ್ದು ಕಾಣುತಿದೆಯಯ್ಯಾ.
ಆಳುವವರು ಅವರೇ, ಕೇಳುವವರೂ
ಅವರೇ, ಬಾಳುವ ಪರಿ ಹೇಗಯ್ಯಾ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,
ನಾವು ಕಲ್ಯಾಣ ರಾಜ್ಯ ಕಾಣುವುದು ಯಾವಾಗ ತಂದೆ ?

೬೦

ದಾನವರಂತೆ ಬದಲಾಗುತಿದೆ ಮಾನವನ ರೀತಿ ನೀತಿ,
ಅಳಿವಿನಂಚಿನಲಿ ನಿಂತಿದೆ ಮಾನವೀಯ ಸಂಸ್ಕೃತಿ,
ತಿಳಿದೋ ತಿಳಿಯದೆಯೋ ವಿಜೃಂಭಿಸುತ್ತಿದೆ ರಕ್ಕಸ ಪ್ರವೃತ್ತಿ.
ವಿಕೃತ ಮನಗಳ ಹಾವಳಿಯಿಂದ ಮುನಿಸು ಗೊಂಡಳಾ ಪ್ರಕೃತಿ.
ಏನಿದೇನಿದು ವಿಶ್ವದೆಲ್ಲೆಡೆ ಅಸಂತೋಷ,
ಕೋಲಾಹಲ, ಕಂಪನ ತಿಳಿಯದಾಯಿತು.
ಅಪ್ಪಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಧರೆಹೊತ್ತಿ ಉರಿಯುವುದು ಕಂಡು ಬೆಚ್ಚಿ ಬೆರಗಾಗಿ
ನಿಮ್ಮ ಪ್ರಜ್ವಲಿಪ ಘನತರ ಪಾದಪದ್ಮಂಗಳ ಪಿಡಿದೆನಯ್ಯಾ.

೬೧

ದೇಹದಲ್ಲಿ ರೋಗ ಉಲ್ಬಣಸಿದರೆ
ವೈದ್ಯೋಪಚಾರ ಪಡೆಯಬೇಕಯ್ಯಾ.
ಸ್ನೇಹದಲ್ಲಿ ಬಿರುಕು ಉಲ್ಬಣಿಸಿದರೆ
ತಾಳ್ಮೆಯಿಂದ ವರ್ತಿಸಬೇಕಯ್ಯಾ .
ಇಹಪರದ ಜಿಜ್ಞಾಸೆಗೆ ಮನವೆಳಸಿದರೆ
ಸತ್ಸಂಗವ ಆಶ್ರಯಿಸ ಬೇಕೆಂದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೨

ದೇವನಲ್ಲಿ ಭಕ್ತಿ ಉಳ್ಳವರು ಧರ್ಮದ ಹೆಸರಿನಲ್ಲಿ
ಕಾದಾಟ, ಭಾಷೆಯ ರೋಷದಲಿ ಬಡಿದಾಟ,
ನೀರಿನ ನೆಪದಲ್ಲಿ ಚೀರಾಟ, ಇದು ನಮ್ಮೆಲ್ಲರ
ಅರ್ಥವಿಲ್ಲದ ಕೂಗಾಟ, ದೇಶ ನನ್ನದು, ನಾವೆಲ್ಲ ಒಂದು,

ದಯವೇ ಧರ್ಮವೆಂಬ ಮನೋಭಾವ ಪ್ರಗತಿಗೆ ತಾರಕ
ಸಂಕುಚಿತ ಮನೋಭಾವ ಪ್ರಗತಿಗೆ ಮಾರಕವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೬೩

ಧನ,ಕನಕ ಕಳೆದರೆ ಪುನಃ ಗಳಿಸಬಹುದು.
ಮನೆ ಹೊಲ ಹೋದರೆ ಮತ್ತೆ ಸಂಪಾದಿಸಬಹುದು.
ಆಡಿದ ಮಾತು, ಒಡೆದು ಮನಸು ತಿರುಗಿ ಬಾರದು.
ಮಾನವಂತನಾಗಿ ಬಾಳಲು ಸದ್ಗುರುವಿನ ಮಾರ್ಗದರ್ಶನ ಬೇಕು.
ಸತ್ಸಂಗ ಸಜ್ಜನರೊಂದಿಗೆ ವಿನಯದಿಂದ ನಡೆಯಬೇಕೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೪

ನವಮಾಸ ಕಳೆದು ನವರೂಪ ತಳೆದು ಧರೆಗಿಳಿದೆ ನೋಡಾ.
ನವರಸಗಳ ಕಾಣಲಿಕ್ಕೆ ಸದ್ಗುರುವಿನ ಸಂಸ್ಕಾರದಿ
ಚಿದ್ಘನ ಲಿಂಗವೇ ಆತ್ಮವಾಗಿರ್ಪುದು ಕಾಣಾ.
ಭಾವಪೂರ್ಣ ಮನವೇ ಜಾವಜಾವಕು
ಆತ್ಮಲಿಂಗದ ಅನುಭವ ಪಡೆಯಬೇಕು ನೋಡಾ
ಕಾಯ ಶಕ್ತಿ ಸಂಪನ್ನಗೊಂಡರೆ ಆತ್ಮವೇ
ಮೂರ್ತಗೊಂಡು ದೇವಾಲಯವಾಗುವುದು
ಕಾಣಾ ಅಪ್ರತಿಮ ಅನುಭಾವಿ ಸದ್ಗುರು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಮಹಾಲಯದ ಅರಿವು ಮೂಡಿಸಿದೆಯಾಗಿ
ನಿಮ್ಮ ಪಾದಾರವಿಂದಗಳನೆಂತು ಮರೆಯುವನಯ್ಯ

೬೫

ನಗುವಿನಾ ಮೊಗವು ಹೂ ಮೊಗ್ಗು ಅರಳಿದಂತೆ.
ಕುಗ್ಗಿದಾ ಮನಕೆ ಹಿಗ್ಗು ಚೈತನ್ಯವಿದ್ದಂತೆ.
ಬಾಳಿನಲಿ ಆಗು ಹೋಗುಗಳು ಶಿವನಿತ್ತ ವರವಂತೆ.
ಅರಿವಿನಾ ಅಂಗಳದಿ ತಿಂಗಳಾ ಬೆಳಕಿನಂತೆ.
ಸುಖವಿದ್ದಾಗ ಹಿಗ್ಗದೇ ದುಃಖ ಬಂದಾಗ
ಕುಗ್ಗದೇ ಸಮಭಾವ ಸ್ಫುರಿಸಬೇಕಂತೆ.
ಇಂತಪ್ಪ ನಡೆ ಶುದ್ಧ ನುಡಿ ಶುದ್ಧವಾಗಿರ್ಪ
ಸತ್ಯ ಶರಣಂಗೆ ಶಿರಬಾಗಿ ನಮಿಸುವೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೬೬

ನಕ್ಕುನಗಿಸುತ್ತ ತಂದೆ ಮಕ್ಕಳಿಗೆ
ಜಗಳ ಹಚ್ಚುವವರ ಕಂಡೆ.
ಚಿಕ್ಕಿ ಚಿಕ್ಕಿ ಅಳುತ್ತಾ ನೆರೆ ಮನೆಗೆ
ಬೆಂಕಿ ಇಕ್ಕುವವರ ಕಂಡೆ.
ಕಕ್ಕುಲತೆ ತೋರಿ ಅತ್ತೆ ಸೊಸೆಯರ
ಮನ ಕಲಕುವವರ ಕಂಡೆ.
ಅಕ್ಕನಾದರೇನು ಚಿಕ್ಕವ್ವನಾದರೇನು
ಕೆಟ್ಟದಾಗಿ ಆಡಿಕೊಳ್ಳುವವರ ಕಂಡೆ.
ಛಕ್ಕನೆ ವಕ್ಕರಿಸಿ ಏನೂ ಅರಿಯದಂತೆ ನಟಿಸುವವರ ಕಂಡೆ,
ಮುಕ್ಕಣ್ಣನ ಧನವನ್ನೂ ಬಿಡದೆ ಕೈ ಚಾಚಿ ನೆಕ್ಕುವವರ ಕಂಡೆ.
ಕೆಟ್ಟ ಮನದ ಇಂಥ ದುಷ್ಟರಿಗೆ ಚಟ್ಟ
ಕಟ್ಟಲು ಕೆಂಗಣ್ಣು ತೆರೆಯುವನಯ್ಯಾ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೬೭

ನವಗ್ರಹಗಳು ನಭೋಮಂಡಲದಲಿರ್ಪುವು.
ಇದರೋಳ್ ಎರಡು ಅದೃಶ್ಯ ಗ್ರಹಗಳಿರ್ಪವು.
ಮೊದಲಲಿರುವ ಎರಡು ಗ್ರಹಗಳಿಗೆ ಕಾಡುತಿರ್ಪವು,
ಕಾಡುವ ಪರಿಯೇ ಗ್ರಹಣವೆನಿಸುತಿರ್ಪುದು.
ದಾನದಿಂದ ಗ್ರಹಣದೋಷಕ್ಕೆ ಪರಿಹಾರ ದೊರೆಯುತಿರ್ಪುದು.
ಭುವಿಯಲಿ ಅಳಿಯನೆಂಬ ದಶಮಗ್ರಹವಿರ್ಪುದು.
ಬಯಸಿದ ವಸ್ತುಗಳ ಕೊಟ್ಟಾಗ ಮಾತ್ರ ಪರಿಹಾರವಿರ್ಪುದು.
ಅದುಕಾರಣ ಜಗದಲಿ ದರ್ಪತೋರುವ ದಶಮಗ್ರಹವೇ
ಬಲಿಷ್ಟವೆನುತಿರ್ಪನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೬೮

ನಡೆದೆಡೆಯಲ್ಲಿ ಮಂದಿರ ಮಸೀದಿ ಚರ್ಚುಗಳು.
ನಾಡನುಡಿಯಲ್ಲಿ ನವ ನವೀನ ಭಾಷೆಗಳು.
ಅಡಿಗಡಿಗೆ ಧರಿಸುವ ಉಡುಗೆ ತೊಡುಗೆಗಳು
ಅಡೆತಡೆಗಳಿಲ್ಲದ ಅದ್ಭುತ ಸಂಸ್ಕೃತಿ
ಸಂಪದ್ಭರಿತ ನಾಗರೀಕರು.
ಭಿನ್ನತೆಯ ಕಲಸುಮೇಲೋಗರ ದಲ್ಲಿ ಅಭಿನ್ನತೆಯ ಸವಿರುಚಿ.
ವಿವಿಧತೆಯಲ್ಲಿ ಏಕತೆ ಮೆರೆವ ದೇವಭೂಮಿ ಭಾರತ
ವಿಶ್ವದಲ್ಲೇ ಗೌರವ ಪಡೆದ ದೇಶವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೬೯

ನಮಸ್ಕಾರ ಎನ್ನುವುದು ಒಂದು ಸಂಸ್ಕಾರ.
ಇದು ವಿಧೇಯತೆ ರೂಪಿಸುವ ಚಮತ್ಕಾರ.

ಅಳಿಸುವುದು ವಿಕಾರ, ಉಳಿಸುವುದು ಮಮಕಾರ.
ಗಳಿಸುವುದು ಸಹಕಾರ. ಬೆಳೆಸುವುದು ಶಿಷ್ಟಾಚಾರ,
ಹಿರಿತನ ಕಿರಿತನ ತೋರುವುದು ಬರೀ ಆಕಾರ,
ಆತ್ಮವಿರುವುದು ನಿರಾಕಾರ. ಆತ್ಮಕ್ಕೆ ಆತ್ಮ ನೀಡುವ ಗೌರವದ
ಸತ್ಕಾರ್ಯಕ್ಕೆ ಸರಿಸಮನಾದ ಕಾರ್ಯ ಬೇರೊಂದಿಲ್ಲವೆಂದ
ಎನ್ನೊಡೆಯ ನಿರಾಕಾರ ನಿರ್ಗುಣ ನಿರವಯ ಮಹಾಲಿಂಗ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೭೦

ನಿದ್ದೆ ಬಡುಕನಿಗೆ ವಿದ್ಯೆ ಬಾರದು.
ಕದ್ದು ತಿನ್ನುವವಗೆ ಕಸುವು ಬಾರದು.
ಜಿದ್ದು ಮಾಡುವವಗೆ ಇದ್ದವಸ್ತುಗಳು ಕೆಲಸಕ್ಕೆ ಬಾರವು.
ಸದ್ದಿಲ್ಲದೆ ಸೋಮಾರಿತನ ಸೇರುವುದು.
ಇದ್ದುದರಲ್ಲಿ ಒದ್ದಾಡುವವರಿಗೆ ದೈವ ಬಲವೂ ದೊರಕದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೭೧

ನೀಚ ಬುದ್ದಿಯ ಮನುಜ
ಎಂದೆಂದಿಗೂ ಉಪಕಾರವನರಿಯಲಾರೆ.
ದುಡ್ಡಿಗಾಗಿ ಅಡ್ಡದಾರಿ ಹಿಡಿದವ ಸರಿದಾರಿಗೆ ಬರಲಾರ.
ಮಾತಿನಲಿ ಮೋಡಿ ಮಾಡಿ
ಪಂಗನಾಮ ಹಾಕದೇ ಬಿಡಲಾರ.
ಅಚ್ಚರಿಯ ತೋರಿ ಅಳುಕದೆ
ಅನ್ನಕ್ಕೆ ಕನ್ನ ಹಾಕಿ ಕಸಿಯದಿರಲಾರ.
ಸ್ನೇಹ ಸಂಬಂಧಗಳಲಿ ಸಂಕೋಚ ತೋರಿಸಿ
ಸಮಯ ಸಂದರ್ಭ ನೋಡಿ ತರುವ ಸಂಚಕಾರ.

ನಾಚಿಕೆ ಇಲ್ಲದ ಇಂತಹ ದುಷ್ಟರಿಂದ
ದೂರವಿರುವುದೇ ಶ್ರೇಯಸ್ಕರವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೭೨

ನುಡಿಯುವುದು ಸುಲಭದ ಕೆಲಸ.
ನಡೆಯುವುದು ಕಷ್ಟದ ಕೆಲಸ.
ನುಡಿದಂತೆ ನಡೆಯುವುದು ಅತೀ ಕಷ್ಟದ ಕೆಲಸ.
ನುಡಿದಂತೆ ನಡೆಯಲಾಗದೇ
ತಡವರಿಸುವುದೇ ಪುಢಾರಿಗಳ ಕೆಲಸ.
ಅಡಿಗಡಿಗೆ ಗಡಿಬಿಡಿಯ ತೋರಿ ಬಡವರಿಗೆ
ಆಸೆ ಹುಟ್ಟಿಸುವುದು ನಾಯಕರ ಕೆಲಸ.
ನಡೆ ನುಡಿಯಲ್ಲಿ ಹಿಡಿತವಿಲ್ಲದ ಅಂತಹ ನಾಯಕರ
ಹಿಡಿದು ಹೆಡೆಮುರಿಗೆ ಕಟ್ಟುವ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೭೩

ನೇಮವೆಲ್ಲಿಯದು ಕಾಮಿಗೆ ?
ನಾಮವೆಲ್ಲಿಯದು ಜೋಗಿಗೆ ?
ಭ್ರಮೆ ಎಲ್ಲಿಯದು ಸ್ವಾಮಿಗೆ ?
ತಮವಲ್ಲಿಯದು ಜ್ಯೋತಿಗೆ ?
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಭಕ್ತರಿಗೆಲ್ಲಿಯದು ಭವದ ಬವಣೆ ?

೭೪

ನೋವಿನ ಜೀವಿ, ಸಾವನು ಬಯಸುವುದು ಸಹಜ.
ನೋವಿನಲ್ಲೂ ಬದುಕಿದೆ, ಬೇವಿನಲ್ಲೂ ಸಿಹಿ ಇದೆ,
ಬದುಕಲು ಬೇಕಾದ ಮಾರ್ಗ ತೋರುವ ಕಲೆ
ಸದ್ಗುರುವಿನಿಂದ ತಿಳಿದು ಬಾಳಬೇಕೆಂದ
ಎನ್ನೊಡೆಯ ಚಿನ್ಮಯ ಚಿದ್ರೂಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೭೫

ನೋವಿಲ್ಲದ ಜೀವಿ ಅದಾವುದಯ್ಯ,
ಸಾವಿಲ್ಲದ ಜೀವಿ ಅದಾವುದಯ್ಯ,
ಭುವಿಗೆ ಬಂದ ಜೀವಿ ಸಾವು ನೋವುಗಳ
ಜೊತೆ ಜೀವಿಸಬೇಕಯ್ಯ.
ನೋವು ನಲಿವಿನಲಿ ಕಾಲ ಕಳೆಯಬೇಕಯ್ಯ,
ಭಕ್ತಿ ಭಾವ ಚಿತ್ತಶುದ್ಧಿ ಇದ್ದಜೀವಿ ಸಾವು
ನೋವು ಸಮನಾಗಿ ಕಾಣುವನಯ್ಯ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ನಿಮ್ಮ ಭವ್ಯಮೂರ್ತಿ ಕಂಡವನು ಭಾಗ್ಯಶಾಲಿಯಯ್ಯ.
ಆತ ನಿತ್ಯ ನಿಶ್ಚಿಂತನಯ್ಯ.

೭೬

ಪರೋಪಕಾರದಿಂದ ಪುಣ್ಯ ಪ್ರಾಪ್ತಿ,
ಪರಪೀಡನೆಯಿಂದ ಪಾಪ ಪ್ರಾಪ್ತಿ.
ಪರೋಪಕಾರ ನೀಡುವುದು ತೃಪ್ತಿ.
ತರವಲ್ಲ ಪರಪೀಡನೆಯ ಪ್ರವೃತ್ತಿ.

ಅದು ಕಾರಣ ಸಕಲರಿಗೂ ಲೇಸನೇ ಬಯಸುವ
ಶರಣರ ಬದುಕು ಸದಾ ಸಂತೃಪ್ತಿಯಲಿ
ಬೆಳಗುತ್ತಿರುವುದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ.

೭೭

ಪತಿಯೇ ಪರದೈವವೆಂಬ ಸತಿ ಲೇಸು.
ಅತ್ತೆಮಾವನವರನು ಹೆತ್ತವರಂತೆ ಕಾಂಬ ಸೊಸೆ ಲೇಸು,
ಅತಿಥಿಗಳನು ಆದರಿಸುವ ಸರಳ ಸ್ತ್ರೀ ಲೇಸು.
ಮನದೊಳಗೆ ತಾತ್ಸಾರಗೈಯುತ ಹೊರಗೆ ಮಂದಹಾಸ
ತೋರುವ ಮಾನಿನಿಯರಿಗೆ ಮುಂದೆ ಕಾಲನ ಹೊಡೆತ
ಕಾದಿಹುದು ಸತ್ಯವೆಂದ ಎನ್ನೊಡೆಯ ಮಹಾಕಾಲ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೭೮

ಪಟ್ಟವೇರಿದ ಸ್ವಾಮಿ ನಿಷ್ಠೆಯಿಂದ ಶ್ರೇಷ್ಠರಾದುದು ಕಂಡೆ.
ದಿಟ್ಟತನದಿಂದ ಸಮಾಜ ಒಗ್ಗೂಡಿಸುವುದು ಕಂಡೆ.
ಪಟ್ಟದ ಶ್ರೇಷ್ಠತೆಯನರಿಯದೆ ಇರ್ಪ
ಸ್ವಾಮಿ ಕೆಟ್ಟು ಹೋದುದ ಕಂಡೆ.
ಒಟ್ಟಾಗಿರುವ ಗಟ್ಟಿ ಸಮಾಜಕ್ಕೆ ಪೆಟ್ಟುಕೊಡುವ ಭ್ರಷ್ಟರ ಕಂಡೆ.
ಉನ್ನತ ಸಮಾಜದಲಿರ್ದು ಅಸಭ್ಯವಾಗಿ
ವರ್ತಿಸುವ ಮುಠ್ಠಾಳರ ಕಂಡೆ.
ಕಷ್ಟಗಳನೊಡ್ಡುವವರ ಕಂಡು ಬಲು ನೊಂದೆ.
ಅಪ್ಪಾ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ
ಇಂಥವರಿಗೆ ಚಟ್ಟ ಕಟ್ಟಲು ನೀನೇ ಸರ್ವಸಮರ್ಥನಯ್ಯಾ.

೭೯

ಪ್ರಕೃತಿಯಲಿ ಮೃಗಶಿರ ಕಾಲಿಡಲು,
ಭುವಿಯಲ್ಲಿ ತಂಪು ಕಂಪು ಅರಳುವ ಸಮಯವಯ್ಯ.
ವಿಕೃತ ಬಯಕೆಗಳಿಗೆ ಪ್ರಾಣಿಗಳ ಕೊಂದು,
ತಿಂದು ತೇಗವುದು ಅದಾವ ನ್ಯಾಯವಯ್ಯ,
ಸುಕೃತವಹುದು ಮಾನವಂಗೆ,
ದೇವ ನೀಡಿದ ಬೆಲ್ಲ ಹಿಂಗು ಸವಿದು
ಆರೋಗ್ಯ ಪರಿಪೂರ್ಣ ಹೊಂದಿರಯ್ಯ,
ಅಕೃತ್ಯಗಳ ತೊರೆದು ಸುಸಂಸ್ಕೃತರಾಗಿ,
ಸಕಲರಿಗೂ ಲೇಸನೇ ಬಯಸುವ
ಕೂಡಲಸಂಗನ ಶರಣರಾಗಿರಯ್ಯ,
ಕುಕೃತ್ಯಗಳನೆಸಗುವ ದುರಾಚಾರಿಗಳನು
ಎಂದೆಂದಿಗೂ ಒಪ್ಪನು, ಕ್ಷಮಿಸನು ನಮ್ಮಪ್ಪ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ.

೮೦

ಪ್ರೀತಿ ಗುರುವಿನ ಮೇಲಿನದಾದರೆ ಗೌರವ.
ಹೆತ್ತವರಿಗೆ ತೋರಿದರೆ ವಾತ್ಸಲ್ಯ.
ಮಕ್ಕಳಿಗೆ ತೋರುವುದು ಮಮತೆ.
ನಿರ್ಗತಿಕರಿಗೆ ಕಂಡರೆ ದಯೆ.
ಸಮಾಜದಲ್ಲಿ ಬಳಸಿದರೆ ಕಳಕಳಿ.
ಸಂಗಾತಿಯ ಜೊತೆಯಾದರೆ ಪ್ರೇಮ.
ದೇವನ ಒಲುಮೆಗಾದರೆ ಭಕ್ತಿ.
ಅನಂತರೂಪ ತಾಳುವ ಈ ಪ್ರೀತಿ ಪಾವಿತ್ರ್ಯ
ಯುಕ್ತವಾಗಿದ್ದಾಗ ತಕ್ಕ ಫಲಪ್ರಾಪ್ತಿ ಸಹಜವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೮೧

ಪುಷ್ಪದಲ್ಲಿಯ ಪರಿಮಳದಂತೆ,
ಮಧುವಿನಲ್ಲಿರುವ ಮಧುರತೆಯಂತೆ,
ಶಶಿಯಲ್ಲಿರುವ ಶೀತಲದಂತೆ,
ಭಕ್ತಿಯಲ್ಲಿರುವ ಮುಕ್ತ ಮನದಂತೆ ಇರುವ
ಸ್ನೇಹ ಶಾಶ್ವತವಾಗಿರುವುದು.
ಅಂತಹ ಸ್ನೇಹಕ್ಕೆ ದೈವಕೃಪೆ ಅನ್ನಬಹುದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೮೨

ಫಲಾಪೇಕ್ಷೆಯ ಬಯಸಿ ನಡೆಯುತ್ತಿದೆ ಜನ.
ಛಲವಿಲ್ಲ, ಒಲವಿಲ್ಲ, ಬಲವಿಲ್ಲ, ನೆಲೆಯಿಲ್ಲ,
ತಳವಿಲ್ಲ, ನೀತಿಯಿಲ್ಲ ರೀತಿಯಿಲ್ಲ,
ಇಂಥ ಶ್ರಮವಿಲ್ಲದ ಧನ ಅದೆಷ್ಟು ನೆಮ್ಮದಿ ನೀಡುವುದಯ್ಯಾ,
ಸುಳ್ಳು, ಕಪಟ, ಮೋಸ, ವಂಚನೆಯ ಧನ
ಪಾಪ ಕೂಪಕ್ಕೆ ತಳ್ಳುವದಲ್ಲದೆ ಸತ್ಕಾರ್ಯಕ್ಕೆ ಸಲ್ಲದಯ್ಯಾ.
ಸದಾ ಶಿವಾನುಗ್ರಹ ಬಯಸುವ ಮನ
ದುರಾಸೆಗೊಳಗಾಗದಿರ್ದೊಡೆ ಮಹಾ ಮಹಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕೈ ಹಿಡಿದು ಕಾಪಾಡುವನು ಸಂಶಯಬೇಡ.

೮೩

ಬರೆದಂತೆ ಓದುವ ಭಾಷೆ ಕನ್ನಡ.
ಓದಿದಂತೆ ಬರೆಯುವ ಭಾಷೆ ಕನ್ನಡ.
ಬರೆಯುವುದು ಒಂದು, ಓದುವುದೇ ಇನ್ನೊಂದು,
ಅರ್ಥವಾಗುವುದು ಮತ್ತೊಂದು ತಿರುಗು ಮುರುಗು

ಭಾಷೆಯ ಕೊರಕಿನಲಿ ಬಿದ್ದು ಮಕ್ಕಳು ಮರುಗುವುದು,
ಸೊರಗುವುದು ಕಂಡೆ. ಸರಳ ಸಂಪದ್ಭರಿತ ಕನ್ನಡ
ಅಚ್ಚು ಮೆಚ್ಚಿನ ಭಾಷೆ ನನ್ನದೆಂದು ಹೆಮ್ಮೆ ಪಡುತಿರ್ದೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೮೪

ಬಾಯಿಯಲ್ಲಿ ರಾಮ್ರಾಮ್, ಬಗಲ್ಮೇ ಚೂರಿ
ಇಂಥವರಿಂದ ದೂರವಿರಬೇಕಯ್ಯ.
ಸ್ವಾರ್ಥಕ್ಕಾಗಿ ಪರರ ನೋಯಿಸುವ
ಪರಮ ಪಾಪಿಗಳಿರುವರಯ್ಯ.
ನಯವಂಚಕರ ಸಂಚಿಗೆ ಕೊಂಚವೂ ಒಳಗಾಗದಿರಯ್ಯ,
ಅತ್ಮ ಶಕ್ತಿಯಿಂದ ಎಲ್ಲಕುತಂತ್ರಿಗಳನ್ನು ಎದುರಿಸಲು
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ ನಿತ್ಯ ಭಜಿಸಿರಯ್ಯ

೮೫

ಬಾಲ್ಯದಲ್ಲಿ ಹುಡುಗಾಟ,
ಹರೆಯದಲಿ ಪ್ರೀತಿ ಪ್ರೇಮದಾಟ,
ಯೌವನದಲಿ ಹೆಂಡತಿ ಮಕ್ಕಳ ಕಾಟ,
ನಡುವಯಸ್ಸಿನಲ್ಲಿ ಸಂಪತ್ತಿಗೆ ಅಲೆದಾಟ.
ಇಳಿವಯಸ್ಸಿನಲಿ ನೆಮ್ಮದಿಯ ಹುಡುಕಾಟ.
ಮುದಿತನದಲಿ ಎಲ್ಲಕ್ಕೂ ಪರದಾಟ.
ಶಿವಪೂಜೆಗೆ ಸಮಯವಿಲ್ಲ ಎಂಬ ಗೊಣಗಾಟದಲಿ
ಪೂರ್ಣಾಯುಷ್ಯ ಕಳೆಯುವ ಜನರ ನೋಡಿ
ಮುಸಿಮುಸಿ ನಗೆಯ ಬೀರುವ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೮೬

ಬೇವು ಬೆಲ್ಲ ಸವಿದು, ನೋವು ನಲಿವುಗಳ ಮರೆತು
ನವ ಮನ್ವಂತರವ ಸ್ವಾಗತಿಸೋಣ.
ಅಧರಕ್ಕೆ ಕಹಿಯಾದರೂ ಬೇವು, ಉದರಕ್ಕೆ ಸಿಹಿಯಲ್ಲವೇ?
ಮಧುರ ಬಾಂಧವ್ಯಕ್ಕೆ ಬಂದೆರಗುವ ನೋವುಗಳು,
ಮುದದಿ ಬಲವ ನೀಡಿ ಗಟ್ಟಿಗೊಳಿಸುವುದಿಲ್ಲವೇ ?
ಯುಗದ ಕಾಟ ಯುಗಾದಿಯಂದು ಬೇವು ಬೆಲ್ಲ ಸ್ವೀಕರಿಸಿ
ಕಷ್ಟ ನಷ್ಟಗಳ ನಿಷ್ಠೆಯಿಂದ ಅನುಭವಿಸುವ ಶ್ರೇಷ್ಠ
ಶರಣರಾಗಿರೆಂದ ಜಗದಾದಿ ಜಗದ್ಗುರು ಎನ್ನೊಡೆಯ
ಮಹಾರುದ್ರ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೮೭

ಬೆರಗುಗೊಳಿಸುವ ತರತರದ ವಿದ್ಯಮಾನಗಳ ಕಂಡೆ,
ಬೆಚ್ಚಿ ಬೀಳಿಸುವ ಹುಚ್ಚುಚ್ಚಾರ ವಾರ್ತೆಗಳ ಕೇಳಿದೆ.
ಮಲೀನಗೊಂಡ ಮನಸುಗಳ
ಆರೋಪ ಪ್ರತ್ಯಾರೋಪಗಳ ನೋಡಿದೆ.
ಮಂಗನ ಕೈಯಲ್ಲಿ ಮಾಣಿಕ್ಯವಿದ್ದ ಸ್ಥಿತಿ ಪರಿಸ್ಥಿತಿ
ಇದಾಯಿತಲ್ಲಾ ಎಂದು ದಿಗ್ಭ್ರಾಂತನಾದೆನಯ್ಯಾ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ
ಇದೆಂಥ ನಿಮ್ಮ ಲೀಲಾವಿನೋದವಯ್ಯ.

೮೮

ಬೆಚ್ಚನಾ ಮನೆ ಇದ್ದೇನು ಫಲ ?
ಸ್ವಚ್ಛ ಆರೋಗ್ಯವಿಲ್ಲದನ್ನಕ್ಕ.
ಉಚ್ಚಮನೆತನದ ಸತಿಯಿದ್ದೇನು ಫಲ?

ತುಚ್ಛಗುಣಗಳಳಿಯದನ್ನಕ್ಕ.
ಅಚ್ಚಳಿಯದಂಥ ಮಾತಾಡಿದರೇನು ಫಲ?,
ಸಚ್ಚಾರಿತ್ರ್ಯವಿಲ್ಲದನ್ನಕ್ಕ.
ವೆಚ್ಚಕ್ಕೆ ಹಣವಿದ್ದೇನು ಫಲ? ನಿಚ್ಚಳ ಮನವಿಲ್ಲದನ್ನಕ್ಕ.
ಜನಮೆಚ್ಚಿಗೆಗೆ ನೂರು ದೈವಕ್ಕೆರಗಿದಡೇನು ಫಲ ?
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಮನಮುಟ್ಟಿ ಪೂಜಿಸದನ್ನಕ್ಕ.

೮೯

ಬೆಟ್ಟದಷ್ಟು ಆಸೆಗಳ ಹೊತ್ತು,
ದುಷ್ಟ ವಿಚಾರ ಮನದಲಿ ತುಂಬಿ,
ಕೆಟ್ಟ ಕೆಲಸಗಳ ಮಾಡುತಿರ್ದೊಡೆ ಒಳ್ಳೆಯ
ಫಲವೆಂತು ದೊರೆಯುವುದಯ್ಯಾ
ಅಟ್ಟಹಾಸವ ಬಿಟ್ಟು ಕಿರುಕುಳ ಕೊಡುವ ಕೆಟ್ಟ
ಗುಣಗಳು ತೊರೆದು ಮನಮುಟ್ಟಿ
ಸಮಭಾವದಿ ಸರ್ವರನು ಕಾಣುತಿರ್ದೊಡೆ
ಪಾಪ ಕ್ಷಯಗೊಳ್ಳುವುದಯ್ಯಾ,
ಕರ್ಮದ ಪರಿಣಾಮ ಕಳೆಯಲು
ಪರಿಣಾಮಕಾರಿ ಕಾರ್ಯಬೇಕೇ ಬೇಕಯ್ಯಾ.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಕರುಣೆ ತೋರುವನಯ್ಯಾ.

೯೦

ಭಾವನೆಗಳಿಲ್ಲದವನಿಗೆ ಮಾನವನೆನ್ನಬಹುದೇ?
ನೋವಿನಲ್ಲೂ ಗೆಲುವನರಸುವುದು ಸದ್ಭಾವ.
ಸಾವಿನಲ್ಲೂ ನಗೆಮೊಗ ತೋರುವನು ಮಹಾನುಭಾವ.

ನೋವು ನೀಡಿ ನಕ್ಕು ನಲಿವುದು ಅಸುರೀಭಾವ,
ಜಾವ ಜಾವಕೂ ಕೇಡುಬಯಸುವವನು ಮತ್ಸರಿ ಮನೋಭಾವಿ,
ದೌರ್ಭಾಗ್ಯ ಅರಸಿ ಬರುವಂತಹ ಕುತ್ಸಿತ ಭಾವನೆಗಳು,
ನೋವು ನೀಡುವುದು ಖಚಿತವೆಂಬುದನು ಅರಿಯದಿರ್ದೊಡೆ
ಮಾಡಿದ ಫಲ ಅನುಭವಿಸಲೇಬೇಕೆಂದ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೬೧

ಮರೆತು ಗುರುವಿನಾ ! ತೊರೆದು
ಲಿಂಗವಾ ಜರಿದು ಜಂಗಮವಾ !
ಮೆರೆವ ಮೂಢರು ಅದೆಂತು ವೀರಶೈವರು,
ಅದೆಂತು ಶರಣರು, ಧರ್ಮ ಪರಿಪಾಲನೆ ಇಲ್ಲದ
ವೀರಶೈವ ಲಿಂಗಾಯತ ಸಂತತಿಗೆ ಅದೆಂತು ಭಕ್ತಿ,
ಅದೆಂತು ಮುಕ್ತಿ ಇದನೊಪ್ಪ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೬೨

ಮಡಿ ಮೈಲಿಗೆ ಮನಕ್ಕಂಟಿದುದು ನೋಡಾ.
ಮೈಲಿಗೆ ಜಾತಿಗಂಟಿ ಬಂದುದಲ್ಲ ಕಾಣಾ.
ತನು ಸ್ವಚ್ಛವಾಗಿರ್ದು ಮನ ಸ್ವಚ್ಛವಿಲ್ಲದಿರೆ ಅದೆಂತು ಮಡಿ.?
ಆಡುವ ನುಡಿ ಶುದ್ಧವಾಗಿರ್ದು ನಡೆಯುವ
ನಡೆ ಅಶುದ್ಧವೆಂದರೆ ಅದೆಂತು ಮಡಿ. ?
ಗಂಡಗಂಜಿಸಿ ಹಲವರ ಜೊತೆ
ಕೂಡುವ ಸತಿ ಎಂತು ಗರತಿ.?
ತನು ಮನ ಶುದ್ಧವಾಗಿರ್ಪುದೇ ಮಡಿ,
ಮನದ ಮೈಲಿಗೆ ಕಳೆಯದಲ್ಲದೆ ಎನ್ನೊಡೆಯ

ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಪ್ರಜ್ವಲಿಪ ಪರಮ ಪಾವನ ದಿವ್ಯಪಾದಂಗಳು
ದೊರೆಯುವುದು ಅಸಾಧ್ಯವಯ್ಯಾ

೬೩

ಮನೆಯಾಯಿತು ಮುಗಿಯಲಿಲ್ಲ.
ಮಡದಿಯಾದಳು ತಡೆಯಲಿಲ್ಲ.
ಮಕ್ಕಳಾಯಿತು ಹಿಡಿಯಲಿಲ್ಲ.
ಸಂಪತ್ತಾಯಿತು ಸರಿ ಹೋಗಲಿಲ್ಲ.
ಮುಪ್ಪಾಯಿತು ಮರೆಯಾಗಲಿಲ್ಲ.
ದಿನ ಕಳೆಯುತಿವೆ ದೇವನ ನೆನಪೇ ಇಲ್ಲ.
ಯಮ ಬಂದು ಎದುರು ನಿಂತಾಗ ಗಕ್ಕನೆ ಗರಬಡಿಯಿತಲ್ಲ.
ಮುಂದಿನ ಹಾದಿಯ ಯೋಚಿಸಲಿಲ್ಲ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಸ್ಮರಿಸದೇ ಜನ್ಮ ವ್ಯರ್ಥವಾಯಿತಲ್ಲ

೬೪

ಮತಿಯುಳ್ಳ ಸುತ ಲೇಸು.
ನೀತಿಯುಳ್ಳ ಸೊಸೆ ಲೇಸು.
ಅತ್ಯಾಸೆ ಇಲ್ಲದ ಸತಿಲೇಸು.
ಹೊತ್ತು ಹೊತ್ತಿಗೆ ತಿದ್ದಿ ಬುದ್ಧಿ
ಹೇಳುವ ಸದ್ಗುರು ಬಳಿ ಇರ್ದೊಡೆ
ಕೈಲಾಸವೇ ಭುವಿಗಿಳಿದಂತೆ ಎಂದ ಎನ್ನೊಡೆಯ
ಮಹಾದೇವ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೯೫

ಮಕ್ಕಳ ಅಭಿವೃದ್ಧಿ ಬಯಸುವ ತಂದೆ.
ಶಿಷ್ಯನ ಶ್ರೇಯಸ್ಸು ಬಯಸುವ ಸದ್ಗುರು.
ನಾಡಿನ ಸಂರಕ್ಷಣೆ ಬಯಸುವ ಅರಸು.
ದೇಶದ ಏಳ್ಗೆಗೆ ಶ್ರಮಿಸುವ ಪ್ರಜೆಗಳಿರುವಾಗ ಸದಾ
ಸುಭಿಕ್ಷ ತುಂಬಿ ತುಳುಕುವುದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೯೬

ಮಕ್ಕಳಿಲ್ಲದ ಮನೆಯಲ್ಲಿ ಕಕ್ಕುಲತೆ ಕಾಣಬಹುದೇ ?
ಸಕ್ಕರೆಯ ಮಾಧುರ್ಯ ಲವಣದಲಿ ನಿರೀಕ್ಷಿಸಬಹುದೇ?.
ಸಿಕ್ಕ ಸಿಕ್ಕವರಲಿ ಅಕ್ಕರತೆಯ ಅರಸಬಹುದೇ?
ಅಪ್ಪಾ.... ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಅಕ್ಕರೆಯಿಂದ ಕಕ್ಕುಲತೆಯ ತೋರುವ ನಿಮ್ಮನು
ತೊರೆದು ಅರೆಕ್ಷಣವಾದರೂ ನಾ ಜೀವಿಸಿರಬಹುದೇ?

೯೭

ಮತಿಯುಳ್ಳ ಸತಿಯವಳು ಶ್ರೀಮತಿ,
ನೀತಿ ರೀತಿಯ ಸಂಸಾರಕೆ ನೀನೇ ಶ್ರೀಪತಿ,
ದೇಹದಾಹಕಿರಲಿ ಕಡಿವಾಣ.
ಇಹಪರದ ಚಿಂತನವಿರಲಿ ಸಂಪೂರ್ಣ,
ಭೋಗಭಾಗ್ಯದ ಜೊತೆಗಿರಲಿ ದೈವಸೇವೆಯ ಹಂಬಲ,
ಗುರು ಲಿಂಗ ಜಂಗಮಕೆ ಬಾಗು,ಅದುವೇ ಬಾಳಿಗೆ ಬೆಂಬಲ,
ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ.
ಶಾಂತಮೂರ್ತಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶನ ಅಖಂಡ ಕರುಣೆ ದೊರೆಯುವುದು ಬಾಳಿಂಗೆ..

೯೮

ಮನವನೋಯಿಸಿ, ಮಜ್ಜನಗೈದಡೇನು ಫಲ..
ವಿಕಾರವಳಿಯದೆ, ವಿಭೂತಿ ಬಳಿದಡೇನು ಫಲ,
ಗರ್ವವಳಿಯದೆ,ಗಂಧಾಕ್ಷತೆ ನೀಡಿದಡೇನು ಫಲ.
ಪರರ ಪೀಡಿಸಿ ಪತ್ರಪುಷ್ಪಗಳ ಏರಿಸಿದೊಡೇನು ಫಲ.
ಮಾತು ಮೃದುವಿಲ್ಲದೆ, ಮಂತ್ರ ಪಠಿಸಿದೊಡೇನು ಫಲ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ
ಮನಶುದ್ಧವಿಲ್ಲದೊಡೆ ನಿನ್ನ ಚರಣ ದೊರೆಯದಯ್ಯಾ.
ದೊರತಡೇನು ಫಲವಿಲ್ಲವಯ್ಯ.

೯೯

ಮನಬಿಚ್ಚಿದ ನಸುನಗೆಯ ಮಾತಿನಿಂ
ಹೊಚ್ಚ ಹೊಸ ಚೈತನ್ಯ ಹೆಚ್ಚುವುದಯ್ಯ.
ಮನಚುಚ್ಚುವ ಹುಸಿನಗೆಯ ಮಾತಿನಿಂ
ಇರುವ ಚೈತನ್ಯ ಉಡುಗಿ ಹೋಗುವುದಯ್ಯ.
ಮನ ಮೆಚ್ಚುವ ಬಿಸಿಯುಸಿರಿನ ಬೆಚ್ಚನೆಯ ಮಾತಿನಿಂ
ನವವಧುವಿಂಗೆ ಬಸಿರು ತುಂಬುವುದಯ್ಯ.
ಮಾತು ಮನ ಒಡೆಯದಂತಿರಬೇಕಲ್ಲದೆ
ಮನ ಬೆಸೆಯುವಂತಿರಬೇಕಯ್ಯ,
ಮಾತು ಮನಂಗಳು ಲಿಂಗ ಮೆಚ್ಚಿ ಅಹುದಹುದು
ಎನ್ನುವಂತಿರ್ದೊಡೆಶ ಪ್ರಿಯ ಶ್ರೀ ದೇವಸೂಗೂರ
ವೀರೇಶ ಸದಾ ಕರುಣೆಯಿಂ ಪೊರೆಯುವನಯ್ಯ.

೧೦೦

ಮಗ್ಗುಲಲ್ಲಿ ಮುಳ್ಳಿದ್ದರೂ ಹಿಗ್ಗಿ ಅರಳುವುದು ಗುಲಾಬಿ.
ನುಗ್ಗಿ ಬರುವ ಕಷ್ಟಗಳಿಗೆ ಅಂಜದಿರು ಎಳ್ಳಷ್ಟು.
ಕುಗ್ಗದಿರು ದುಃಖಕ್ಕೆ, ಹಿಗ್ಗದಿರು ಸುಖಕ್ಕೆ,
ಸತ್ಯದಾ ಹಾದಿಯಲ್ಲಿ ಶರಣರಾ
ನೆನಹಿನಲಿ ಮುನ್ನುಗ್ಗಿ ನಡೆ ಮನವೇ.
ಒಣ ಚಿಂತೆಯಲಿ ಭ್ರಾಂತಿಗೊಳಗಾಗದೇ
ತ್ರಾಣ ನೀಡುವ ಜಾಣದೇವ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಅನುದಿನ ಅನುಕ್ಷಣ ಭಜಿಸು
ಕ್ಷಣಾರ್ಧದಲ್ಲಿ ಪರಿಹಾರವಿಹುದು

೧೦೧

ಮತಿಗೆಟ್ಟ ಜಾತಿ ಮತಗಳ ತಿಕ್ಕಾಟ.
ಪಥಗೆಟ್ಟ ರೀತಿ ನೀತಿಗಳ ಜಗ್ಗಾಟ.
ಭ್ರಾಂತಿಗೆಟ್ಟ ಜನರ ಬಡಿದಾಟ.
ಅರ್ಥ ಗೆಟ್ಟ ಧರ್ಮದ ಕಿತ್ತಾಟ.
ಶಿವ ಶಿವಾ ನಿರ್ದಯಿ ಜನಗಳ ಬಾಯಲ್ಲಿ
ಧರ್ಮದ ಹುಡುಕಾಟ ಕಂಡು ನಾ ಮೂಕನಾದೆನಯ್ಯಾ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೦೨

ಮಸಣದಲ್ಲಿ ಮರಣೋತ್ತರ ಕ್ರಿಯೆಯಲ್ಲಿದ್ದ
ಮನುಜನ ಮನ ಜೀವನದಲ್ಲಿ ಜಿಗುಪ್ಸೆ ಹೊಂದುವುದಯ್ಯಾ,
ಮರುಘಳಿಗೆ ಮಾಯೆಗೊಳಗಾಗಿ ಹಣವಿಲ್ಲದವನು
ಹೆಣದಂತೆ, ಎಂದು ಮಾಡಬಾರದ ಕೆಲಸ ಮಾಡಿ

ಹಣಗಳಿಸುವ ಹುನ್ನಾರ ನಡೆಸುವುನಯ್ಯಾ.
ಸ್ಮಶಾನ ವೈರಾಗ್ಯ ಭಾವ, ಸಂದರ್ಭಕ್ಕೆ ತಕ್ಕಂತೆ
ಬದಲಾವಣೆ ತಂದುಕೊಳ್ಳುವುದೇ
ಮಾನವ ಧರ್ಮವೆನಿಸಿಹುದಯ್ಯಾ,
ಸತ್ಸಂಗ ಸದ್ಭಾವ ಸತ್ಕರ್ಮಗಳಿಂದ ಸ್ವಲ್ಪ ಸರಿದರೂ
ಸತ್ವ ಕಳೆದು ತಾಮಸ ಭಾವ ತುಂಬಿ ಕೊಳ್ಳುವುದಯ್ಯಾ.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ನಿಮ್ಮ ಸದ್ಭಕರ ಸಂಗದಲ್ಲಿ ಸದಾಕಾಲ ಎನ್ನನಿರಿಸಯ್ಯಾ.

೧೦೩

ಮರುಳುಮಾತಿನಲಿ ಕೊರಳು ಕೊಯ್ಯುವ
ಜನ ಜಗವೆಲ್ಲ ತುಂಬಿರುವರಯ್ಯಾ,
ಕರುಳು ಹಿಂಡುವ ನೋವು ದಿನ
ಬೆಳಗಿನ ಸುದ್ದಿಗಳಾಗಿವೆಯಯ್ಯಾ,
ಇರುಳು ಕಂಡ ಬಾವಿಯಲ್ಲಿ ಹಗಲು
ಬೀಳುವಂತಾಗಿದೆಯಯ್ಯಾ,
ಸರಳ ಸಜ್ಜನಿಕೆಯ ಜನಕೆ
ಉಳಿಗಾಲವಿಲ್ಲದಂತಾಗಿದೆಯಯ್ಯಾ.
ಅಪ್ಪಾ ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ಈ ಅಸಮಾನತೆಯ ಬೇಗ ಹೊಸಕಿ ಹಾಕಯ್ಯಾ,

೧೦೪

ಮಳೆ ಬಂದಾಗ ಇಳೆಯೆಲ್ಲ ನಳನಳಿಸುವುದು.
ಬೆಳೆ ಬಂದಾಗ ಜೀವಿಗಳಲ್ಲ ಕಳೆ ಉಕ್ಕುವುದು.
ಕರುಳ ಬಳ್ಳಿಯಲ್ಲಿ ಕಕ್ಕುಲತೆಯ ಫಲವಿಹುದು.
ತೆರೆದ ಮನದಲ್ಲಿ ತಳಮಳವು ಕಾಣದು.

ಕಲುಷಿತ ಭಾವದಲ್ಲಿ ಕಲ್ಮಷವು ತುಂಬುವುದು.
ಸದ್ಭಾವದಲಿ ಸಂಪನ್ನತೆ ಸಂಭ್ರಮಿಸುವುದು.
ಇದನರಿತು ನಡೆವ ಸರಳ ಸಜ್ಜನರಿಗೆ ಎನ್ನೊಡೆಯ
ಕರುಣಾವಾರಿಧಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಬಲ ದೊರೆಯುವುದು.

೧೦೫

ಮಾತು ಮಿತವಾಗಿರಲಿ, ಹಿತವಾಗಿರಲಿ ಕರ್ಣಂಗಳಿಗೆ.
ಅತಿಯಾಗದಿರಲಿ ಗುರು ಹಿರಿಯರಲಿ,
ಸತ್ಯಕೆ ಜೊತೆಯಾಗಿರಲಿ, ಮಿಥ್ಯಕೆ ಬಾಗದಿರಲಿ.
ಜೋತುಬೀಳದಿರಲಿ ವಿವಾದಗಳಲಿ.
ನೀತಿಯ ಕೈ ಹಿಡಿದು ರೀತಿಗೆ ಆಸರೆಯಾಗುವ,
ಮಾತಿಗೆ ಮನ್ನಣೆ ಇಹುದೆಂದ ಎನ್ನೊಡೆಯ ಪ್ರಣವ
ಪ್ರಚ್ಛನ್ನ ಮೂರ್ತಿ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦೬

ಮಾತೆಯ ಹಿತವಚನಗಳೇ ಮೊದಲ ಪಾಠ.
ಶಿಕ್ಷಕ ನೀಡುವ ಶಿಸ್ತು ಬದ್ಧ ಶಿಕ್ಷಣವೇ ಸಂಸ್ಕೃತಿಯ ಪಾಠ.
ಸದ್ಗುರು ಬೋಧಿಸುವ ಸತ್ಯ
ವಚನಗಳೇ ನಿರ್ಣಾಯಕ ಪಾಠ.
ಮೂರು ಪಾಠಗಳ ಅಧ್ಯಯನ ಸುಸಂಸ್ಕೃತ
ಸಮಾಜದ ನಿರ್ಮಾಣಕ್ಕೆ ಪೂರಕವಯ್ಯಾ.
ಕಲ್ಯಾಣ ರಾಜ್ಯದ ಉದಯಕ್ಕೆ ಪಾಠ, ಮಠ, ಘಟಗಳ
ಪಾತ್ರ ಹಿರಿದಾದುದು ಎಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦೭

ಮಾತು ಮೆದುವಾಗಿರ್ದೊಡೆ ಮನಸು ಅರಳುವುದು.
ಚಿಗುರೊಡೆದು ಸಂಬಂಧ ಗಟ್ಟಿ ಗೊಳಿಸುವುದು.
ಮಾತು ಹಿತವಾಗಿರ್ದೊಡೆ ಸಂತೋಷ ತರುವುದು.
ಜೊತೆಗೂಡಿಸಿ ಮುದನೀಡುವುದು,
ಮಾತು ಒರಟಾಗಿರ್ದೊಡೆ ಒಡಕು ಮೂಡುವುದು.
ಕೆಡುಕಿಗೆ ದಾರಿ ಮಾಡಿಕೊಡುವುದು.
ಮಾತು ಕೆಣಕುವಂತಿರ್ದೊಡೆ ಹೊಣೆಗಾರಿಕೆ ಕಳಚುವುದು
ಬಾಡಿದ ಮುಖವೂ ಅಣಕಿಸುವಂತಾಗುವುದು.
ಮಾತನಾಡುವ ಮುನ್ನ ಅದರ ಪರಿಣಾಮವನ್ನರಿತಿರಬೇಕೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೦೮

ಮೀಸೆ ಬಂದಮೇಲೆ ಮಾತೆಗೆ
ಮೋಸಮಾಡುವ ಮಗನೇತಕಯ್ಯಾ,
ಸಿರಿತನ ಬಂದ ಮೇಲೆ ಬಡತನ
ಮರೆಯುವಾತ ಸಂಪನ್ನನೇನಯ್ಯಾ?
ತೀರ ತಲುಪಿದ ಮೇಲೆ ಅಂಬಿಗನ
ನೆನೆಸದವ ಮನುಜನೇನಯ್ಯಾ,
ವಿದ್ಯೆ ಕಲಿತ ಮೇಲೆ ಗುರುವಿಗೆ
ಜರೆಯುವವ ಶಿಷ್ಯನೇನಯ್ಯಾ?
ಮದುವೆಯಾದ ಮೇಲೆ ಸಂಸಾರ
ನಡೆಸದವ ಪುರುಷನೇನಯ್ಯಾ.?
ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪ್ರಜ್ವಲಿಪ ದಿವ್ಯಪಾದಂಗಳ ಪೂಜಿಸದ
ಗರ್ವಿಗೆ ಗತಿಮತಿ ಎಲ್ಲಿಹುದಯ್ಯಾ ? ಎಂತಿಹುದಯ್ಯಾ ?

೧೦೯

ಮೂಢನಿಗೆ ಕೇಡಿಲ್ಲ ಎನ್ನುವರಯ್ಯಾ
ಕೇಡಾದರೂ ಅರಿವಿಲ್ಲ ಎನ್ನುವರಯ್ಯಾ,
ಅರಿವಿದ್ದರೂ ಉದಾಸೀನ ಎನ್ನುವರಯ್ಯಾ.
ಉದಾಸೀನವೇ ಅಹಂಕಾರ ಎಂದರಿಯರಯ್ಯಾ.
ಅಹಂಕಾರವೇ ಅವನತಿಗೆ ದಾರಿಯಾಗುವದೆಂದರಿತು
ನಡೆದರೆ ಬಾಳು ಸುಗಮವೆಂದ ಎನ್ನೊಡೆಯ
ಅಗಣಿತ ಅನುಭಾವದ ಖಣಿ ಶಿವಾನಂದ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೦

ಮೋಸದ ಹಾದಿತೊರೆದು
ಮಮತೆಯ ದೀಪ ಹಚ್ಚಿರಯ್ಯಾ.
ಆಸೆಯ ಮನಮುರಿದು
ತ್ಯಾಗದ ಜ್ಯೋತಿ ಬೆಳಗಿರಯ್ಯಾ,
ದ್ವೇಷದ ದಳ್ಳುರಿಯಾರಿಸಿ
ಪ್ರೀತಿಯ ಪ್ರಣತಿ ಹೊತ್ತಿಸಿರಯ್ಯಾ,
ಬೆಳಕಿನ ಹಬ್ಬದಲಿ ರಾಗದ್ವೇಷಗಳಳಿದು
ಸದ್ಭಾವ ಥಳಥಳಿಸಿದೊಡೆ
ಹಬ್ಬದ ಆಚರಣೆ ಸಾರ್ಥಕವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೧೧೧

ಮೌಢ್ಯತೆಯನ್ನಳಿಸಿ, ಕಂದಾಚಾರಗಳ ಕಳಚಿ,
ಜಡಗಟ್ಟಿದ ಯಜ್ಞಯಾಗಾದಿ ನಿಷೇಧಿಸಿ ಗೊಡ್ಡು

ಸಂಪ್ರದಾಯಗಳ ಧಿಕ್ಕರಿಸಿದ ಧೀಮಂತ ಶ್ರೀವೀರಭದ್ರ.
ಜಾತಿ,ಮತ,ಪಂಥಗಳ ಅಲ್ಲಗಳೆದು
ನೀತಿಗೆ ನೆಲೆ, ಮಾತಿಗೆ ಬೆಲೆ ಇತ್ತು,
ಮಾನವ ಧರ್ಮಕ್ಕೆ ಜಯವೆಂದ ಶ್ರೀರೇಣುಕರು.
ಅನುಭವ ಮಂಟಪ ಸ್ಥಾಪಿಸಿ ಸಕಲರಿಗೂ
ಲೇಸನೇ ಬಯಸಿದ ಶ್ರೀ ಬಸವೇಶ್ವರ.
ಪ್ರಪ್ರಥಮ ಬಾರಿಗೆ ವಿಶ್ವಕ್ಕೆ ಪ್ರಜಾಪ್ರಭುತ್ವ
ಪರಿಚಯಿಸಿದ ಕೀರ್ತಿ ನಮ್ಮ ಶರಣರದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೧೨

ಯಾವ ಪಾಪ ಹರಿಶ್ಚಂದ್ರಗೆ ಸುಡುಗಾಡು ಸುತ್ತಿಸಿತ್ತು.
ಯಾವ ಪಾಪ ಶೀರಾಮಂಗೆ ಕಾಡಿಗೆ ಕಳಿಸಿತ್ತು.
ಯಾವ ಪಾಪ ಪಾಂಡವರ ಪಣದಲಿ ಸೋಲಿಸಿತ್ತು.
ಯಾವ ಪಾಪ ಆ ಏಸುಗೆ ಶಿಲುಬೆ ಏರಿಸಿತ್ತು.
ಯಾವ ಪಾಪ ಬಸವಂಗೆ ಕಲ್ಯಾಣದಿ ಕಂಗೆಡಿಸಿತ್ತು.
ಯಾವ ಪಾಪ ಗಾಂಧೀಜಿಗೆ ಗುಂಡು ಹಾಕಿತ್ತು.
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಈ ಪ್ರಪಂಚದ ವಿಪರ್ಯಾಸಕೆ
ಬೇಸತ್ತು ನಿಶ್ಚಲನಾದೆಯಾ ತಂದೆ

೧೧೩

ಯುದ್ಧದ ಗದ್ದಲ ಮಧ್ಯೆ ಶಾಂತಿಯ ಮಂತ್ರ,
ಜನರ ಆಕ್ರಂದನಕ್ಕೆ ನರಕ ಸದೃಶ ಉಕ್ರೇನ.
ಯಾರುಮಿತ್ರರೋ ? ಯಾರುಶತೃಗಳೋ ? ತಿಳಿಯದು.

ತೋಳ್ಬಲವ ತೋರಿಸಿ ಮಾಡು ಇಲ್ಲವೇ ಮಡಿ ಸದ್ಯದ ಪರಿಸ್ಥಿತಿ.
ವಿಶ್ವದ ವಿನಾಶಕ್ಕೆ ವಿಷಕಾರಿ ಸನ್ನೀವೇಶ.
ಜಗದೀಶಾ.... ನೀನಾಡುವ ಜಗವೇ ನಾಟಕರಂಗ.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶ ನಿಮ್ಮ ಆಟ ಅರಿಯುವರಾರಯ್ಯಾ

೧೧೪

ಯೋಗ್ಯತೆ ಅರಿಯದೆ ಆರಿಸಿ ಪಟ್ಟಕಟ್ಟುವರಯ್ಯಾ.
ಅಯೋಗ್ಯರ ಆಡಳಿತದಲಿ ನರಳುವರಯ್ಯಾ.
ಅಗ್ಗಕ್ಕೆ ಮುಗ್ಗು ಜೋಳ ತಂದಂತಾಯಿತ್ತಯ್ಯಾ.
ಹಿಗ್ಗಿನಿಂದ ಮಾಡಿದ ಅಡುಗೆ
ತಿನ್ನಲು ಕಷ್ಟವಾಯಿತ್ತಯ್ಯಾ.
ವೀವೇಕ ಕಳೆದುಕೊಳ್ಳದೇ ಸಮರ್ಥ
ನಾಯಕರ ಬೆಂಬಲಿಸಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೫

ರವಿ ಶಶಿಯರಿಗೆ ರಾಹು ಕೇತುಗಳಿಂದ ಗ್ರಹಣ.
ಶುಭಾಶುಭಗಳಿಗುಂಟು ದಾನದಿಂದ ಪರಿಹಾರ.
ಭುವಿಯಲ್ಲಿ ಅಳಿಯನೇ ದಶಮಗ್ರಹ,
ಬಯಸಿದ ಉಡುಗೊರೆ ಕೊಟ್ಟಾಗಲೇ ಪರಿಹಾರ.
ರಾಹು, ಕೇತು ಅದೃಶ್ಯ ಗ್ರಹಗಳಿಗಿಂತ ಸದೃಶ್ಯವಾಗಿರುವ
ಈ ದಶಮಗ್ರಹ ದರ್ಪದಿಂದ ಬಲಿಷ್ಠವಾಗಿರ್ಪುದೆಂಬೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೬

ರೀತಿ ನೀತಿಗಳಲಿ ಬಹಳಷ್ಟು ಅಂತರವೇ ಇಲ್ಲ.
ಭಾವ ಸ್ವಭಾವಗಳಲಿ ಭಿನ್ನತೆಯೇ ಇಲ್ಲ.
ನೋವು ನಲಿವಿನಲಿ ವ್ಯತ್ಯಾಸವೇ ಇಲ್ಲ.
ರಕ್ತಮಾಂಸಗಳಲಿ ವಕ್ರತೆಯೇ ಇಲ್ಲ.
ಮಾನವ ಜಾತಿ ಒಂದೇ, ಧರ್ಮ ಒಂದೇ ಇರುವಾಗ
ರಾಜಕೀಯ ದುರಾಡಳಿತ ಎಲ್ಲಾ ಅವಕಾಶಗಳಿಗೆ
ಜಾತಿ ಪತ್ರ ಕಡ್ಡಾಯವಿರಿಸಿ ಜಾತಿ
ಜಾತಿಗಳಲ್ಲಿ ಸಾಮರಸ್ಯ ಹದಗೆಡುತ್ತಿದೆ.
ಸಂಘರ್ಷಗಳು ಹೆಚ್ಚುತ್ತಿರುವುದು
ಕಂಡು ಬಲು ನೊಂದೆನಯ್ಯಾ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಈ ಅಸಮತೋಲನ ನಿವಾರಿಸಿ
ಮಾನವ ಧರ್ಮಕ್ಕೆ ಜಯ ನೀಡಯ್ಯಾ,

೧೧೭

ರೂಪ ಆಕರ್ಷಣೆಯ ಸ್ವರೂಪ.
ಕುರೂಪ ನಿರಾಕರಣೆಯ ವಿರೂಪ.
ಅಪರೂಪ ಆಕಸ್ಮಿಕದ ತದ್ರೂಪ.
ನೆಪಮಾತ್ರಕೆ ಈ ರೂಪಾರೂಪಗಳ ಬಳಕೆ
ಶಾಪವಾಗಿ ಮಾರ್ಪಡುವ ಮೊದಲೇ
ಅಪ್ಪಟ ಚಿನ್ನದ ಗುಣವ ಪರಿಗ್ರಹಿಸಿದೊಡೆ
ಬಾಳು ಬಂಗಾರವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ,

೧೧೮

ರೈತ ಕೊಡುವ ಅನ್ನದ ದಾನ ದೊಡ್ಡದು.
ಸದ್ಗುರು ನೀಡುವ ಜ್ಞಾನದ ದಾನ ದೊಡ್ಡದು.
ಮಾತೆ ಮಾಡುವ ಆಶೀರ್ವಾದದ ದಾನ ದೊಡ್ಡದು.
ಪ್ರಪಂಚದಲ್ಲಿ ಈ ದಾನಗಳಗಿಂತ
ಮಿಗಿಲಾದ ಯಾವ ದಾನಗಳಿಲ್ಲ.
ಅವರಿತ್ತ ದಾನವನುಂಡು ಅವರನ್ನೇ
ಕಡೆಗಣಿಸಿ ನಡೆವ ಕಡುಪಾಪಿಗಳನೇನೆಂಬೆ ?
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೧೯

ರೋಷದಿಂದ ಮೋಸಕೃತ್ಯಗಳ ಗೈಯುತ್ತ,
ದೋಷ ನಿವಾರಣೆಗೆ ಕಾಶಿಗೆ ಹೋದರೇನು ಫಲ.?
ಆಸೆಯಳಿದು ರೋಷ ತೊರೆದು
ಮತ್ಸರದ ವಿಕಾರ ಗುಣಗಳ ಬಿಡು.
ಅಗಣಿತ ಗುಣಾಗ್ರಣಿ ಅಪಾರ ಮಹಿಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕರುಣದಿ ಕಾಪಾಡುವ ಸಂಶಯ ಬೇಡ.

೧೨೦

ಲಕ್ಷಣದ ಪ್ರಭೇದಗಳನ್ನು ಉಪೇಕ್ಷಿಸುವವರಾರು?
ಅವಲಕ್ಷಣವ ನಿರಪೇಕ್ಷಿಸುವುದು ಮನ.
ಸನ್ನಡತೆ ಸಚ್ಚಾರಿತ್ರ್ಯಯಲ್ಲೇ ಅಡಗಿಹುದು ಸಲ್ಲಕ್ಷಣ.
ಅರಿತೋ? ಅರಿಯದೆಯೋ? ಕ್ಷಣಿಕ ಪ್ರಪಂಚದಲ್ಲಿ
ಲಕ್ಷಣ ಅರಸುವ ವಿಲಕ್ಷಣ ಜನರೇ ಕಾಣುತಿಹರು.

ಸರಳ ಸನ್ನಡತೆಯ ಶಿವಶರಣನೇ ಲಕ್ಷಣವಂತನೆಂದು
ಅರಿಯರಲ್ಲಾ ? ಎಂದ ಎನ್ನೊಡೆಯ ಅಕ್ಷಯಾತ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೨೧

ವಚನ ಸಹ್ಯವಾಗಿರಬೇಕಯ್ಯಾ,
ವಚನ ಗ್ರಾಹ್ಯವಾಗಿರಬೇಕಯ್ಯಾ,
ವಚನ ಪರಿಶುದ್ಧವಾಗಿರಬೇಕಯ್ಯಾ,
ವಚನ ಸತ್ಯ ನಿತ್ಯ ನೂತನವೆನಿಸಬೇಕಯ್ಯಾ,
ವಚನ ಪಚನವಾಗುವಂತಿರಬೇಕಯ್ಯಾ,
ವಚನ ಗೌರವ ಪಡೆಯುವಂತಿರಬೇಕಯ್ಯಾ,
ವಚನ ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ ಮೆಚ್ಚುವಂತಿರಬೇಕಯ್ಯಾ

೧೨೨

ವರದಕ್ಷಿಣೆ ಕಿರುಕುಳದ ಆರೋಪಕ್ಕೆ ಗುರಿಯಾಗಿ
ಮುಗ್ಧರು ಮರಣಕ್ಕೆ ಶರಣಾದುದು ಕಂಡೆ.
ಗಂಡನಿಗೆ ಹೆದರಿಸಿ ಅತ್ತೆ ಮಾವಂದಿರ
ಅನಾಥಾಶ್ರಮಕ್ಕೆ ಸೇರಿಸಿದ ವನಿತೆಯರ ಕಂಡೆ,
ಸುಂದರ ಸಂಸಾರಕ್ಕೆ ಕೊಳ್ಳಿ ಇಡುವ ಪಾಖಂಡಿಗಳು
ಸರಳತೆ ತೋರಿ ಕೊರಳು ಕೊಯ್ಯುವ ಕೃತ್ಯಗಳು ಕಂಡೆ.
ವರದಕ್ಷಿಣೆ ನಿಷೇಧ ಕಾಯ್ದೆ ಕೆಲವರಿಗೆ ವರವಾದರೆ
ಹಲವರಿಗೆ ಶಾಪವಾಗಿ ಕಾಡುವುದು ಕಂಡೆ.
ಸ್ವಾರ್ಥಕ್ಕಾಗಿ ಸುಳ್ಳು ಕಥೆ ಕಟ್ಟಿ ಪೀಡಿಸುವವರಿಗೆ
ಕಾಲನ ಹೊಡೆತ ಕಾದಿಹುದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೨೩

ವಿದ್ಯಾರ್ಥಿಗಳ ಆಟ ಶಿಕ್ಷಕರಿಗೆ ಆಸರೆಯಾಗಿತ್ತು
ವೈದ್ಯರ ಬೇಟೆಗೆ ರೋಗಿ ಬಲಿಯಾಗಿತ್ತು
ನ್ಯಾಯವಾದಿ ಕೋಟು ನ್ಯಾಯಕ್ಕೆ ಬರೆ ಎಳೆದಿತ್ತು
ರಾಜಕೀಯದ ಓಟು ಅರಾಜಕತೆಗೆ ದಾರಿಯಾಗಿತ್ತು
ಸಾಮಾಜದ ಓಟ ನೋಟಿನ ಕಡೆಗೆ ಓಡುತ್ತಿರುವಾಗ
ನೀತಿ ಎಲ್ಲಿ? ನ್ಯಾಯಯೆಲ್ಲಿ ? ಧರ್ಮವೆಲ್ಲಿ?
ಅಂತ್ಯ ಅವಸಾನವೆಲ್ಲಿ ? ಇದನರಿಯದೆ ಮೂಕನಾನಾದೆ
ತಂದೆ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೨೪

ವಿನಯವೆಂದರೆ ವಿಧೇಯತೆ.
ವಿನಯವೇ ವಿದ್ಯೆಗೆ ಭೂಷಣ.
ವಿನಯವೇ ಸಂಪತ್ತಿಗೆ ಲಕ್ಷಣ.
ವಿನಯವು ಶಕ್ತಿಗೆ ರಕ್ಷಣ.
ವಿನಯವೇ ಮನೆಗೆ ತೋರಣ.
ವಿನಯವುಳ್ಳೊಡೆ ಶ್ರೀ ಗುರು ಕರುಣ.
ವಿನಯವಿಲ್ಲದಿರೆ ಕಾದಿಹುದು ಅವಸಾನ.
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶನ ಭಜಿಸು ಅನುದಿನ.
ಅದುವೇ ಮುಕ್ತಿಗೆ ಸಾಧನ.
ಅಹಂಕಾರ ಪಡದಿರು ಜೋಪಾನ.

೧೨೫

ವೇದಾಗಮಗಳಗೆ ಗೌರವಿಸಿ ಸಂತಾನ ಸಿದ್ಧಿಗೆ
ಮದುವೆ ಸಂಭ್ರಮಿಸಬೇಕಯ್ಯ.

ದುಃಖ ದುಮ್ಮಾನಗಳ ಬಿಡಿಸುವ ಬುದ್ಧಿಗೆ
ಮದುವೆ ಕಾರಣವಾಗಬೇಕಯ್ಯ.
ಮಮತೆ ಪ್ರೀತಿ ವಾತ್ಸಲ್ಯಗಳ ವೃದ್ಧಿಗೆ
ಮದುವೆ ಶ್ರಮಿಸಬೇಕಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶನ
ಸನ್ನಿಧಿಗೆ ಮದುವೆ ಮಹಾವೇದಿಕೆ ಎನಿಸಬೇಕಯ್ಯ.
ಇಂತಪ್ಪ ಮದುವೆ ದೈವಕೃಪೆಗೆ ಪಾತ್ರವಹುದು ಕಾಣಯ್ಯ.

೧೨೬

ಸಕಲ ಜೀವಿಗಳ ಆಶ್ರಯ ತಾಣ ಪ್ರಕೃತಿ ವನ.
ಸರ್ವ ವಿನಾಶಕ್ಕೆ ಕಾರಣ ವಿಕೃತಿ ಮನ.
ಸಮೃದ್ಧಿಗೆ ಬೇಕು ಸಂಸ್ಕೃತಿಯ ಅನಾವರಣ.
ಲೋಕದಲಿ ಸುಸಂಸ್ಕೃತಿ ಮರೆಯಾದ ಕ್ಷಣ.
ಕುಕೃತ್ಯಕ್ಕೆ ಆಮಂತ್ರಣ ಅದು ಕಾರಣ
ಸುಸಂಸ್ಕೃತ ಪ್ರಜ್ಞೆ ಸರ್ವರ ಬಾಳಲ್ಲಿರಬೇಕೆಂದ
ಎನ್ನೊಡೆಯ ಜಗದೇಕ ವೀರ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೨೭

ಸರೋವರದ ಅಂದ ಹೆಚ್ಚುವುದು ತಾವರೆಯಿಂದ.
ಅಂಬರದ ಅಂದ ಹೆಚ್ಚುವುದು ಚಂದ್ರಮನಿಂದ.
ಧರಣಿಯ ಅಂದ ಹೆಚ್ಚುವುದು ಹಸಿರುಸಿರಿನಿಂದ.
ವಿದ್ಯೆಯ ಅಂದ ಹೆಚ್ಚುವುದು ವಿನಯದಿಂದ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಕ್ತರ ಅಂದ ಹೆಚ್ಚುವುದು ಧರಿಸಿದ ವಿಭೂತಿಯಿಂದ

೧೨೮

ಸಕಲ ಜೀವಿಗಳಿಗಾಗಿ ಶಿವ ನೀಡಿದ
ಸಂಪತ್ಭರಿತ ಜಗವಿದು ಕಾಣಿರೋ.
ಪ್ರಕೃತಿಯ ಮಡಿಲಲ್ಲಿ ಓಲಾಡುವ
ಸೌಭಾಗ್ಯ ನಮ್ಮದು ಅರಿಯಿರೋ.
ಸ್ವಾರ್ಥ ಸಂಕುಚಿತ ಮನೋಭಾವ ಸಲ್ಲದು ತಿಳಿಯಿರೋ.
ಸರ್ವ ಜನಾಂಗದ ಶಾಂತಿಯ
ತೋಟವಿದು ನೋಡಿರೋ.
ಸುಸಂಸ್ಕೃತ ಬದುಕು ತೊರೆದು
ವಿಕೃತಿ ಮನ ಮೆರೆದರೆ
ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ
ತಕ್ಕ ಪಾಠ ಕಲಿಸದೆ ಬಿಡನು.
ಇದು ಸತ್ಯ ಇದು ಸತ್ಯ.

೧೨೯

ಸತಿ ಪತಿ ಸಂಬಂಧ ಮಧುರ ಶಾರೀರಿಕ ಬಾಂಧವ್ಯ.
ಗುರು ಶಿಷ್ಯರ ಸಂಬಂಧ ಪವಿತ್ರಾತ್ಮಗಳ ಬಾಂಧವ್ಯ.
ಬಾಂಧವ್ಯ ಭದ್ರವಾಗಿರ್ದೊಡೆ ಸುಮಧುರ ಫಲವುಂಟು.
ಅದುಕಾರಣ ಬಾಂಧವ್ಯಗಳಿಗೆ ಬೆಲೆ ಇತ್ತು
ನಡೆದುಕೊಂಡೊಡೆ ಸತ್ಫಲದ ರಕ್ಷೆಯಿರ್ಪುದು.
ಅಪ್ಪಾ ಶಿವಶಕ್ತಿ ಪ್ರಿಯ ಶ್ರೀದೇವಸೂಗೂರ ವೀರೇಶ,
ನಿಮ್ಮ ಅಪ್ರತಿಮ ಪ್ರಖರ ಪ್ರಜ್ವಲಿಪ ಪಾದಪದ್ಮಂಗಳೆನಗೆ
ಇಹಪರಗಳಲ್ಲಿ ರಕ್ಷಿಪ ಪವಿತ್ರ ಬಾಂಧವ್ಯದ ಫಲ ಎಂಬೆನಯ್ಯಾ.

೧೩೦

ಸಕ್ಕರೆ ಪಾಯಸ ಸವಿದು ವಿಷ ಕಕ್ಕುವವರ ಕಂಡೆ.
ಅಕ್ಕರೆಯ ತೋರುವವರಿಗೆ ಮಣ್ಣು ಮುಕ್ಕಿಸುವವರ ಕಂಡೆ.
ನಕ್ಕು ನಗುತ್ತಲಿರುವ ಸಂಸಾರಗಳಿಗೆ ಬೆಂಕಿ ಇಕ್ಕುವವರ ಕಂಡೆ.
ಕಕ್ಕುಲತೆಯುಳ್ಳ ಮನಗಳಿಗೆ ಬಿಕ್ಕಿ
ಬಿಕ್ಕಿ ಅಳುವಂತೆ ಮಾಡುವವರ ಕಂಡೆ,
ಬಲು ನೊಂದೆ. ಇಂತಹ ದುಷ್ಟರ
ಪಾಪದ ಕೊಡ ತುಂಬಿದಾಗ
ತಕ್ಕ ಶಿಕ್ಷೆಯು ಕಾಲವೇ
ನೀಡುವುದೆಂದು ಮೌನವಾಗಿರ್ದೆನಯ್ಯಾ,
ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೩೧

ಸದ್ದುಗದ್ದಲವಿಲ್ಲದೆ ಮೋಸ ನಡೆಯುತಿಹುದು.
ಕದ್ದು ತಿನ್ನುವ ಮನೋವೃತ್ತಿ ಹೆಚ್ಚಾಗುತಿಹುದು.
ಬುದ್ಧಿ ಇದ್ದರೂ ಆಸೆಗೊಳಗಾಗಿ ಮುಗ್ಧಜನ
ಇದ್ದುದೆಲ್ಲವ ಕಳೆದುಕೊಳ್ಳುತಿಹರು.
ಸತ್ಯ ಶುದ್ಧ ಕಾಯಕಗೈವ ಶರಣರಿಗೆ ಹೆಜ್ಜೆ ಹೆಜ್ಜೆಗೂ
ಪರೀಕ್ಷೆ ಇಹುದು, ಹದ್ದು ಮೀರಿ ಕ್ಷುದ್ರಭಾವನೆಗಳ ಜನ
ನಿದ್ದೆಗೆಡಿಸುತಿಹರು, ಜಗದೊಡೆಯ ಶಿವಶಕ್ತಿ ಪ್ರಿಯ ಶ್ರೀ
ದೇವಸೂಗೂರ ವೀರೇಶ ಕಲ್ಯಾಣ
ರಾಜ್ಯದ ನಿರೀಕ್ಷೆಯಲ್ಲಿರುವೆವು,
ಉಪೇಕ್ಷೆ ಮಾಡದೆ ಎದ್ದು ಬಾರಯ್ಯ ತಂದೆ.

೧೩೨

ಸರಳ ಮನಸ್ಸಿನವರಲ್ಲಿ ಕರುಳಿನ ಕೂಗು ಕೇಳಿಸುವುದಯ್ಯ.
ಮರುಳು ಮಾತಿನ ಮನುಜರ
ಕರುಳು ಬರಡು ಎಂಬುದು ತಿಳಿಯಯ್ಯ,
ಒರಳಲ್ಲಿ ಭತ್ತವಿಲ್ಲದೆ ಬರೀ ಹೊಟ್ಟು ಕುಟ್ಟಿದಂತೆ ಕಾಣಯ್ಯ.
ನೆರಳಿಲ್ಲದ ಒಣಗಿದ ಮರವ
ಆಶ್ರಯಿಸಿದಂತೆ ನೋಡಯ್ಯ,
ಸರಳತೆ ಅರಿಯದವರು ಸತ್ಯ
ಶರಣರಾಗಲು ಸಾಧ್ಯವೇನಯ್ಯ?
ಡಾಂಭಿಕ ಭಕ್ತರ ಬೆಂಬತ್ತಿ ಹೋಗುವುದು
ಕಡು ಮೂರ್ಖತನವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೩೩

ಸಹಜ ಜಾಡ್ಯಗಳು ಪ್ರಕೃತಿಯಿಂದ ಬರುವುದಯ್ಯಾ.
ಇವು ಮನೆಯ ಮದ್ದಿನಿಂದ ನಿವಾರಣೆಯಾಗುವವಯ್ಯಾ.
ಸ್ವಾಗತ ಕಾಯಿಲೆಗಳು ಬಾಯಿ ರುಚಿಯಿಂದ ತಂದುಕೊಂಡುದಯ್ಯಾ.
ಇಲ್ಲಿ ವೈದ್ಯೋಪಚಾರ ಬೇಕೇ ಬೇಕಯ್ಯಾ.
ಉಲ್ಬಣ ರೋಗಗಳು ಕರ್ಮಾನುಸಾರ ವೃದ್ಧಿಸುವುದಯ್ಯಾ,
ಧರ್ಮ ಮಾರ್ಗದಲ್ಲಿ ಸದ್ಗುರುವಿನ ಕೃಪೆ ದೊರೆತಾಗ ಪರಿಹಾರವಯ್ಯಾ,
ಅದು ಕಾರಣ ಪರರ ನೋಯಿಸದೆ
ಧರ್ಮ ಮಾರ್ಗದಲ್ಲಿ ಸಾಗಿ ರೋಗ ಮುಕ್ತರಾಗಿ
ಜೀವನ ಸಾರ್ಥಕ ಮಾಡಿಕೊಳ್ಳಿರೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೩೪

ಸಗ್ಗದ ಬಾಗಿಲಿಗೆ ಸಿರಿಯೇ ಕೀಲಿಕೈ ಅಲ್ಲ.
ಸಿರಿಯನರಸಿ ಜನರ ವಂಚಿಸುವುದಲ್ಲ.
ವಂಚನೆಯ ಹಾದಿ ಹಿಡಿದು
ಪರರಿಗೆ ನೋವು ನೀಡುವುದಲ್ಲ.
ನೋವಿನ ಅಲೆಗಳು ನರಕಕ್ಕೆ ನೂಕದೆ ಬಿಡುವುದಿಲ್ಲ.
ಮೋಸ ವಂಚನೆಯ ಹೀನ ಬುದ್ಧಿಯು ಸರಿಯಲ್ಲ.
ಜ್ಞಾನವನೀವ ಸದ್ಗುರುವಿನ ಅರಸಿ ಸದಾಚಾರಿಯಾದೊಡೆ
ನೀ ನಿಂತ ಸ್ಥಳವೇ ಸಗ್ಗವಾಗುವುದೆಂದ ಜಗದೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೩೫

ಸಮೃದ್ಧ ಪೈರು ತೆನೆಬಿಟ್ಟು ಬಾಗುವುದು ನೋಡಯ್ಯಾ,
ಫಲಭರಿತ ಮರ ತೂಗಿ ತೊನೆದಾಡುವುದು ಕಾಣಯ್ಯಾ.
ಸಂಪತ್ತು ತುಂಬಿ ತುಳುಕುತ್ತಿರುವ
ಸಿರಿವಂತ ತಲೆ ಬಾಗುವುದೇ ಕಷ್ಟವಯ್ಯಾ.
ಗುರು ಹಿರಿಯರಿಗೆ ವಿಧೇಯನಾಗಿರುವುದು
ಭಕ್ತಂಗೆ ಸಲ್ಲಕ್ಷಣವಯ್ಯಾ.
ಅದು ಕಾರಣ ಮಠ ಮಾನ್ಯಗಳ ಕಿರಿದಾದ ಬಾಗಿಲುಗಳು
ಬಗ್ಗಿ ಹೋಗುವಂತೆ ಎಚ್ಚರ ನೀಡುವುದಯ್ಯಾ.
ಜಂಭ ಬಿಟ್ಟು ಸದಾಚಾರದಿಂದ ನಡೆಯಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೩೬

ಸಮಸ್ಯೆಗಳ ಸುಳಿಯಲಿ ಸಿಲುಕಿದವರು ಪಾಪಿಗಳಲ್ಲ.
ತಮಾಷೆಯಿಂ ತರಲೆ ಗೈದು ನಗುವವರು ಪುಣ್ಯವಂತರಲ್ಲ.

ಉದಾರಮನದಿಂ ಕನಿಕರಿಸಿ ಕೈಲಾದ
ನೆರವು ನೀಡುವವರೇ ಪುಣ್ಯವಂತರು.
ಪರನಿಂದೆಯಂ ತೊರೆದು
ಸತ್ಯ ಶುದ್ಧ ಕಾಯಕದೋಳಿರ್ದೊಡೆ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕರುಣದಿಂ ಕಾಪಾಡುವುದು ಪರಮ ಸತ್ಯವಯ್ಯಾ.

೧೩೭

ಸ್ವಚ್ಛ ಮನವು ಮಲ್ಲಿಗೆಯಂತೆ
ಬಿಚ್ಚುಮಾತು ಜೇನಹನಿಯಂತೆ
ಎಚ್ಚರದ ನಡೆ ಬಾಳ ದೀವಿಗೆಯಂತೆ
ಕೆಚ್ಚೆದೆಯು ಬದುಕಿಗೆ ಬಂಗಾರದಂತೆ
ತುಚ್ಛರ ಕೊಂಕು ಕೂರಲಗಿನಂತೆ
ಮ್ಲೇಚ್ಛರ ಮತ್ಸರ ದಾವಾನಲದಂತೆ
ಹೆಜ್ಜೆ ತಪ್ಪಿದರೆ ಬಾಳು ನುಚ್ಚು ನೂರಾದಂತೆ
ಶರಣು ಬಂದೆ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶ ರಚ್ಚಾದ ಪ್ರಪಂಚದಿ ಕಟ್ಟೆಚ್ಚರದಿ
ಕಾಯುವ ಕಲಿವೀರನೇ ನಮೋನಮಃ

೧೩೮

ಸ್ವಚ್ಛ ಮನದ ಮಾತು ಅಚ್ಚಳಿಯದ ಆನಂದ ನೀಡುವದು.
ಮುಚ್ಚುಮರೆಯ ಮಾತು ಮನವಚುಚ್ಚಿ ಘಾಸಿಗೊಳಿಸುವುದು.
ಕಿವಿ ಕಚ್ಚಿ ಹೇಳುವ ತುಚ್ಛರ ಮಾತು,
ಸಂಸಾರ ಛಿದ್ರಗೊಳಿಸುವುದು.
ಜಗದ ಜಂಜಾಟದಲ್ಲಿ ಸಿಲುಕಿರ್ದಬಳಿಕ,
ಹುಚ್ಚುಮಾತುಗಳಿಗೆ ಬೆಚ್ಚಿ ಬೀಳದೇ,

ಸಮಚಿತ್ತದಿಂದರಿತು ಎಚ್ಚರದಿ ಬಾಳಬೇಕೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೩೯

ಸ್ವಾರ್ಥ ಮನೋಭಾವ ಪಾಪಕೂಪದ ಹಾದಿ ನೋಡಯ್ಯಾ.
ಅರ್ಥಕ್ಕೆ ಅನರ್ಥ ಕಲ್ಪಿಸಿ ಸಂಬಂಧಗಳ ಬೆಸುಗೆ ಕಳಚುವುದಯ್ಯಾ .
ಹಣಗಳಿಸಲು ನಿರಂತರ ಅಕ್ರಮ
ಅವ್ಯವಹಾರದಲಿ ತೊಡಗಿಸುವುದಯ್ಯಾ.
ಅಹಂಕಾರ ಉಮ್ಮಳಿಸಿ ಗುರು ಹಿರಿಯರ
ಮಾತನ್ನು ಅಸಭ್ಯವಾಗಿ ಕಡೆಗಣಿಸುವುದಯ್ಯಾ.
ಆಸ್ತಿ ಅಂತಸ್ತು ಕ್ಷಣಿಕವೆಂದರಿತು ನಿಸ್ವಾರ್ಥದಿಂದ ಬಾಳುವವಂಗೆ
ಶಾಶ್ವತ ಸುಖ ನಿಶ್ಚಿತವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೪೦

ಸಿರಿ ಬಂದಾಗ ನೆರೆಹೊರೆ ಬಾರ,
ಕರುಳ ಬಳ್ಳಿಯು ದೂರ.
ಸರಿಕ ಸ್ನೇಹಕ್ಕೆ ಸಂಚಕಾರ,
ಗುರು ಹಿರಿಯರಿಗೆ ತಾತ್ಸಾರ.
ಒಂದೆರಡು ಮಾತಿಗೂ ಬರ.
ಈ ಪರಿಯ ಕಂಡು ಸಿರಿಗರ
ಹೊಡೆದವರ ನುಡಿಸಲಾಗದೆಂದರು ಅಣ್ಣ ಬಸವಣ್ಣ.
ಕೊಡು ಕೊಳ್ಳುವಿಕೆ ಏನಿಲ್ಲ,
ಸವಿನುಡಿಯನಾಡದಿದ್ದರೇನಣ್ಣ.
ಗುಣದ ಸಿರಿ ಇಲ್ಲದ ಬಣ್ಣಗೇಡಿಗಳ
ನೆರಳಲ್ಲಿರುವುದು ತರವಲ್ಲವೆಂದ,

ಎನ್ನೊಡೆಯ ಸುಜ್ಞಾನ ನಿಧಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪೧

ಸಿರಿವಂತನಾದೊಡೆ ಚಿನ್ನ ತಿಂದು ಜೀವಿಸಬಹುದೇ?
ಘನ ಪಂಡಿತನಾದೊಡೆ ಅಕ್ಷರಗಳು ನುಂಗಿ ಬದುಕಬಹುದೇ?
ಇಂಜಿನಿಯರಾದೊಡೆ ಇಟ್ಟಿಗೆಗಳ
ಹೊಟ್ಟೆಗೆ ಇಟ್ಟು ನೆಟ್ಟಗೆ ಇರಬಹುದೇ?
ವೈದ್ಯರಾಗಿರಲಿ, ಗಣಕಿಗಳಾಗಲಿ ಏನೇ ಆಗಿರಲಿ
ಅನ್ನ ನೀರು ಗಾಳಿ ಇಲ್ಲದೆ ಬದಕುವವರಾರು?
ನೇಗಿಲಯೋಗಿ ವೀರೇಶನ ವರಪುತ್ರ ಮಾತ್ರ ಬೆಳೆಯುವನಲ್ಲವೇ?
ಎಲ್ಲಾ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು,
ಸಕಲ ಜೀವಿಗಳಿಗೆ ಅನ್ನ ನೀಡುವ ಅನ್ನದಾನಿ
ಶಿವಶಕ್ತಿ ಪ್ರಿಯ ಶ್ರೀದೇವಸೂಗೂರ ವೀರೇಶ
ನಿಮ್ಮ ದಿವ್ಯ ಪಾದಪದ್ಮಂಗಳಿಗೆ ನಮೋ ನಮೋ ಎಂದೆ

೧೪೨

ಸುಮಧುರ ನಾದ ಸಕಲ ಜೀವಿಗಳಿಗೂ ಆಕರ್ಷಿಸುತಿರ್ಪುದು.
ಸುಸಂಸ್ಕೃತ ಮಾತು ಸಹೃದಯಿಗಳಿಗೆ ಒಪ್ಪಿಗೆಯಾಗಿರ್ಪುದು.
ಸರಳ ಜೀವನಕ್ಕೆ ಸದ್ಗುಣಗಳೇ ಆಧಾರವಾಗಿರ್ಪುದು.
ಸದ್ಭಾವ ಸಂಪನ್ನ ಮನುಜನಿಗೆ ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ ರಕ್ಷೆ ಸದಾಯಿರ್ಪುದು.

೧೪೩

ಸುಸಮಯಕ್ಕೆ ಸರ್ವರೂ ಕಾಯುವರಯ್ಯಾ,
ಇರುವುದೊಂದೇ ಸಮಯವಯ್ಯಾ.

ಬಡವ ಬಲ್ಲಿದನಿಗೆ ಬೇರೆ,
ಗಂಡು ಹೆಣ್ಣಿಗೆ ಬೇರೆ ಎಂಬುದಿಲ್ಲವಯ್ಯಾ.
ಸೋಮಾರಿಗೆ ಸದಾಕಾಲ ಸುಸಮಯ ಸಿಗದಯ್ಯಾ.
ಕಾಯಕದಲ್ಲಿ ಬೆರೆತ ಉತ್ಸಾಹಿಗೆ
ಪ್ರತಿಕ್ಷಣವೂ ಸುಸಮಯವೇ ನೋಡಯ್ಯಾ,
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಸ್ಮರಿಸಿ ನಡೆದಾಗ ಸಮಯದ ಬೆಲೆ
ತಿಳಿಯುವುದಯ್ಯಾ ಬಾಳು ಹಸನಾಗುಹುದಯ್ಯಾ.

೧೪೪

ಸುಳ್ಳು ಹೇಳುವವರಿಗೆ ಸ್ಥಾನ. ಕೊಳ್ಳಿಹಚ್ಚುವವರಿಗೆ ಸನ್ಮಾನ.
ಕಳ್ಳರಿಗೆ ಬಹುಮಾನ. ಕೊಳಕು ಮಾತಿಗೆ ಹರ್ಷೋದ್ಗಾರ.
ಥಳಕು ಬಳುಕಿಗೆ ಸತ್ಕಾರ. ಜ್ಞಾನಿಗಳಿಗೆ ತಿರಸ್ಕಾರ.
ಅಧರ್ಮಕ್ಕೆ ಜಯಕಾರ. ಸಮಾಜದಲಿ ಇದೆಂಥ ಆವಿಷ್ಕಾರ ?
ಎಂದು ದಂಗುಬಡಿದು ನಿಂತೆನಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪೫

ಸುಳ್ಳಿನ ಬಲೆಯಲ್ಲಿ ಸಿಲುಕಿಸಿ ಸತಾಯಿಸುವುದು
ಬಹಳ ಕಾಲ ನಡೆಯದು.
ಬಾಳಿಗೆ ಕೊಳ್ಳಿ ಇಟ್ಟು ನರಳಿಸುವವರ ಆಟ ನಿಲ್ಲುವುದು.
ಕಪಟತನದಿಂದ ಕಷ್ಟವನಿತ್ತವರ ವೇಷ ಒಮ್ಮೆ ಕಳಚುವುದು.
ಅಪ್ಪಟ ಸರಳ ಸಜ್ಜನಿಕೆಯ ಶರಣರಿಗೆ ಬಂದೊದಗುವ
ತೊಂದರೆ ತಾಪತ್ರಯಗಳನು ಎನ್ನೊಡೆಯ ದಯಾಘನ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನೇ
ತಡೆಹಿಡಿದು ರಕ್ಷಿಸುವುದು ಪರಮ ಸತ್ಯ ತಿಳಿಯಿರೋ

೧೪೬

ಸಂಚು ಮಾಡಿ ಹಣಗಳಿಸುವುದು ಸುಲಭ.
ವಂಚನೆಮಾಡಿ ಹೊಟ್ಟೆ ತುಂಬಿಸಿ ಕೊಳ್ಳುವುದು ಸುಲಭ.
ಇಂಚಿಂಚು ಭಗವಂತನಿಗೆ ಲೆಕ್ಕ
ಒಪ್ಪಿಸಬೇಕೆಂದು ತಿಳಿಯುವುದು ಕಷ್ಟ.
ತಿಳಿದರೂ ತಿಳಿಯದಂತಿರವ ಕಳ್ಳ
ಮನವನ್ನು ಸರಿ ದಾರಿಗೆ ತರುವುದು ಬಲುಕಷ್ಟ.
ಅದು ಕಾರಣ ದಾಸೋಹಂ ಭಾವ
ಬಲಗೊಳಿಸಿ ಶರಣರ ಹಾದಿಯಲಿ
ನಡೆಸೆನ್ನ ತಂದೆ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೪೭

ಹಣ್ಣು ತಿನ್ನುವ ತನಕ ಬಲು ರುಚಿ.
ಬಣ್ಣ ಇರುವ ತನಕ ಹೆಚ್ಚಿನ ಪ್ರೀತಿ.
ಕಣ್ಣು ಕಾಣುವ ತನಕ ಪ್ರಪಂಚ.
ಎಣ್ಣೆ ತೀರುವ ತನಕ ದೀಪ.
ಮಣ್ಣಿನ ಋಣ ಹರಿಯುವತನಕ ಪ್ರಾಣ.
ಸದ್ಗುರು ದೊರೆಯುವ ತನಕ ಸಂಕಟ.
ಗುರು ಕರುಣೆಯಾದ ಮರುಕ್ಷಣವೇ ಆನಂದ,
ಪರಮಾನಂದ ಪ್ರಾಪ್ತಿ ಖಚಿತವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೪೮

ಹಣ್ಣಾದ ಮುದುಕರು ಹೆಣ್ಣಿಗೆ ಹಾತೊರೆಯುವದು ಕಂಡೆ.
ತಣ್ಣಗಿನ ಬಂಗಲೆಯಲಿ ಸಣ್ಣ ಸಣ್ಣ
ಹೆಣ್ಣುಮಕ್ಕಳ ವ್ಯಭಿಚಾರದ ವರದಿ ನೋಡಿದೆ.

ಹಣದ ಮದ ಅಧಿಕಾರ ಅಹಂಕಾರ
ಮೋಜು ಮಸ್ತಿಗೆ ಹಾದಿ ಇದು ಎಂದರಿತೆ.
ಮಣ್ಣಲ್ಲಿ ಮಣ್ಣಾಗಿ ಹೋಗುವ ನಶ್ವರದ
ಕಾಯ ಎಂದರಿತು ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಭಜಿಸದೇ ಜೀವನ ವ್ಯರ್ಥಗೊಳಿಸುವರಲ್ಲಾ
ಎಂದು ವ್ಯಥೆ ಪಡುತ್ತಿರ್ದೆನಯ್ಯಾ.

೧೪೯

ಹಬ್ಬಗಳಲಿ ಸಂಸ್ಕೃತಿ ಮೆರೆಯುವುದು ನೋಡಿ ಸಂಭ್ರಮಿಸಿದೆ.
ಕಬ್ಬು ಬಾಳೆ ಹೂಗಳು ಮನೆ
ಮನೆಗಳಲಂಕರಿಸುವುದು ಕಂಡೆ ಹರ್ಷಿತನಾದೆ.
ಉಬ್ಬಿದೆದೆಯಿಂದ ನಿಬ್ಬೆರಗಾಗುವಂತೆ ಕುಣಿದಾಡುವ
ಯುವಪೀಳಿಗೆಯ ನೋಡಿದೆ.
ಮಬ್ಬು ಬೆಳಕಿನಲಿ ಕೊಬ್ಬಿ ಓಲಾಡಿ
ಅಸಭ್ಯತೆಯ ತೋರುವುದು ಅರಿತೆ.
ಸುಸಂಸ್ಕೃತ ಸಮಾಜ ಸ್ವೆಚ್ಛಾಚಾರಕ್ಕೆ
ಇಳಿಯುತ್ತಿರುವುದು ಕಂಡು ಬಲುನೊಂದೆನಯ್ಯಾ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ

೧೫೦

ಹಬ್ಬಗಳು ಸಭ್ಯತೆಯ ಕಲಿಸುವವು.
ಕಬ್ಬಗಳು ಯೋಗ್ಯತೆಯ ತೋರುವವು.
ಪಬ್ಬುಗಳು ಸಂಸ್ಕೃತಿಗೆ ಮಾರಕವಾಗಿಹವು.
ಕ್ಲಬ್ಬುಗಳು ಅಶ್ಲೀಲದ ಆಗರಗಳಾಗಿಹವು.
ಪೂರ್ವಜರ ಪದ್ಧತಿಗಳು ಆರೋಗ್ಯ ಶೀಲ

ಸಮಾಜಕ್ಕೆ ಹಾಕಿದ ರೀತಿ ನೀತಿಗಳೆಂಬುದನು
ಅರಿತು ಆಚರಿಸಿದವರ ಜೀವನ ಸಾರ್ಥಕವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೫೧

ಹಬ್ಬವೆಂದು ಹೂರಣ ರುಬ್ಬಿ ಬಿಸಿ ಒಬ್ಬಟ್ಟು ಮಾಡಿ ತಿನ್ನುವುದಲ್ಲ.
ಕಬ್ಬವೆಂದು ಅಬ್ಬರಿಸಿ ಶಬ್ದ ಸೇರಿಸಿ ದಬ್ಬುವುದಲ್ಲ.
ತನು ಮನಗಳಿಗೆ ತಂಪೆರೆದು ಗುರು
ಹಿರಿಯರು ಆದರಿಸಿ ಹರಸುವಂತಿರಬೇಕು.
ಹಬ್ಬವಾಗಲಿ, ಕಬ್ಬವಾಗಲಿ ಜನ ಒಪ್ಪವಂತೆ,
ದೇವ ಅಪ್ಪುವಂತಿದ್ದಾಗ ಅದಕ್ಕೊಂದು ಬೆಲೆ.
ಅದಕ್ಕೊಂದು ನೆಲೆದೊರೆಯುವದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೫೨

ಹಣದ ಮದದಲ್ಲಿ ಒಡಹುಟ್ಟಿದವರ ಜರಿದು
ಅಧಿಕಾರ ಮದದಲ್ಲಿ ಅರಿವನ್ನು ತೊರೆದು
ಯೌವ್ವನದ ಮದದಲ್ಲಿ ಗುರು ಹಿರಿಯರ ಕಂಗೆಡಿಸಿ
ಹಲವರ ಬಾಳಿಗೆ ಮುಳ್ಳಾಗಿ ಮೆರೆವ ಮುಠ್ಠಾಳರಿಗೆ
ಲೆಕ್ಕಕ್ಕೆ ತಕ್ಕ ಶಿಕ್ಷೆಯನ್ನ ತಪ್ಪದೆ ನೀಡುವ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೧೫೩

ಹಣದಾಸೆಗೆ ಮತಾಂತರ, ಹಣದಾಸೆಗೆ ಮತದಾನ.
ಹಣದಾಸೆಗೆ ಮಕ್ಕಳ ಮಾರಾಟ. ಹಣದಾಸೆಗೆ ಪಕ್ಷಾಂತರ,

ಹಣದಾಸೆಗೆ ಪರರ ಕೊಲೆ,
ಹಣದಾಸೆಗೆ ದೇಶಾಂತರ. ಹಣದಾಸೆಗೆ ದೇಶದ್ರೋಹ.
ಹಣದಾಸೆಗೆ ತನ್ನ ವ್ಯಕ್ತಿತ್ವ ಕಳೆದುಕೊಳ್ಳುವ ಜನರಿರಲು,
ಪ್ರಜಾಪ್ರಭುತ್ವ ವ್ಯವಸ್ಥೆ ಅವ್ಯವಸ್ಥೆಯ ಆಗರ.
ಜಾತಿ ಮತ ಪಂಥಗಳ ಆಧಾರಿತ
ರಾಜಕಾರಣಿಗಳಿಂದ ದೇಶದ ಅಖಂಡತೆಗೆ ತೊಂದರೆ.
ದೇಶಾಭಿಮಾನ, ಸ್ವಾಭಿಮಾನ ಸಜ್ಜನರಲ್ಲಿ
ಬೆಳೆದಾಗ ಮಾತ್ರ ಸಮಾಜ ಸುಧಾರಣೆ.
ದೇಶದ ಸಮಗ್ರ ಉನ್ನತಿ ಸಾಧ್ಯವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫೪

ಹಣಕ್ಕಾಗಿ ಹಪ ಹಪಿಸುವವರ ಕಂಡೆ.
ಕ್ಷಣ ಕ್ಷಣವೂ ಮೋಸ ವಂಚನೆಗೈಯ್ಯುವವರ ಕಂಡೆ.
ಢಣ ಢಣ ಗಂಟೆ ಬಾರಿಸಿ ದೇವರಲ್ಲಿ
ಅಂಗಲಾಚಿ ಬೇಡುವವರ ಕಂಡೆ.
ದೇಶದ್ರೋಹಿಗಳಾಗಿ ಅನೀತಿ ಅವ್ಯವಹಾರ
ಮಾಡಿ ಭಂಡತನದಿ ತಿರುಗುವವರ ಕಂಡೆ.
ಸಮಾಜ ಕಂಟಕರೆಲ್ಲ ಸಮಾಜ–
ಸೇವಕರೆಂದು ನಟಿಸುವವರ ಕಂಡೆ.
ಜಗದ್ರಕ್ಷಕ ಜಗದೇಕ ವೀರ
ಶಿವಶಕ್ತಿಪ್ರಿಯ ಶ್ರೀ ದೇವಸೂಗೂರ ವೀರೇಶ
ಈ ಸಮಾಜ ಕಂಟಕರಿಗೆ ಹೆಡಮುರಿಗೆ ಕಟ್ಟಿ
ಶಿಕ್ಷಿಸದೆ ಬಿಡನು ಇದು ಸತ್ಯ. ಇದು ಸತ್ಯ.

೧೫೫

ಹಸಿವೆಗೆ ಅನ್ನವನ್ನು, ತೃಷೆಗೆ ಜಲವನ್ನು ಅರಸುವುದು ಸಹಜ.
ಮಡದಿಗೆ ತೊಡುಗೆ, ಮಕ್ಕಳಿಗೆ ಉಡುಗೆಗಳ ಆಶಿಸುವುದು ಸಹಜ.
ಸನ್ಮಾರ್ಗದಲಿ ಸಂಪಾದನೆಯ ಕಾಯಕದೋಳಿರ್ಪ
ದೀನ ದಲಿತರನ್ನು ಆದರಿಸು.
ವ್ಯಸನಕ್ಕೆ ಬಿದ್ದು ಅಶನ ವಸನಗಳ ಮರೆತು
ನಶೆಯಲ್ಲಿ ಓಲಾಡುವುದು ಸರಿಯೇ?
ಸದ್ಗುಣ ಸದ್ವಿಚಾರಗಳಿಲ್ಲದ ಸಿರಿವಂತನಾದೊಡೇನು,
ಸಂಸಾರದಲಿ ಸಂಕಟವನಿಟ್ಟು ಸಮಾಜಕೆ ಕಂಟಕರಾಗುವ
ದುರಾಚಾರಿಗಳ ಸಹವಾಸವೇ ಬೇಡವೆಂದ ನಮ್ಮ ದಿವ್ಯಾತ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫೬

ಹಸಿವಿನಿಂ ಬಳಲಿ ಸತ್ತವರು ಕೆಲವರಂತೆ.
ಬಸಿರಿನಿಂ ಕೊರಗಿ ಸತ್ತವರು ಕೆಲವರಂತೆ.
ಉಸಿರಾಟಕ್ಕೆ ಕೊಸರಾಡಿ ಸತ್ತವರು ಕೆಲವರಂತೆ.
ಮೋಸಕ್ಕೆ ಬಲಿಯಾಗಿ ಸತ್ತವರು ಕೆಲವರಂತೆ.
ಹೊಸ ಹೊಸ ಕಲ್ಪನೆಯಲಿ ಸತ್ತವರು ಕೆಲವರಂತೆ.
ಕಾಸು ಖರ್ಚಿಲ್ಲದೆ ಭೂಕಂಪದಲಿ ಸಿಕ್ಕು ಮೂರು
ದಿನಾನಂತರ ಬದುಕಿದವರು ಇರುವರಂತೆ,
ಅಂತೆ ಕಂತೆಗಳೆಲ್ಲ ಶುದ್ಧ ಸುಳ್ಳು.
ಋಣ ಮುಗಿದಾದ ಮೇಲೆ ಕ್ಷಣ ಮಾತ್ರ ನಿಲ್ಲದು
ಪ್ರಾಣವೆಂದರಿಯಿರೆಂದ ಎನ್ನೊಡೆಯ ಅಘೋರ
ಮಹಾರುದ್ರ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೫೭

ಹಸಿವಾದೊಡೆ ಹೋಟೆಲ್ಗಳುಂಟು.
ತೃಷೆಯಾದೊಡೆ ಬಿಸ್ಲೇರಿಗಳುಂಟು.
ಶಯನಕೆ ಲಾಡ್ಜಳುಂಟು.
ಮೋಜುಮಸ್ತಿಗೆ ಬಾರುಕ್ಲಬ್ಬುಳುಂಟು.
ಮನಸ್ಸಂತೋಷಕೆ ಮೊಬೈಲ್ಗಳುಂಟು.
ಆಚಾರವಿಚಾರವಿಲ್ಲದ ಅವಿಚಾರಿಗಳ
ದೇಹ ಆಸ್ಪತ್ರೆಗೆ ಅಲೆದಾಡುವುದುಂಟು.
ದೈವವನ್ನು ಹಳಿಯುವ ಇಂತಪ್ಪ ಅಧರ್ಮಿಗಳ
ಸಹವಾಸವೇ ಬೇಡವೆಂದ, ಅಗಣಿತ ಗುಣಾಗ್ರಣಿ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೫೮

ಹಣೆಯಲ್ಲಿ ವಿಭೂತಿ ಇಲ್ಲ, ಕೊರಳಲ್ಲಿ ಲಿಂಗವಿಲ್ಲ.
ಗುರುಗಳಲ್ಲಿ ಶ್ರದ್ಧೆಯಿಲ್ಲ. ಬಾಯಲ್ಲಿ ಶಿವನಾಮವಿಲ್ಲ.
ಹಿರಿಯರಲ್ಲಿ ಗೌರವವಿಲ್ಲ. ನುಡಿಯಲ್ಲಿ ನೀತಿಯಿಲ್ಲ.
ನಡೆಯಲ್ಲಿ ರೀತಿಯಿಲ್ಲ.
ಶಿವಶಿವಾ ಇಂಥ ಅನಾಚಾರಿಗಳೆಂತು ವೀರಶೈವರಯ್ಯಾ
ಇಂಥ ಅನಾಗರೀಕರೆಂತು ಲಿಂಗವಂತರಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಸಂಸ್ಕಾರವಿಲ್ಲದವರೆಂದೂ ನಿಮ್ಮ ಪ್ರಜ್ವಲಿಪ ಘನತರ
ಪಾದಪದ್ಮಂಗಳ ಸ್ಪರ್ಶಕ್ಕೆ ಅರ್ಹರಲ್ಲವಯ್ಯ.

೧೫೯

ಹಪಹಪಿಸುವ ಮನ ಕುದಿಯುವುದು ದುರಾಲೋಚನೆಯಲಿ.
ಕೋಪಿಯ ಮನ ಉರಿಯುವುದು ದುರ್ಬುದ್ಧಿಯಲಿ,

ಪರಪೀಡನೆಯ ಮನ ನಡೆವುದು ದ್ವೇಷದ ಹಾದಿಯಲಿ.
ತಾಪಸಿಯ ಮನ ಉಕ್ಕುವುದು ಜನಕಲ್ಯಾಣದಲಿ.
ಶಾಂತಿಯ ನಡೆಯಲ್ಲಿ. ಜಪ ತಪ
ಪರೋಪಕಾರ ಬಯಸುವುದು.
ಕೋಪ ತಾಪ ಪಾಪ ಕೂಪಕ್ಕೆ ತಳ್ಳುವುದು
ಶತಸಿದ್ಧವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೬೦

ಹಲವು ಜಾತಿ, ಹಲವು ಭಾಷೆ, ಒಲವಿಲ್ಲದ
ಜನಗಳಿರುತಿರಲು ಏಕತೆಗೆ ಬಲವೆಲ್ಲಿ?.
ಕೆಲಸವಿಲ್ಲದ ಹೊಲಸು ಹಾದಿಯ ಹಿಡಿದ,
ಹುಂಬರ ಬಳಿ ಒಗ್ಗಟ್ಟಿನ ಮಾತೆಲ್ಲಿ.?
ಪುಂಡ ಪೋಕರಿಗಳ ಪೋಷಿಸುವ,
ಭಂಡ ಧೈರ್ಯದ ಮುಖಂಡರಿರಲು
ಅಭಿವೃದ್ಧಿಗೆ ಅವಕಾಶವೆಲ್ಲಿ, ?
ನಾಡು ನುಡಿ, ಗಡಿಯ ಬಡಿವಾರ ಮಾಡಿ ಬಡಿದಾಟ ಬಿಟ್ಟು,
ಮಾನವ ಧರ್ಮಕೆ ಜಯವಾಗಲಿ,
ಧರ್ಮದಿಂದಲೇ ವಿಶ್ವಕೆ ಶಾಂತಿ
ಎಂದರಿತು ನಡೆದಾಗ ಎಲ್ಲವೂ ಸುಗಮವೆಂದ ನಮ್ಮ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೬೧

ಹಣ ಇಲ್ಲದವ ಬಡವ, ಹಣ ಇದ್ದವ ಶ್ರೀಮಂತನೇ ?
ಬೇಕು ಎನ್ನುವವ ಭಿಕಾರಿ ಸಾಕು

ಎನ್ನುವವ ಶ್ರೀ ಮಂತನಲ್ಲವೇ ?
ಸಗುಣಗ್ರಾಹಿಗಳಾಗಿ, ಸ್ವಾರ್ಥದ ಬದುಕು
ತೊರೆದು, ನಿಸ್ವಾರ್ಥದ ನಡೆ ನಿಮ್ಮದಾದೊಡೆ
ಮೃಡನ ಕರುಣೆ ನಿಮಗಿಹುದೆಂದ ಪೊಡವಿಗೊಡೆಯ
ಕಡು ಚಲುವ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶ

೧೬೨

ಹಣವೇನು ಮಾಡುವುದು ಹಣೆಬರಹದ ಮುಂದೆ?
ಹಣೆಬರಹ ಅಳಿಸುವನೆನ್ನದಿರು
ಹೆಣವಾಗಿಸುವ ತ್ರಾಣ ಅದಕೆ,
ಒಣಮಾತೇನು ಮಾಡುವುದು ಅಣುವಿನ ಮುಂದೆ.?
ಅಣುವು ತೃಣವೆನ್ನದಿರು, ಕೆಣಕುವುದು ಲೋಕ,
ಮಣಿಸುವುದು ತೂಕ,
ನಾನು, ನನ್ನದು ನನ್ನಿಂದಲೇ
ಎಂದು ಭ್ರಮಿಸಿ ವಿಜೃಂಭಿಸದಿರು ಮನವೇ.
ಸಮಯ ಸಂದರ್ಭ, ಸುವ್ಯವಸ್ಥೆಯ ಧಣಿ,
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶನ
ಆಣತಿಯಂತೆ ಚಲಿಸುವದೆಂಬ ಸತ್ಯವನರಿತು,
ನಿತ್ಯವೂ ದೇವಾಧಿದೇವನಚರಣಂಗಳ ಭಜಿಸುತ್ತ
ನಮಿಸುತ್ತ ಹಾಯಾಗಿರು ಮನವೇ.

೧೬೩

ಹಸುಗೂಸಿನ ಮಾಸದ ನಸು
ನಗುವಿನಲಿ ಬಿಗುಮಾನವಿರುವುದೇ?
ಹಸುವಿನ ಹಾಲಿನಲಿ ವಿಷದಂಶ ಕಾಣುವುದೇ. ?

ನಿಜ ಭಕ್ತಿಯ ಮನದಲ್ಲಿ ಸಂಶಯ ಸುಳಿಯುವುದೇ?
ಎನ್ನೊಡೆಯ ಶಿವಶಕ್ತಿ ಪ್ರಿಯ
ಶ್ರೀ ದೇವಸೂಗೂರ ವೀರೇಶನ
ಭಜಿಸುವ ಮನುಜನಿಗೆ ಚಿಂತೆ
ಎಂದಾದರೂ ಕಾಡುವುದೇ?

೧೭೪

ಹರಕು ಚಾಪೆಯ ಮೇಲೆ ಗೊರಕೆಯ ನಿದ್ರೆ.
ಮುರುಕು ಮನೆಯಲ್ಲಿ ಸಂತೃಪ್ತ ಸಂಸಾರ.
ಮೈಬಗ್ಗಿ ದುಡಿದ ಮೈಕಟ್ಟು
ಪರಿಪೂರ್ಣತೆ ತುಂಬಿದ ಆರೋಗ್ಯ.
ಬದುಕಿನ ಹಂಗಿಲ್ಲದ ನಿರಾಳತೆ ಹೊದ್ದ ಸರಳ
ಜೀವನವು ಕರಾಳ ಜೀವನವೆನ್ನದಿರೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೭೫

ಹಸಿರು ವಸುಧೆಗೆ ಭೂಷಣ. ಉಸಿರು ಜೀವಿಗೆ ತಾರಣ.
ಬಸಿರು ವನಿತೆಗೆ ಭೂಷಣ.
ಕಸಿಯು ವಿಜ್ಞಾನಕ್ಕೆ ಪೋಷಣ.
ಹುಸಿಯು ಸಕಲಕೂ ಮಾರಣ.
ಇದನ್ನರಿತು ನಡೆಯುವವರ ಜೀವನ
ಪಾವನವೆಂದ ಎನ್ನೊಡೆಯ ಶಿವಶಕ್ತಿ
ಪ್ರಿಯ ಶ್ರೀ ದೇವ ಸೂಗೂರ ವೀರೇಶ.

೧೭೭

ಹದಿಹರೆಯದ ಮನ ಬಿಸಿಯುಳ್ಳ
ಹಸಿ ಬಯಕೆಯ ಹಾಡು,
ಮುದಿತನ ಬೆರೆತಮನ ಬಲವಿಲ್ಲದ ನೆಲಕಚ್ಚಿದ ಗೂಡು.
ಮದವರಿಯದ ಮುಗ್ಧ ಮನ
ಮಹಾದೇವನು ಆಶ್ರಯಿಸುವ ಜಾಡು.
ಹದವರಿತ ಅನುಭಾವದ ಅಲೆಗಳು
ಎನ್ನೊಡೆಯ ಅನಂತ ಫಲದಾಯಕ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪರಮಪಾವನ ಪಾದಗಳಿಗೆ ಸಲ್ಲುವವು ನೋಡು.
ಇದನರಿತು ಆಸೆಗಳ ಕಳೆದು
ಮೋಸಗಳ ಬಿಸುಟು ಬಾಳು ಮನವೇ

೧೭೮

ಹದಿನೆಂಟರ ಹರೆಯದಲಿ ಹುರುಪಿನ ಹುಡುಗಾಟ.
ಇಪ್ಪತ್ನಾಲ್ಕಕ್ಕೆ ತಪ್ತಮನಕೊಂದು
ಸಂಗಾತಿಯ ಹುಡುಕಾಟ.
ಮುವ್ವತ್ತಾರಕ್ಕೆ ಮಕ್ಕಳದ್ದೇ ಕಿರುಚಾಟ.
ಐವತ್ನಾಲ್ಕಕ್ಕೆ ಸವಲತ್ತು ಕೈಕೊಟ್ಟ ಸಂಕಟ.
ಎಪ್ಪತ್ತೆರಡಕ್ಕೆ ಹಾದಿತಪ್ಪಿದೆನೆಂಬ ಮಿಡುಕಾಟ.
ಸದ್ವಿಚಾರ ಸತ್ಸಂಗಕ್ಕೆ ಮನಮಿಡಿಯದ ಜೀವಿಗಳಿಗೆ
ಆಯುಷ್ಯ ಪರ್ಯಂತ ದೈವದ ನೆಲೆಯೇ ಕಾಣದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೭೮

ಹಾವಿಂಗೆ ಹಲ್ಲಲ್ಲಿ ವಿಷವಿರ್ಪುದು.
ಚೇಳಿಂಗೆ ಬಾಲದಲ್ಲಿ ವಿಷವಿರ್ಪುದು.
ಮತ್ಸರಿಪ ಮನುಜಂಗೆ ಮೈಯೆಲ್ಲಾ ವಿಷವಿರ್ಪುದು.
ವಿಷದ ವೈಪರಿತ್ಯ ವಿವಿಧ ಸಂಕಷ್ಟಕ್ಕೆ ಹಾದಿಯಾಗುವುದು.
ವಿಷಜಂತುಗಳ ಸಹವಾಸ ಆಪತ್ತಿಗೆ ಆಹ್ವಾನ.
ಇಂಥಹ ಮರುಳ ಮಾತಿಗೆ ಸಿಲುಕಿ ನಲುಗ ಬೇಡಿರೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ

೧೭೯

ಹಿರಿಯರನು ಆದರಿಸದ ಮನೆಯಿದ್ದೇನು ಫಲ. ?
ಗುರುಗಳನು ಗೌರವಿಸದ ಶಿಷ್ಯರಿದ್ದೇನು ಫಲ.?
ಸಭ್ಯತೆಯನರಿಯದ ಸರಕಾರವಿದ್ದೇನು ಫಲ.?
ಸಂಸ್ಕೃತಿಯಿಲ್ಲದ ಶಿಕ್ಷಣ ಪಡೆದರೇನು ಫಲ, ?
ಊಡದ ಆವಿಂಗೆ ಉಣ್ಣದ ಕರು ಬಿಟ್ಟಂತಾಯಿತಲ್ಲ,
ಶಿವಶಿವಾ ಕೆಲಸಕ್ಕೆ ಬಾರದ ಸ್ಥಳದಲ್ಲಿ ಬಾಳುವುದೆಂತು ಹೇಳಯ್ಯಾ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶಾ.

೧೮೦

ಹಿರಿಯರ ಮಾತು ಸರಿದಾರಿ ತೋರಿದಂತೆ.
ಗುರುಗಳ ಮಾತು ವರವಾಗಿ ಪೊರೆದಂತೆ..
ಅನುಭಾವಿಗಳ ಮಾತು ತನುಮನ ಪರಿಶುದ್ಧಗೊಳಿಸಿದಂತೆ.
ಸಜ್ಜನರ ಮಾತು ದುರ್ಜನರಿಂದ ದೂರವಿರಿಸಿದಂತೆ.
ಉತ್ತಮರ ಸಂಗದಲಿರ್ದವರಿಗೆ ಸಂಗಯ್ಯನೊಲುಮೆ
ಸುಲಭವೆಂದ ಎನ್ನೊಡೆಯ ಚಿನ್ಮಯಜ್ಞಾನಿ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೮೧

ಹಿಗ್ಗಿನಿಂದಲಿ ಮಾಡುವ ಕೆಲಸ ಪರಿಪೂರ್ಣ.
ಕುಗ್ಗಿದ ಮನದಿಂದಾಗುವುದು ಅಪೂರ್ಣ.
ಆಗು ಹೋಗುಗಳಿಗೆ ಬಗ್ಗದೇ ನುಗ್ಗಿದರೆ
ಜಯದ ಸುಗ್ಗಿ ನಿನಗಿಹುದು.
ಸತ್ಕಾರ್ಯದಲಿ ಮನವಿಟ್ಟು ಜಗ್ಗದೇ ಕುಗ್ಗದೇ
ಮುನ್ನುಗ್ಗಿ ನಡೆದೊಡೆ ಸಗ್ಗದಾ ಬಾಗಿಲು ತೆಗೆದಿಹುದೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೮೨

ಹುಸಿಯನಾಡಿದರೆ ಉಸಿರು ಉಳಸುವಂತಿರಬೇಕು,
ಮಸಿ ಬಳದರೆ ಅಸಲು ವಿಷಯ ನಶಿಸದಂತಿರಬೇಕು.
ಕಾಸಿನ ಆಸೆಗೆ ಬಿದ್ದರೆ ಪರರ
ದೂಷಣೆಗೆ ಒಳಗಾಗದಂತಿರಬೇಕು.
ಹಚ್ಚಹಸಿಮನಸಿದ್ದರೆ ಮುಗ್ಧ ಹಸುಗೂಸಿನಂತಿರಬೇಕು.
ಅಶಿಕ್ಷಿತನಾದರೆ ಶೋಷಿತ ಜನರಿಗೆ
ಆಸರೆಯಾಗುವ ಮನಸ್ಸಿರಬೇಕು.
ಸಮಯ ಸಂದರ್ಭಕ್ಕನುಸರಿಸಿ ಸರಿಯಾದ ಹೆಜ್ಜೆ
ಹಾಕುವವರಿಗೆ ಬದುಕು ಒಜ್ಜೆಯಾಗದೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೮೩

ಹುಟ್ಟು ಜಗದಲಿ ಹೊಸ ತನದ ಸೃಷ್ಟಿ.
ಕಷ್ಟಗಳ ಸರಿಸಿ ಹರ್ಷ ನೀಡುವ ಪುಷ್ಟಿ.
ಕಟ್ಟಿರುಳಲಿ ಹೊಟ್ಟೆಗೆ ಇಲ್ಲದಿದ್ದರೂ ದುಡಿದು

ಕೂಡಿಟ್ಟಷ್ಟು ಐಶ್ವರ್ಯ ಕಾಶಿಸುವದು ನಮ್ಮ ದೃಷ್ಟಿ..
ಹುಟ್ಟಿನ ಬೆನ್ನಟ್ಟಿ ನಿಂತಿದೆ ವಿನಾಶ.
ಇಂದು ಹೇಗೋ ನಾಳೆ ಏನೋ ತಿಳಿಯದು ಬದುಕು.
ಆದರೂ ಕಟ್ಟಕಡೆಯ ಬಟ್ಟಬಯಲು
ಮುಟ್ಟುವ ತನಕ ಬಿಟ್ಟಿಲ್ಲ ಗಟ್ಟಿ ಪ್ರಯತ್ನ.
ಹುಸಿ ಪ್ರಪಂಚವ ನೆಚ್ಚಿ ,ವ್ಯರ್ಥ ಜೀವನ ಕಳೆವವರ
ಕಂಡು ಮುಸಿ ಮುಸಿ ನಗುವ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೭೪

ಹುಚ್ಚರೊಡನೆ ಎಚ್ಚರದಿ ಮಾತನಾಡಬಹುದಾದರೂ
ಮೂರ್ಖರೊಡನಾಟ ಬಲು ಕಷ್ಟ.
ಮೂರ್ಖರೊಡನೆ ತಕ್ಕಷ್ಟು ವ್ಯವಹರಿಸಬಹುದಾದರೂ,
ಗರ್ವಿಷ್ಟರೊಂದಿಗೆ ಕೂಡಿರುವುದು ಅತಿ ಕಷ್ಟ.
ಸಂಸ್ಕಾರವಿಲ್ಲದವರೊಡನೆ ಸಂಬಂಧ ಬೆಳೆಸಿ ಸಂಕಷ್ಟಕ್ಕೀಡಾಗಿ
ನರಳುವುದಕ್ಕಿಂತ ಏಕಾಂಗಿಯಾಗಿ ಬಾಳುವುದೇ ವಿಹಿತವೆಂದ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೭೫

ಹುಟ್ಟು ಹಬ್ಬವು ಸಂಭ್ರಮ ಹೆಚ್ಚಿಸುವುದು.
ಕಟ್ಟು ನಿಟ್ಟಿನ ನಿಯಮ ತೊಡೆದು ಹಾಕುವುದು.
ಹೆತ್ತವರಿಗೆ ಸ್ಫೂರ್ತಿ, ಮನೆತನಕ್ಕೆ ಸತ್ಕೀರ್ತಿ ನಿನ್ನಿಂದ ಮಗು.
ಗುರುವಿಂಗೆ ಶರಣಾಗಿ ಹಿರಿಯರಿಗೆ ಶಿರಬಾಗಿ ಸದಾಚಾರದಿ ಸಾಗು.
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ
ವೀರೇಶನ ಪ್ರಜ್ವಲಿಪ ಪಾದ ಪದ್ಮಂಗಳ ಬಿಡದೆ ಭಜಿಸು.
ಸಾರ್ಥಕ ಬದುಕಿನಲಿ ದೊರೆಯುವುದು ನಿನಗೆ ಸದಾ ನಗು.

೧೭೬

ಹೃದಯದ ಮೂಲೆಯಲ್ಲಿ, ಭ್ರಕುಟಿಯ ಮಧ್ಯದಲಿ,
ನಾಡಿ ಮಿಡಿತದ ಒಡಲಲ್ಲಿ, ಎಲ್ಲಿ ಹುಡುಕಿದರಿಲ್ಲ ಜೀವ.
ತಿನ್ನುವ ಅನ್ನ ಕುಡಿವ ಜಲ
ಉಸಿರಾಟದ ಗಾಳಿಯಲ್ಲಿಲ್ಲ ಜೀವ
ಎಲ್ಲರನ್ನು ಸಲುಹುವ ದೈವದ ಕೈಯಲ್ಲಿ ಇದೆ ಜೀವ,
ಇದನರಿಯದ ಮೂಢರನು ಕಜೀವ ಕಿಲಕಿಲ ನನಗುವ
ನಮ್ಮ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು ವೀರೇಶ

೧೭೭

ಹೆದರಿಕೆಯಿಂದ ಸತ್ಯದ ಅವನತಿ.
ಬೆದರಿಕೆಯಿಂದ ಅಸತ್ಯದ ಉನ್ನತಿ.
ಅಚಲ ಆತ್ಮವಿಶ್ವಾಸದಬಲದಿಂದ ಗೆಲುವು.
ಅದು ಕಾರಣ ಅಂಜದೆ ಅಳುಕದೆ ಸತ್ಯದ ಹಾದಿಯಲ್ಲಿ
ನಿತ್ಯ ಸಾಗಿ ಮುಕ್ತಿ ಪಡೆಯಬೇಕೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೭೮

ಹೆದರಿಕೆಗೆ ಬೆದರಿದರೆ ಬದುಕುವುದು ಬಲುಕಷ್ಟ.
ಕದನದಲಿ ಹಿಂದೆ ಸರಿದರೆ ಗೆಲ್ಲುವುದು ಕಷ್ಟ.
ಸದ್ಧರ್ಮದ ಹಾದಿಯಲಿರುವಾಗ
ಬಗ್ಗದೆ ಕುಗ್ಗದೆ ನಡೆದರೆ ಆಗದು ಕಷ್ಟ.
ಸದ್ಭಾವದಿ ನಡೆವ ಸಜ್ಜನರಿಗೆ ಎನ್ನೊಡೆಯ ಜಗದೇಕ ವೀರ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ
ಕರುಣದಿ ಕಾಪಾಡುವುದು ಸತ್ಯ. ಇದು ಸತ್ಯ.

೧೭೯

ಹೆಣ್ಣುಜಗದ ಕಣ್ಣು ಕಣಣ್ಣಾ.
ಹೆತ್ತವರಿಗೆ ಕುತ್ತಾಗದೆ ನಿತ್ಯ ಬಾಳುವಳು.
ಸತ್ಯಕೆ ತಲೆಬಾಗಿ ಮಿಥ್ಯಕೆ ಸಿಡಿದೆದ್ದು,
ಜತನದಿ ಬಾಳು ಬೆಳಗುವಳು.
ಬಣ್ಣಗೆಟ್ಟ ಸಂಸಾರಕೆ ಕಾಯಕಲ್ಪ ನೀಡುವಳು.
ಚಿಣ್ಣರ ನಗುವಿಗೆ ಚಂದಿರ ತೋರುವಳು.
ಹೆಣ್ಣು ಸಂಸ್ಕೃತಿ ಸಂಸ್ಕಾರದ ಸುಂದರ ಮಾತೆಯವಳು.
ಹೆಣ್ಣು ಮಾಯೆಯಲ್ಲ, ಮಾತೆಯವಳು ಮಣ್ಣಿನಾಗುಣದ
ತಣ್ಣನೆಯ ಭೂದೇವಿ ಅವಳೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೮೦

ಹೆತ್ತಮ್ಮನ ಮುತ್ತಿನಲ್ಲಿ, ಹತ್ತಾನೆ ಬಲವುಂಟು.
ಒತ್ತಿಚಿಮ್ಮುವ ವಾತ್ಸಲ್ಯದ ಚಿಲುಮೆಯುಂಟು.
ಸತ್ಯದಾ ನೆಲೆಯಲ್ಲಿ, ಕತ್ತೆತ್ತಿ ಬಾಳುವ ಛಲವುಂಟು,
ಗುರು ಲಿಂಗ ಜಂಗಮವ ಆದರಿಸಬೇಕೆಂಬ ಸತ್ವಥವುಂಟು.
ಅದು ಕಾರಣ ಹತ್ತಾರು ದೈವಗಳಿಗೂ ಮಿಗಿಲು ನಮ್ಮಮ್ಮ
ಎಂಬ ನಿಜ ಶರಣಂಗೆ ಕೈ ಮುಗಿವೆನಯ್ಯ
ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ,

೧೮೧

ಹೊಗಳಿಕೆಗೆ ಹಿಗ್ಗುವುದು. ಸಗ್ಗಕ್ಕೆ ಮೂರೇ ಗೇಣು ಎನ್ನುವುದು.
ತೆಗಳಿಕೆಗೆ ಕುಗ್ಗುವುದು. ಪ್ರಪಾತಕ್ಕೆ ಕುಸಿದಂತಾಗುವುದು.
ಆಗುಹೋಗುಗಳಿಗೆ ಹೆದರುವುದು, ಎದೆಗುಂದಿ ಬಗ್ಗುವುದು.

ಇದು ಸಾಮಾನ್ಯರ ಜೀವನ, ಸತ್ಯದ ಹಾದಿಯಲ್ಲಿ ನಡೆಯುವ
ಸದ್ಭಾವಿ ಶರಣ ಶುದ್ಧ ಕಾಯಕದಿಂದ ಮುನ್ನುಗ್ಗಿ ಗುರಿ
ತಲುಪುವುದು ಸಾರ್ವಕಾಲಿಕ ಸತ್ಯವೆಂದ ಎನ್ನೊಡೆಯ
ಶಿವಶಕ್ತಿ ಪ್ರಿಯ ಶ್ರೀ ದೇವ ಸೂಗೂರ ವೀರೇಶ.

೧೮೨

ಹೊಟ್ಟೆಗೆ ಕದ್ದ ರೊಟ್ಟಿಯು ಅಪರಾಧವೆನಿಸಿ ಶಿಕ್ಷೆ ಪಡೆವರಯ್ಯಾ.
ಕಟ್ಟು ನಿಟ್ಟಿನಲಿ ಭೂಮಿಯ
ನುಂಗುವವರು ನಿರಾಳವಾಗಿರುವರಯ್ಯಾ,
ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಕೆಟ್ಟಕೆಲಸಕ್ಕೆ
ಕೈ ಹಾಕುವುದು ಬೇಡವಯ್ಯಾ,
ದುಷ್ಟ ಮಾರ್ಗದಿ ಜುಟ್ಟಿಗೆ ಚಿನ್ನದ ಹೂಮಾಲೆ
ಸಿಕ್ಕಿಸುವ ಸೊಕ್ಕಿನ ವರ್ತನೆ ಸರಿ ಏನಯ್ಯಾ,
ಪುಢಾರಿಗಳ ಪುಂಡಾಟಿಕೆ, ಗುಟ್ಟಾಗಿ ಲೂಟಿ ಮಾಡಿದ
ಖದೀಮರ ಆಟ ಬಟ್ಟ ಬಯಲಿಗೆಳೆದು ಮಟ್ಟ ಹಾಕುವ
ಎನ್ನೊಡೆಯ ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರ ವೀರೇಶ.

೧೮೩

ಕ್ಷಣಕ್ಷಣಕ್ಕೂ ಮನ ಕುಣಿಯುತಿದೆ. ಕಾಂಚಾಣಕ್ಕಾಗಿ ವಂಚನೆ.
ಗುಣಕ್ಕಾಗಿ ಹೆಣಗಾಟ, ತೃಣಕ್ಕಾಗಿ ತಿಣುಕಾಟ,
ಪ್ರತಿಷ್ಠೆಗಾಗಿ ಪರದಾಟ ಮಾಡುತಿದೆ.
ಎಲ್ಲವೂ ಕಾಲನ ಸಲ್ಲೀಲೆ ಎನುತಿದೆ.
ಜಗದಾದಿ ಜಗದ್ಗುರು ಶಿವಶಕ್ತಿ ಪ್ರಿಯ ಶ್ರೀ ದೇವಸೂಗೂರು
ವೀರೇಶನ ಅಪ್ರತಿಮ ಪ್ರಜ್ವಲಿಪ ಪಾದಗಳಲ್ಲಿ ಶರಣಾದೊಡೆ
ಈ ಮನಕೆ ಶಾಶ್ವತ ಶಾಂತಿ
ದೊರೆಯುವುದು ಸತ್ಯ ನೋಡಾ.